# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಮೇ, ೨೦೨೧ ಸಂಪಾದಕ : ಡಿ. ಎಸ್. ನಾಗಭೂಷಣ ಸಂಪುಟ: ೧೦ ಸಂಚಿಕೆ: ೪

ಚಂದಾ ರೂ. ೨೦೦/- (೨೦೨೧ರ ಏಪ್ರಿಲ್‌ನಿಂದ ೨೦೨೨ರ ಮಾರ್ಚ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ.-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೪೯೨ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ದೇಶ ಕೋವಿಡ್-೧೯ರ ದಳ್ಳುರಿಯಲ್ಲಿ ಬೇಯುತ್ತಿರುವ ಈ ಹೊತ್ತಿನಲ್ಲಿ ೧೯೩೪ರಲ್ಲಿ ಬಿಹಾರದಲ್ಲಿ ಸಂಭವಿಸಿದ ಭಾರಿ ಭೂಕಂಪದ ಸಂದರ್ಭದಲ್ಲಿ ಮಹಾತ್ಮ ಗಾಂಧಿ ಹೇಳಿದ ಒಂದು ಮಾತು ನೆನಪಿಗೆ ಬರುತ್ತಿದೆ. ಆಗ ಹರಿಜನ ಪ್ರವಾಸದಲ್ಲಿದ್ದ ಅವರು ಈ ಭೂಕಂಪದ ಬಗ್ಗೆ ಹೇಳಿದ ಮಾತೆಂದರೆ, 'ಇದು ದೇಶ ಆಚರಿಸುತ್ತಿರುವ ಅಸ್ಪೃಶ್ಯತೆ ಆಚರಣೆಯ ಫಲ.' ಸಹಜವಾಗಿಯೇ ಇದಕ್ಕೆ ದೇಶಾದ್ಯಂತ ಟೀಕೆಗಳು ಕೇಳಿ ಬಂದವು. ಗಾಂಧಿಯವರ ಅಭಿಮಾನಿಯಾಗಿದ್ದ ಸ್ವತಃ ರವೀಂದ್ರನಾಥ ಠಾಕೂರರೇ ಇದು ಮೌಢ್ಯದ ಮಾತು ಎಂದು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಗಾಂಧಿ ನೀಡಿದ ಪ್ರತಿಕ್ರಿಯೆ ಹೀಗಿತ್ತು; 'ನಾನು ಮೂಢನಾಗಿಯೇ ಉಳಿದು ಮನುಷ್ಯನ ಪಾಪ ಕಾರ್ಯಗಳ ಪರಿಣಾಮಗಳನ್ನು ಗಮನಿಸಬಯಸುತ್ತೇನೆ, ಭೌತ ಮತ್ತು ಅಭೌತಗಳು ಬೇರೆಯಾಗಿರದೆ ಒಂದಕ್ಕೊಂದು ಸಂಬಂಧಪಟ್ಟಿದ್ದು ಈ ಸಮೀಕರಣದ ಪ್ರಕಾರವೇ ಜಗತ್ತಿನಲ್ಲಿ ಘಟನೆಗಳು ನಡೆಯುತ್ತವೆ'.

ಗಾಂಧಿಯೇನೂ ಅವೈಜ್ಞಾನಿಕರಾಗಿರಲಿಲ್ಲ. ಕಾರ್ಯ ಕಾರಣ ಸಂಬಂಧಗಳ ಬಗ್ಗೆ ಅವರಿಗ ತಿಳಿದಿತ್ತು. ಆದರೆ ಆ ಸಂಬಂಧ ಹಲವು ಮಿತಿಗಳ ಇಂದ್ರಿಯ ಸಾಕ್ಷ್ಯಗಳ ನೆಲೆಯಿಂದಲೇ ರೂಪುಗೊಂಡಿರುತ್ತದೆ ಎಂದು ಅವರು ನಂಬಿರಲಿಲ್ಲ, ಸತ್ಯ ಕೇವಲ ತಾರ್ಕಿಕವಾಗಿರದೆ ಹೃದಯಪೂರ್ವಕವಾಗಿಯೂ ಇರಬೇಕು ಎಂದು ಅವರು ಭಾವಿಸಿದ್ದರು, ಹರಿಜನ ನಿಧಿ ಸಂಗ್ರಹದ ಪ್ರವಾಸದಲ್ಲಿದ್ದ ಅವರ ಮನಸ್ಸಿನ ತುಂಬ, ಹೃದಯದ ತುಂಬ ಅಸ್ಪೃಶ್ಯತೆಯ ಆಚರಣೆಯನ್ನು ಕುರಿತ ವಿಷಾದ ಮತ್ತು ದುಃಖಗಳು ತುಂಬಿದ್ದವು. ಹಾಗಾಗಿ ಹೃದಯದ ಮಾತಾಗಿ ಅವರಿಂದ ಆ ಮಾತು ಹೊರಹೊಮ್ಮಿತ್ತು, ಆದರೆ ಈ ಮಾತು ಹೇಳಿ ಅವರು ಅದನ್ನು ನಿರ್ಲಕ್ಷಿಸಲಿಲ್ಲ. ಹರಿಜನ ನಿಧಿಯ ಜೊತೆಗೇ ಬಿಹಾರ ಭೂಕಂಪ ನಿಧಿಯ ಸಂಗ್ರಹಿಸಿ ಬಿಹಾರಕ್ಕೆ ಬಂದು ಆ ಹಣವನ್ನು ಭೂಕಂಪ ಪರಿಹಾರ ಸಮಿತಿಗೆ ನೀಡಿದ್ದಲ್ಲದೆ ಪರಿಹಾರ ಕಾರ್ಯಗಳ ಉಸ್ತುವಾರಿಗೂ ನಿಂತರು,

ಈ ಎಲ್ಲ ಸಂಗತಿಯನ್ನು ಈಗ ಇಲ್ಲಿ ಹೇಳಲು ಕಾರಣವೆಂದರೆ ಕೋವಿಡ್-೧೯ ಮಾಡುತ್ತಿರುವ ಈ ಭಯಂಕರ ಅನಾಹುತಕ್ಕೂ ನಾವು ರೂಢಿಸಿಕೊಂಡಿರುವ ಜೀವನಕ್ರಮಕ್ಕೂ, ಅಂದರೆ ಇದನ್ನು ನಿರ್ಧರಿಸುತ್ತಿರುವ ನಾವು ನಂಬಿಕೊಂಡಿರುವ 'ಅಭಿವೃದ್ಧಿ' ನೀತಿಗೂ ಸಂಬಂಧವಿದೆ ಎಂದು ಹೇಳಲು. ಇದು ನನ್ನ ಮಾತಲ್ಲ. ಹಲವು ಪ್ರಾಜ್ಞರು ಹೇಳುತ್ತಿರುವ ಮಾತು ಮತ್ತು ಇದು ಕೇವಲ ಹೃದಯದ ದನಿ ಮಾತ್ರವಲ್ಲದೆ, ಇದಕ್ಕೆ ಅಧ್ಯಯನದ ಬೆಂಬಲವೂ ಇದೆ. ೨೦೧೨ರಲ್ಲಿ ಪ್ರಕಟವಾದ ಡೇವಿಡ್ ಕಮ್ಮೆನ್ ಎಂಬ ಜೀವವಿಜ್ಞಾನಿಯ ಪುಸ್ತಕ 'Spillover: animal infections and the next human pandemic' ಇದನ್ನು ಸಾಕಷ್ಟು ನೇರವಾಗಿಯೇ ಹೇಳುತ್ತದೆ. ತುಂಬಿ ತುಳುಕಿ, ಅಂದರೆ ಮಿತಿ ಮೀರಿದ ಅಭಿವೃದ್ಧಿ ಚಟುವಟಿಕೆಗಳು ನಮ್ಮ ಸಹಜೀವಿಗಳಾದ ಪ್ರಾಣಿ ಸಂಕುಲದ ಬದುಕನ್ನು ಸಂಕಷ್ಟಕ್ಕೀಡು ಮಾಡಿ ಹಲವು ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತದೆ ಎಂದು ಅವನು ಹೇಳಿದ್ದ. ಮುಂದುವರೆದು ಆತ 'ಶೀಘ್ರದಲ್ಲೇ ನಾವು ಒಂದು ವೈರಸ್‌ನೊಂದಿಗೆ ಸೆಣಸಾಡಬೇಕಾಗಬರಬಹುದು. ಆ ವೈರಸ್ ನಾವು ಅಳಿವಿನ ಅಂಚಿಗೆ ತಂದಿರುವ ಬಾವಲಿಗಳಿಂದ ಬರಬಹುದು' ಎಂದೂ ಎಚ್ಚರಿಸಿದ್ದ. (ಇದರ ಸುತ್ತಮುತ್ತ ಪೆಗ್ಗಿ ಮೋಹನ್ ಎಂಬುವವರು ಬರೆದ ಲೇಖನವೊಂದರ ಕನ್ನಡಾನುವಾದ 'ನಿಧಾನಿಸಿ; ಅದಕ್ಕಿದು, ಇದು ಸಕಾಲ' ನಮ್ಮ ಪತ್ರಿಕೆಯ ಕಳೆದ ವರ್ಷದ ಮೇ ಸಂಚಿಕೆಯಲ್ಲಿ ಪ್ರಕಟವಾಗಿದ್ದು ಓದುಗರು ಮತ್ತೆ ಅದನ್ನು ಗಮನಿಸಬಹುದು.) ಆದರೆ ಕೋವಿಡ್ ಕುರಿತ ಚರ್ಚೆಗಳಲ್ಲಿ ಇದು ಮುನ್ನೆಲೆಗೆ ಬರಲಿಲ್ಲ ಏಕೆ? ಏಕೆಂದರೆ ಅದಕ್ಕೆ ನೇರವಾಗಿ ಕಣ್ಣಿಗೆ ಕಾಣುವ ಸಾಕ್ಷ್ಯಗಳು ಇಲ್ಲ. ಕೋವಿಡ್ ಮೊದಲು ಕಾಣಿಸಿಕೊಂಡದ್ದು ಕೈಗಾರಿಕೀಕರಣದ ತುತ್ತ ತುದಿಯ ತಾಣವೆನಿಸಿರುವ ಚೀನಾದ ವುಹಾನ್ ನಗರದಲ್ಲಿ; ನಂತರ ಅದು ಅಲ್ಲಿಂದ ಜಗತ್ತಿನ ವಿವಿಧೆಡೆಗೆ ಹೋದ ವಿಮಾನ ಪ್ರಯಾಣಿಕರಿಂದ ಹರಡಿತು ಎಂಬಮಾಹಿತಿಯೂ 'ವೈಜ್ಞಾನಿಕ'ವಾಗಿ ಸಮರ್ಪಕವೆನ್ನಿಸುವ ಸಾಕ್ಷ್ಯವಲ್ಲ! ಮುಖ್ಯ ಮಾತೆಂದರೆ, ಆಗ ಅಸ್ಪೃಶ್ಯತೆಯ ಸಮಸ್ಯೆ ಗಾಂಧಿಯವರನ್ನು ಕಾಡಿ ಅವರ ಹೃದಯವನ್ನು ಆಕ್ರಮಿಸಿಕೊಂಡಂತೆ ಅಭಿವೃದ್ಧಿ ಎಂಬುದು ಹೃದಯವನ್ನು ತುಂಬಿಕೊಳ್ಳುವುದಿರಲಿ, ನಮ್ಮ ಆಳುವ ವರ್ಗ ಮಾತ್ರವಲ್ಲ; ಸಾಮಾನ್ಯ ಜನಕ್ಕೂ ಒಂದು ಸಮಸ್ಯೆಯಾಗಿಲ್ಲ; ಬದಲಿಗೆ ಒಂದು ವರವಾಗಿಯೇ ಕಾಣುತ್ತಿದೆ. ಹಾಗಾಗಿಯೇ ಜಗತ್ತು ಕೋವಿಡ್ ವೈರಸ್ಸನ್ನು ಲಸಿಕೆಗಳ ಮೂಲಕ, ವಿವಿಧ ಚಿಕಿತ್ಸಾ ಕ್ರಮಗಳ ಮೂಲಕ ನಿರ್ನಾಮ ಮಾಡಲು ಹೋಗಿ ಬಸವಳಿದಿದೆ, ಮೂಲ ಕಾರಣ ಅಮುಖ್ಯವಾಗಿದೆ, 'ಅಭಿವೃದ್ಧಿ'ಯ, ಅದನ್ನು ಲಾಭಕೋರ ಧಂಧೆಯಾಗಿ ಮಾಡಿಕೊಂಡಿರುವ ಲಾಬಿ ಸೃಷ್ಟಿಸಿರುವ ಮಾಯೆ ಅಂತಹುದು. ಇದರ ಹಿಂದೆ ಇರುವುದು ಸುಖ ಮನುಷ್ಯನ ಆಜನ್ಮ ಸಿದ್ಧ ಹಕ್ಕು; ಅದು ಪಾಪವಲ್ಲ ಎಂಬ ಆಧುನಿಕ ನಾಗರೀಕತೆ ಬಿತ್ತಿರುವ ನಂಬಿಕೆ. ಇದು ಸಾವಿರಾರು ವರ್ಷಗಳ ಕಾಲದ ಬದುಕು ರೂಢಿಸಿಕೊಟ್ಟಿದ್ದ ಒಂದು ಮೌಲ್ಯ ವ್ಯವಸ್ಥೆಯನ್ನೇ ಬದುಕಿನ ಒಂದು ತಾತ್ವಿಕತೆಯನ್ನೇ, ಗುರಿಯನ್ನೇ ತಲೆಕೆಳಗು ಮಾಡಿದೆ.

ಸುಖ ಬೇಡವೆಂದರಾರು? ಆದರೆ ಅದಕ್ಕೊಂದು ಮಿತಿ ಬೇಕಲ್ಲವೆ? ಆ ಮಿತಿಯಾದರೂ ಯಾತಕ್ಕೆ? ಅದು ಮನುಷ್ಯನ ಸಹಜೀವಿಗಳ ಬದುಕಿಗೆ ಕುತ್ತು ತರುವುದೆಂದು. ಆಧುನಿಕ ನಾಗರೀಕತೆ ಎನ್ನಿ, ಕೈಗಾರಿಕೀಕರಣ ಎನ್ನಿ, ಯಂತ್ರೀಕರಣವೆನ್ನಿ, ನಗರೀಕರಣವೆನ್ನಿ, ಗ್ರಾಹಕವಾದವೆನ್ನಿ, ಜಾಗತೀಕರಣವೆನ್ನಿ, ಮುಕ್ತ ಮಾರುಕಟ್ಟೆ ಎನ್ನಿ, ಎಲ್ಲವೂ ದುರಾಶೆಗೆ, ಸ್ವಾರ್ಥಕ್ಕೆ, ಸ್ಪರ್ಧಾತ್ಮಕ ಸುಖಕ್ಕೆ ಇನ್ನೊಂದು ಹೆಸರು. ಹಾಗೆಂದೇ ಗಾಂಧಿ ಈ ಆಧುನಿಕ ನಾಗರೀಕತೆ ಯೌವನಾವಸ್ಥೆಗೆ ಬರುತ್ತಿದ್ದ ನೂರುವರ್ಷಗಳ ಹಿಂದೆಯೇ ತಮ್ಮ ದ್ರಷ್ಟಾರ ದೃಷ್ಟಿಯ ಕಿರುಪುಸ್ತಕ 'ಹಿಂದ್ ಸ್ವರಾಜ್'ನಲ್ಲಿ 'ಅಧರ್ಮ' ಎಂದು ಕರೆದಿದ್ದರು. ಇದನ್ನು ಎದುರಿಸಲು ಎಲ್ಲ ದಾರ್ಶನಿಕರಂತೆಯೇ ಅವರೂ ಒಂದು ಅತಿಗೆ ಹೋಗಿ ಸ್ವಯಂಪ್ರೇರಿತ ಬಡತನದ ಆದರ್ಶವನ್ನು ಪ್ರತಿಪಾದಿಸಿದ್ದರು. ಆದರೆ ಆಧುನಿಕತೆ ಏರಿಸುವ ನಶೆ ಎಂತಹುದು ಮತ್ತು ಎಷ್ಟು ದೀರ್ಘವಾದುದೆಂದರೆ, ದಾರ್ಶನಿಕ ಕೃತಿಯೊಂದನ್ನು ಓದುವ ಬಗೆಯನ್ನೇ ಮರೆತವರಂತೆ ಅಂದಿನ ಆಧುನಿಕತಾವಾದಿ ನೆಹರೂರಿಂದ ಹಿಡಿದು ಇಂದಿನ ಆಧುನಿಕತಾವಾದಿ ಆಕಾರ್ ಪಟೇಲರವರೆಗೆ ಇದನ್ನು ಅಸಂಬದ್ಧ ವಿಚಾರಗಳ ಕೃತಿಯೆಂದೇ ವ್ಯಾಖ್ಯಾನಿಸುತ್ತಾ ಬಂದಿದ್ದಾರೆ. (ನೋಡಿ, ೧೧.೪.೨೦೨೧ರ 'ದ ಹಿಂದೂ' ಪುರವಣಿ) ಕಳ್ಳನನ್ನು ಹಿಡಿಯಲು ಓಡಲಾರಂಭಿಸಿದ ಪೋಲೀಸ್ ಓಡುವ ತನ್ನ ವೇಗಕ್ಕೆ ತಾನೇ ಸಿಕ್ಕಿ ಕಳ್ಳನನ್ನು ದಾಟಿಹೋದ ಮೇಲೆಯೂ ಓಡುತ್ತಿರುವುದರ ಗುರಿಯಾದರೂ ಯಾವುದು ಎಂಬುದು ಆಕಾರ್ ಪಟೇಲರಂತಹ ಇಂದಿನ ಸಾರ್ವಜನಿಕ ಬುದ್ಧಿಜೀವಿಗಳಿಗೂ ಚಿಂತೆಯ ವಿಷಯವಾಗದಿರುವುದೇ ಇಂದಿನ ನಿಜವಾದ ದುರಂತವಾಗಿದೆ.

ಅದೇನೇ ಇರಲಿ ಗಾಂಧಿಯವರ ಆ ಆದರ್ಶದ ಮಾತನ್ನು ಕುರಿತ ಇಂತಹ ಅಪವ್ಯಾಖ್ಯಾನಗಳ ಸಾಧ್ಯತೆಗಳನ್ನು ಮನಗಂಡೇ ಲೋಹಿಯಾ ಅದಕ್ಕೆ ಬದಲಿಯಾಗಿ 'ಮಿತಿಗಳುಳ್ಳ ಸರಳ ಸಭ್ಯ ಜೀವನ'ವನ್ನು ಒಂದು ಮೌಲ್ಯವಾಗುಳ್ಳ ಸಮಾಜವಾದವನ್ನು ಪ್ರತಿಪಾದಿಸಿದರು. ಆದರೆ ಎಲ್ಲಕ್ಕೂ ಕಣ್ಣಿಗೆ ಕಾಣುವಂತಹ ಸಾಕ್ಷ್ಯಗಳನ್ನು ಕೇಳುವ ಆಧುನಿಕ ವಿಜ್ಞಾನ ಬುದ್ಧಿ ತನ್ನ ನಿರಂತರ ಆವಿಷ್ಕಾರ ಮತ್ತು ಅನ್ವಯಗಳ ಮೂಲಕ ವಸ್ತು ಪ್ರಪಂಚದ ಎಂತಹ ಮಾಯಾಜಾಲವನ್ನು ಸೃಷ್ಟಿಸಿದೆ ಎಂದರೆ ಮನುಷ್ಯನಿಗೆ ಮಿತಿ, ಸರಳತೆ, ಸಭ್ಯತೆ ಎಂಬ ಶಬ್ದಗಳೇ ಧರ್ಮಬೋಧನೆಯ ಪೊಳ್ಳು ಶಬ್ದಗಳಾಗಿ ಕಂಡಿವೆ; ಎದುರು ನಿಂತಿರುವ ಸಂಪೂರ್ಣ ಸತ್ಯ, ಅದು ಸೂಚಿಸುತ್ತಿರುವ ಅಪಾಯವನ್ನು ಕಾಣದಷ್ಟು ಅವನ ಕಣ್ಣುಗಳನ್ನು ಮಂಜಾಗಿಸಿವೆ. ಲಕ್ಷಾಂತರ ಸಾವು ನೋವುಗಳು ಎದುರಿಗಿದ್ದರೂ, ಅವನ ಆತ್ಮಸಾಕ್ಷಿ ಜಾಗೃತವಾಗಿಲ್ಲ; ತಾನು ನಡೆದಿರುವ ದಾರಿಯ ದಿಕ್ಕು ಸರಿಯಿಲ್ಲ ಎಂದು ಸಾಬೀತುಪಡಿಸುವ 'ವೈಜ್ಞಾನಿಕ'-ತಾಳೆಗೆ ಸಿಗುವ ಸಂಪೂರ್ಣ ಮತ್ತು ನಿಸ್ಸಂಶಯಿಕವಾದ ಇಂದ್ರಿಯಗಮ್ಯ-ಸಾಕ್ಷ್ಯ ಅವನಿಗೆ ಸಿಕ್ಕಿಲ್ಲ.

ದೇಶ ಇಂದು ಕೋವಿಡ್-೧೯ರ ಎದುರು ತಲ್ಲಣಿಸಿ ಹೋಗಿರುವುದಕ್ಕೂ ಇದೇ ಕಾರಣವಾಗಿದೆ ಎನ್ನಬಹುದು. ಏಕೆಂದರೆ ಈ ಕೋವಿಡ್ ವಿರುದ್ಧದ ಇಡೀ ಕಾರ್ಯಾಚರಣೆಯ ಪ್ರತಿ ವಿವರವನ್ನೂ ನಿರ್ಧರಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿಯವರೂ 'ಅಭಿವೃದ್ಧಿ' ಎಂಬ ಮಾಯಾಜಾಲದ ಬಂದಿಯೇ ಆಗಿದ್ದಾರೆ. ಈಗ ಜನತೆಯನ್ನು ಮರುಳು ಮಾಡಿರುವ ಅವರ ಕನಸಿನ 'ಬಲಿಷ್ಠ ಭಾರತ'ದ ಕನಸೂ ಈ ಅಭಿವೃದ್ಧಿಯನ್ನೇ ನೆಚ್ಚಿದ್ದು. ಹಾಗಾಗಿ ಅವರೂ ಎಚ್ಚರದಪ್ಪಿದ್ದು ಸಹಜ. ಅವರು ಕೋವಿಡ್‌ನ ಮೊದಲ ಅಲೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾಗಿ ತಮ್ಮ ಬೆನ್ನು

(೯ನೇ ಪುಟಕ್ಕೆ

# ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಏಪ್ರಿಲ್ ಸಂಚಿಕೆ ತಲುಪಿದೆ, ಚೆನ್ನಾಗಿದೆ. ಎಂದಿನಂತೆ ನಿಮ್ಮ ಬರಹಗಳ ಮೊನಚು ಇಷ್ಟವಾಗುತ್ತೆ. ಲೋಹಿಯಾ ಸಮಾಜವಾದದ ಬಗೆಗಿನ ಲೇಖನಗಳು ಇಷ್ಟವಾದರೂ, ಹಲವು ಪ್ರಶ್ನೆಗಳನ್ನೂ ಹುಟ್ಟು ಹಾಕಿದವು. ಚೆನ್ನಿ ಅವರ ಲೇಖನವನ್ನು ಇನ್ನು ಹೆಚ್ಚು ಸಾಂದ್ರಗೊಳಿಸಿ ಇಂದಿನ ಸಮಸ್ಯೆಗಳ ಬಗೆಗೆ ಹೆಚ್ಚು ಕೇಂದ್ರೀಕರಿಸಬಹುದಿತ್ತೇನೋ! ಅಮೀನ್‌ಮಟ್ಟು ಲೇಖನ ಓದಿ ಹೊಸದಾದ ಯಾವ ಸಂಗತಿಯೂ ತಿಳಿಯಲಿಲ್ಲ. ಆದರೆ ಈ ಎರಡೂ ಲೇಖನಗಳು ಹೊಸ ನೋಟಗಳ ಬಗೆಗೆ ಅರಿವು ಮೂಡಿಸಿದ್ದು ಸತ್ಯ.

**–ಎಸ್. ಅರವಿಂದ,** ಚೆನ್ನೈ

ಏಪ್ರಿಲ್ ತಿಂಗಳ 'ಹೊಸಮನುಷ್ಯ' ಸಂಚಿಕೆಯಲ್ಲಿ ಸಮಾಜವಾದದ ಕುರಿತು ಪ್ರಕಟಗೊಂಡ ದಿನೇಶ್ ಅಮೀನ್‌ಮಟ್ಟು ಹಾಗು ರಾಜೇಂದ್ರ ಚೆನ್ನಿ ಅವರ ಲೇಖನಗಳು ಚಿಂತನ ಪ್ರಚೋದಕಗಳೇ ಆಗಿವೆ. ಆದರೆ, ಎರಡೂ ಲೇಖನಗಳ ಬಹುದೊಡ್ಡ ಕೊರತೆ ಎಂದರೆ, ಪ್ರಸ್ತುತ ಬಂಡವಾಳಶಾಹಿ ಕೃಪಾಪೋಷಿತ ಫ್ಯಾಸಿಸ್ಟ್ ರೂಪದ ರಾಜಕಾರಣ ಹಾಗು ತಾತ್ವಿಕ ಚಿಂತನೆಗಳಿಗೆ ಸಮಾಜವಾದಿ ಪರ್ಯಾಯದ ಚಹರೆಗಳನ್ನು ಸಮರ್ಥವಾಗಿ ಕಾಣಿಸದೇ ಇರುವುದು. ದಿನೇಶ್ ಅವರ ಲೇಖನವು ಲೋಹಿಯಾ ಚಿಂತನೆಯನ್ನಷ್ಟೇ ಕೇಂದ್ರವಾಗಿಸಿಕೊಂಡಿದೆಯಲ್ಲದೆ, ಲೋಹಿಯಾರ ಅನುಯಾಯಿಗಳು ಸಮಾಜವಾದವನ್ನು ತೊರೆದದ್ದಕ್ಕೆ ಸೂಕ್ತ ಕಾರಣಗಳನ್ನು ಹುಡುಕುವ ಗೋಜಿಗೆ ಹೋಗಿಲ್ಲ. ರಾಜೇಂದ್ರ ಚೆನ್ನಿಯವರ ಲೇಖನವು ಪ್ರಸ್ತುತ ಭೂಗೋಳದ (ಗ್ಲೋಬಲ್) ರಾಜಕೀಯ ಹಾಗು ಆರ್ಥಿಕ ವ್ಯವಸ್ಥೆಗಳನ್ನು ನಿಷ್ಠುರವಾಗಿ ವಿಶ್ಲೇಷಿಸುತ್ತದೆ, ನಿಜ. ಆದರೆ, ಪರ್ಯಾಯವನ್ನು ಚಳವಳಿಗಳಾಚೆಗೆ ಶೋಧಿಸುವುದಿಲ್ಲ. ಭಾರತದಲ್ಲಿ ಸಮಾಜವಾದವು ಸೈದ್ಧಾಂತಿಕವಾಗಿ ಬಲಗೊಳ್ಳಲು ಹಾಗು ಜನಸಾಮಾನ್ಯರಿಗೆ ಇದು ಪರ್ಯಾಯವೆಂದು ಅನಿಸಲು ನಾಲ್ಕು ಮಾರ್ಗೋಪಾಯಗಳು ಇವೆಯೆಂದು ಭಾವಿಸುವೆ. ಅವು: ಅ) ಜನರ ಆರ್ಥಿಕ ಹಾಗು ಭೌತಿಕ ಸ್ಥಿತಿ–ಗತಿಗಳೇ ಪ್ರಧಾನವಾದ ನರೇಟೀವ್ ಒಂದು ಸಮಾಜವಾದ ಪಾಳಯದಿಂದ ರೂಪುಗೊಳ್ಳಬೇಕು. ಧರ್ಮ ಮತ್ತು ಸಂಸ್ಕೃತಿಯ ಕುರಿತು ಬೇರೆಬೇರೆ ಸಂಕಥನಗಳನ್ನು ಜನರ ಮುಂದಿಡುವ ಕೆಲಸ ಮರೆಯಲ್ಲಿ ಆಗಬೇಕು. ಆ) ಲೋಹಿಯಾವಾದಿ ಸಮಾಜವಾದಿಗಳೂ ಮಾರ್ಕ್ಸ್–ವಾದಿ ಸಮಾಜವಾದಿಗಳೂ 'ಸಮಾಜವಾದ' ಎನ್ನುವ ಸಂಕಥನವನ್ನು ಕೂಡಿ ಬೆಳೆಸಬೇಕು. ಇ) ಲೋಹಿಯಾವಾದಿ ಸಮಾಜವಾದಿಗಳು ಲೋಹಿಯಾರವರ ಚಿಂತನೆಗಳನ್ನು ಮತ್ತಷ್ಟು ಬೆಳೆಸುವ, ಪರಿಷ್ಕರಿಸುವ ಕೆಲಸದಲ್ಲಿ ತೊಡಗಬೇಕು. ವಿಲ್ಹೆಲ್ಮ್ ರೀಚ್, ಗ್ರಾಮ್ಷಿಯಿಂದ ತೊಡಗಿ ಟೆರ್ರಿ ಈಗಲ್ಟನ್ ವರೆಗಿನ ಮಾರ್ಕ್ಸ್–ವಾದಿಗಳು ನಡೆಸಿದ ಪ್ರಯೋಗದಂತೆ. ಈ) ಜನರ ಹೋರಾಟಗಳಲ್ಲಿ 'ಸಮಾಜವಾದಿ' ಎಂದು ತಮ್ಮನ್ನು ತಾವು ಗುರುತಿಸಿಕೊಳ್ಳುವ ಪಡೆಯ ಸಂಖ್ಯೆ ಹೆಚ್ಚಬೇಕು.

**–ಅಮರ್ ಬಿ.,** ಬೆಂಗಳೂರು

'ಹೊಸ ಮನುಷ್ಯ'ದ ಕಳೆದ ಸಂಚಿಕೆಯಲ್ಲಿ ಪ್ರೊ. ಜೆ ಎಸ್ ಸದಾನಂದ ಅವರು ಅಂಬೇಡ್ಕರ್‌ರವರ ರಾಜಕೀಯ ಸಾಮಾಜಿಕ ಚಿಂತನೆಗಳ ಕುರಿತು ಬರೆದ ಲೇಖನ ಪೊಲಿಟಿಕಲ್ ಕರೆಕ್ಟ್‌ನೆಸ್‌ನ ಬಾಧೆಗೆ ಬಲಿಯಾಗದಿರುವ ತರ್ಕಶುದ್ಧವಾದ ಲೇಖನವಾಗಿದೆ. ಪಂಚಾಯತ್ ರಾಜ್, ಪ್ರಾದೇಶಿಕ ಭಾಷೆ ಮತ್ತು ಜಾತಿವಿನಾಶದ ಕುರಿತ ಬಾಬಾಸಾಹೇಬರ ಚಿಂತನೆಗಳನ್ನು ಈ ಕಾಲದಲ್ಲಿ ಮುಕ್ತವಾಗಿ ಮರುವಿಮರ್ಶೆ ಮಾಡಬೇಕಾದ ಅಗತ್ಯ ಇದೆ. ಕನ್ನಡದ ಸಂದರ್ಭದಲ್ಲಿ ಇಂತಹ ಲೇಖನಗಳು ಪ್ರಕಟಗೊಳ್ಳುವುದೇ ಅಸಂಭವ. ಜೆ ಎಸ್ ಸದಾನಂದ ಅವರಿಗೆ ಅಭಿನಂದನೆಗಳು.

**–ನಿತ್ಯಾನಂದ ಬಿ. ಶೆಟ್ಟಿ,** ತುಮಕೂರು

ಭಾರತದ ಎಲ್ಲಾ ರಾಜಕೀಯ ಪಕ್ಷಗಳು ಅಂಬೇಡ್ಕರ್ ಅವರನ್ನು ತಮ್ಮವರಾಗಿಸಿಕೊಳ್ಳಲು ಪೈಪೋಟಿ ನಡೆಸುತ್ತಿರುವ ಈ ಹೊತ್ತಿನಲ್ಲಿ, ಅಂಬೇಡ್ಕರರ ಚಿಂತನೆಗಳನ್ನು ವಿಮರ್ಶೆಗೊಳಪಡಿಸಬೇಕಾದದ್ದು ಅಗತ್ಯವಾಗಿದೆ. ಅವರ ಚಿಂತನೆಗಳ ಮೂಲ ಉದ್ದೇಶವೇನಾಗಿತ್ತು ಹಾಗು, ಅವುಗಳನ್ನು ಪ್ರಸ್ತುತ ಸಂದರ್ಭದಲ್ಲಿ ಹೇಗೆಲ್ಲ ಬಳಸಿಕೊಳ್ಳಲಾಗುತ್ತಿದೆ ಎನ್ನುವುದನ್ನು ಜೆ ಎಸ್ ಸದಾನಂದರ ಲೇಖನ ಸಮರ್ಥವಾಗಿ ತೋರಿಸಿಕೊಟ್ಟಿದೆ.

ಜಾತಿ ಅಸಮಾನತೆ ಹಾಗು ಧಾರ್ಮಿಕ ಶೋಷಣೆಗಳನ್ನು ನಿಯಂತ್ರಿಸಲು ಬಲಿಷ್ಠ ಕೇಂದ್ರವನ್ನು ಹೊಂದಿದ ರಾಷ್ಟ್ರದ ನಿರ್ಮಾಣ ಮತ್ತು ಅದಕ್ಕೆ ಪೂರಕವಾಗಿ ಏಕಭಾಷೆಯ ಹೇರಿಕೆಯೇ ಪರಿಹಾರ ಎಂದು ಅಂಬೇಡ್ಕರ್ ನಂಬಿದ್ದರು. ಆದರೆ, ಏಕಚಕ್ರಾಧಿಪತ್ಯದ ರಾಜಕೀಯ ಹಾಗು ಸಾಂಸ್ಕೃತಿಕ ಸಂಕಥನವೇ ದೇಶವನ್ನಾವರಿಸಿರುವ ಪ್ರಸ್ತುತ ಸನ್ನಿವೇಶದ ಸೃಷ್ಟಿಯಲ್ಲಿ ಅಂಬೇಡ್ಕರರ ಆ ಚಿಂತನೆಗಳ ಪಾತ್ರವನ್ನು ವಿಶ್ಲೇಷಿಸುತ್ತ, ಅವುಗಳಿಗೆ ಪರ್ಯಾಯವಾಗಿ ಪಂಚಾಯತ್ ರಾಜ್‌ಗಳ ಬಲವರ್ಧನೆ ಮತ್ತು ಎಲ್ಲಾ ಪ್ರಾಂತೀಯ ಭಾಷೆಗಳಿಗೆ ಸಮಾನ ಮಾನ್ಯತೆಯ ವಿಚಾರಗಳು ಎಷ್ಟು ಮುಖ್ಯವೆಂದು ಲೇಖಕರು

(೧೪ನೇ ಪುಟಕ್ಕೆ

ನಮ್ಮ ಏಪ್ರಿಲ್ ಸಂಚಿಕೆಯಲ್ಲಿ ಟಿ ಎನ್ ವಾಸುದೇವಮೂರ್ತಿಯವರ 'ಹರಿಲಾಲ್: ರಾಷ್ಟ್ರಪಿತನ ನತದೃಷ್ಟ ಮಗ' ಎಂಬ ಪುಸ್ತಕವನ್ನು ನಿತ್ಯಾನಂದ ಬಿ. ಶೆಟ್ಟಿಯವರು ವಿಮರ್ಶೆ ಮಾಡಿದ್ದಾರೆ. ಈ ವಿಮರ್ಶೆ ಪುಸ್ತಕದ ಮುನ್ನುಡಿಯನ್ನಷ್ಟೇ ಓದಿ ಬರೆಯಲಾಗಿದೆ ಎನ್ನುತ್ತಾ ಮೂರ್ತಿಯವರು ಅದರಲ್ಲಿನ ಕೆಲವು ಮಾತುಗಳ ಬಗ್ಗೆ ತಕರಾರುಗಳನ್ನು ಎತ್ತಿ ಪತ್ರ ಬರೆದಿದ್ದಾರೆ. ಅದನ್ನು ನಾನು ನಿತ್ಯಾನಂದ ಶೆಟ್ಟಿಯವರಿಗೆ ಕಳಿಸಿದಾಗ ಅವರು ಯಾವ ಕಾರಣದಿಂದಲೋ ಪ್ರತಿಕ್ರಿಯಿಸಲು ನಿರಾಕರಿಸಿದ್ದಾರೆ. ಇದನ್ನು ಅವರ ಮನಸ್ಸಾಕ್ಷಿಗೇ ಬಿಟ್ಟು ಮತ್ತು ಅವರ ವಿಮರ್ಶೆಯ ವೈಖರಿಯ ತಂಟೆಗೆ ಹೋಗದೆ ಗೆಳೆಯರಾದ ವಾಸುದೇವಮೂರ್ತಿಯವರಿಗೆ 'ಗಾಂಧಿ ಕಥನ'ಕಾರನಾಗಿ ನಾನು ಅವರ ಪತ್ರದಲ್ಲಿನ ಎಲ್ಲ ಅಂಶಗಳಿಗೆ ಇಲ್ಲಿ ಪ್ರತಿಸ್ಪಂದಿಸುತ್ತೇನೆ:

ವಾಸುದೇವಮೂರ್ತಿಯವರು ಗಾಂಧಿಯವರ ಆಪ್ತ ಕಾರ್ಯದರ್ಶಿಯಾಗಿದ್ದ ಮಹದೇವ ದೇಸಾಯಿ ಕನ್ನಡಿಗರೆಂದು ಬರೆದಿರುವುದು ತಪ್ಪು ಎಂದು ಒಪ್ಪಿಕೊಂಡಿದ್ದಾರೆ. ಇದು ಇವರ ವಿನಯವನ್ನು ತೋರಿಸುತ್ತಾದರೂ, ಈ ತಪ್ಪಿಗೆ ಅವರು ನೀಡಿರುವ ಕಾರಣವಾದ ಧಾರವಾಡದ ಕಡೆ ದೇಸಾಯಿಗಳಿರುವುದರಿಂದ ಹಾಗೆ ಭಾವಿಸಿದೆ ಎಂಬ ಮಾತು ಈ ಪುಸ್ತಕವನ್ನು ಎಷ್ಟು ಗಂಭೀರತೆಯಿಂದ, ಜವಾಬ್ದಾರಿಯಿಂದ ಬರೆಯಲಾಗಿದೆ ಎಂಬುದನ್ನೂ ಸೂಚಿಸುತ್ತದೆ. ಏಕೆ, ಲೇಖಕರು ಮೊರಾರ್ಜಿ ದೇಸಾಯಿಯವರ ಹೆಸರನ್ನಾದರೂ ಕೇಳಿರಲಿಲ್ಲವೆ? ಅಥವಾ ಅವರನ್ನೂ ಇವರು ಕನ್ನಡಿಗರೆಂದೇ ಭಾವಿಸಿರುವರೆ?

ಇನ್ನು ವಿಮರ್ಶೆಯಲ್ಲಿ ತಮ್ಮ ಪುಸ್ತಕದಲ್ಲಿ ಕೊಡಲಾಗಿರುವ ಮಾಹಿತಿಯನ್ನು ಅರೆಸತ್ಯಗಳೆಂದು ಕರೆಯಲಾಗಿದೆ ಎಂಬ ಅವರ ತಕರಾರುಗಳ ಬಗ್ಗೆ. 'ಮಲದ ಮಡಕೆಯನ್ನು ಸ್ವಚ್ಛಗೊಳಿಸಲು ನಿರಾಕರಿಸಿದ ತಮ್ಮ ಪತ್ನಿಯನ್ನು ಗಾಂಧಿ ಕುತ್ತಿಗೆ ಹಿಡಿದು ಹೊರದಬ್ಬಲು ಹಿಂದುಮುಂದು ನೋಡಲಿಲ್ಲ' ಎಂದು ಬರೆಯುವ ಲೇಖಕರು, ಸ್ವತಃ ಗಾಂಧಿಯವರೇ ದಾಖಲಿಸಿರುವ ಅವರ ಬದುಕಿನ ಬಹು ಮುಖ್ಯ ಘಟನೆ ಎನಿಸಿದ ಈ ಘಟನೆ ಹೇಗೆ ಆರಂಭವಾಗಿ, ಹೇಗೆ ಕೊನೆಗೊಂಡಿತು ಎಂದು ಪೂರ್ತಿ ಹೇಳದೇ, ತಮ್ಮ ಕಥನ ಧಾಟಿಗೆ ಸೂಕ್ತವಾದ ರೀತಿಯಲ್ಲಿ ಕತ್ತರಿಸಿ ಹೇಳಿರುವುದೇ ಇದು ಅರೆಸತ್ಯ ಮತ್ತು ದುರುದ್ದೇಶಪೂರ್ವಕವೆನಿಸಲು ಕಾರಣ.

ಹರಿಲಾಲನಿಗೆ ಬದಲಾಗಿ ಗಾಂಧಿ ಛಗನ್‌ಲಾಲನನ್ನು ಉನ್ನತ ಶಿಕ್ಷಣಕ್ಕಾಗಿ ಲಂಡನ್‌ಗೆ ಕಳಿಸಿದರೆಂಬುದನ್ನು ಹರಿಲಾಲನ ಆಪಾದನೆ ಮತ್ತು ಅವನ ಪರ ವಾದಿಸುವ ಕೃತಿಗಳ ಹೊರತಾಗಿ ಸಾಧಾರವಾಗಿ ಇನ್ನೆಲ್ಲಿ ದಾಖಲಾಗಿದೆ ಎಂಬುದನ್ನು ಮೂರ್ತಿಯವರು ತಿಳಿಸಬೇಕು. ಛಗನ್‌ಲಾಲನನ್ನು ಲಂಡನ್‌ಗೆ ಕಳಿಸುವ ನಿಜವಾದ ಉದ್ದೇಶವೇನಾಗಿತ್ತು ಮತ್ತು ಕೊನೆಗೆ ಆತ ಲಂಡನ್‌ಗೆ ಹೋದನೆ ಅಥವಾ ಇಲ್ಲವೆ? ಎಂಬುದನ್ನು ತಿಳಿಯಬಯಸುವವರು ರಾಮಚಂದ್ರ ಗುಹಾ ಅವರ 'ಗಾಂಧಿ ಬಿಫೋರ್ ಇಂಡಿಯಾ' ಪುಸ್ತಕವನ್ನೊಮ್ಮೆ ಮಗುಚಿ ಹಾಕಿ ಎಂದು ತಿಳಿಸಬಯಸುವೆ. ಹಾಗೆ ಮಾಡಿದರೆ ಈ ಆರೋಪ ಕಟ್ಟು ಕಥೆ ಮಾತ್ರವಲ್ಲ ದುರುದ್ದೇಶಪೂರ್ವಕವಾದುದೆಂಬುಂದೂ ಗೊತ್ತಾಗುತ್ತದೆ. ಇನ್ನು ಹರಿಲಾಲನ ತೊಡೆಯ ಮೇಲೆ ಮಲಗಿ ಪ್ರಾಣ ಬಿಡುವ ಆಸೆಯನ್ನು ಗಾಂಧಿ ಯಾವಾಗ ವ್ಯಕ್ತಪಡಿಸಿದ್ದರು ಎಂದು ಮೂರ್ತಿಯವರು ಕೇಳಿದ್ದಾರೆ. ದಯವಿಟ್ಟು ರಾಜಮೋಹನ ಗಾಂಧಿಯವರ 'ಮೋಹನದಾಸ' ಕೃತಿಯನ್ನೊಮ್ಮೆ (ಇದು ಕನ್ನಡದಲ್ಲೂ ಲಭ್ಯವಿದೆ) ಓದಿ ಎಂಬುದೇ ಇದಕ್ಕೆ ನನ್ನ ಉತ್ತರ.

ಕೊನೆಯದಾಗಿ ರಾಮದಾಸ ತಾನು ಬಾಲಕನಿದ್ದಾಗ ಹಣ ಕದ್ದ ಪ್ರಸಂಗವನ್ನು ತನ್ನ ತಂದೆಯ ಕಟ್ಟುನಿಟ್ಟಿನ ಉದಾಹರಣೆಯಾಗಿ ಬರೆದಿದ್ದರೆ ಈ ಪುಸ್ತಕವು ಅದನ್ನು ವ್ಯಾಖ್ಯಾನಿಸಿರುವ ರೀತಿ ಏನನ್ನು ಸೂಚಿಸುತ್ತದೆ? ಹರಿಲಾಲನ ಹೊರತಾಗಿ ಗಾಂಧಿಯವರ ಇತರ ಮುವ್ವರು ಮಕ್ಕಳಲ್ಲಿ ಯಾರೂ ಗಾಂಧಿಯ ತಂದೆತನವನ್ನು ನಿಂದಿಸಿಲ್ಲ, (ಈಡೇರದ ಆಸೆಗಳಿರಬಹುದು, ಅಸಮಾಧಾನಗಳೂ ಇರಬಹುದು, ಜೊತೆಗೇ ಹೆಮ್ಮೆಯೂ ಇದೆಯಲ್ಲ!) ಏಕೆ? ದೂರುಗಳೆಲ್ಲ ಅವರ ಪರವಾಗಿ ನಿಮ್ಮಂಥವರಿಂದಷ್ಟೇ! ಈ ಹಿನ್ನೆಲೆಯಲ್ಲೇ, ಓದಿ ಎಂದು ಮೇಲೆ ಸೂಚಿಸಿರುವ ಎರಡು ಪುಸ್ತಕಗಳ ಸಂಬಂಧಪಟ್ಟ ಪುಟ ಸಂಖ್ಯೆಗಳನ್ನು ನೀಡಿಲ್ಲ. ತಂದೆಯ ಎದುರು ಮಗನನ್ನು ನಿಲ್ಲಿಸಿ ಮಗನ ಪರವಾಗಿ ಕಥೆ ಕಟ್ಟಿರುವವರು ತಂದೆಯನ್ನು ಕುರಿತೂ ಒಂದಷ್ಟು ಕಥೆಗಳನ್ನು ಸಾದ್ಯಂತ ಓದಲಿ ಎಂದು.

ಗಾಂಧಿ ಓರ್ವ ರಾಜಕೀಯ ಚಿಂತಕರಲ್ಲವಾದ್ದರಿಂದ ತಮ್ಮ ಪುಸ್ತಕದಲ್ಲಿ ತಾವು ಅವರನ್ನು ಹಾಗೆ ನೋಡಿಲ್ಲ ಎನ್ನುವ ಲೇಖಕರು ತಮ್ಮ ಮಾತಿಗೆ ಶಂಕರನ್ ನಾಯರ್ ಎಂಬುವವರ ಮಾತನ್ನು ಉಲ್ಲೇಖಿಸುತ್ತಾರೆ, ಮಾಪಿಳ್ಳೆ ದಂಗೆಯನ್ನು ಪೂರ್ಣವಾಗಿ ಕೋಮುವಾದಿ ಕಣ್ಣಿನಿಂದ ನೋಡಿ ಪುಸ್ತಕ ಬರೆದಿರುವ ಈ ನಾಯರರ ಮಾತು ಇಲ್ಲಿ ಹಾಗಲಕ್ಕೆ ಬೇವು ಸಾಕ್ಷಿಯಾದಂತಿದೆ.

ತಮ್ಮ ಪತ್ರದ ಕೊನೆಯಲ್ಲಿ ಗಾಂಧಿ ಹರಿಲಾಲನ ಚಾರಿತ್ರ್ಯ ಹನನ ಮಾಡಿದ್ದಾರೆಂದು ಹೇಳುವ ಮೂರ್ತಿಯವರು ವಿಮರ್ಶೆಯ ಕೊನೆಯ ಸಾಲುಗಳಲ್ಲಿ ತಮ್ಮ ಚಾರಿತ್ರ್ಯ ಹನನ ಮಾಡಲಾಗಿದೆ ಎಂದರೆ ಏನು ಹೇಳುವುದು? ಏನೂ ಹೇಳಬಯಸುವುದಿಲ್ಲವಷ್ಟೆ.

ಕೊನೆಯದಾಗಿ ಒಂದು ಮಾತು: ಗಾಂಧಿ ಟೀಕಾತೀತರು, ಅವರು ತಪ್ಪುಗಳನ್ನೇ ಮಾಡಿಲ್ಲ ಎಂದು ಯಾರೂ ಹೇಳುತ್ತಿಲ್ಲ. ಆ ಬಗ್ಗೆ ದಂಡಿ ದಂಡಿಯಾಗಿ ಪುಸ್ತಕಗಳು ಬಂದಿವೆ. ಆದರೆ ಅವು ಶೈಕ್ಷಣಿಕ ಶಿಸ್ತಿಗೆ ಒಳಪಟ್ಟ ಗಂಭೀರ ಅಧ್ಯಯನಗಳಾಗಿವೆ.

**–ಸಂಪಾದಕ**

## ಒಂದು ನದಿ ಜೋಡಣೆಯ ಕಥೆ



# ಕಬ್ಬಿಣದ ತ್ರಿಕೋನದ ಮೂಲಕ ಮೋದಿ ತೋರಿಸಿದ ಸ್ವರ್ಗ!

–ನಾಗೇಶ ಹೆಗಡೆ

**ನಮ್ಮ ಉತ್ತರ ಕನ್ನಡ ಜಿಲ್ಲೆಯ ಅಘನಾಶಿನಿ ಮುಂತಾದ ಪಶ್ಚಿಮವಾಹಿ ನದಿಗಳ 'ಹೆಚ್ಚುವರಿ' ನೀರನ್ನು ಕಾಲುವೆಗಳ ಮೂಲಕ ಪೂರ್ವಕ್ಕೆ ತಿರುಗಿಸಿ ಉತ್ತರ ಕರ್ನಾಟಕದ ಬರಪೀಡಿತ ಪ್ರದೇಶಗಳಿಗೆಗೆ ನೀರು ಒದಗಿಸುವ ಯೋಜನೆಯೊಂದರ ಸಾಧಕ ಬಾಧಕಗಳನ್ನು ಕುರಿತ ಚರ್ಚೆಯೊಂದು ಆರಂಭವಾಗಿರುವ ಹೊತ್ತಿನಲ್ಲಿ ಈ ಲೇಖನ ಒಂದು ಉದಾಹರಣೆಯ ಮೂಲಕ ಇಂತಹ ಯೋಜನೆಗಳ ಮೂಲ ಉದ್ದೇಶಗಳೇನು ಎಂಬುದನ್ನು ಬಯಲು ಮಾಡುವ ಪ್ರಯತ್ನ ಮಾಡುತ್ತದೆ-ಸಂ**



**ಗಂಗಾ–ಕಾವೇರಿ ಜೋಡಣೆ ನಕ್ಷೆ**

**ನ**ಮ್ಮ ಅಭಿವೃದ್ಧಿ ಯೋಜನೆಗಳೆಲ್ಲ 'ಕಬ್ಬಿಣದ ತ್ರಿಕೋನದಲ್ಲಿ ಸಿಕ್ಕಿಕೊಂಡಿವೆ ಎಂದು ಒಮ್ಮೆ ಪ್ರೊ. ಮಾಧವ ಗಾಡ್ಗೀಳರು ಹೇಳಿದ್ದರು. ಎಂಜಿನಿಯರ್, ಆಡಳಿತಾಧಿಕಾರಿ ಮತ್ತು ರಾಜಕಾರಣಿ ಹೀಗೆ ಮೂವರು ಈ ತ್ರಿಕೋನದ ಮೂರು ಮೂಲೆಗಳಲ್ಲಿ ಕೂತು ದೇಶದ ಭವಿಷ್ಯದ ಕತ್ತು ಹಿಸುಕುತ್ತಿದ್ದಾರೆ ಎಂದು ಅವರು ಹೇಳಿದ್ದರು.

ಅದಕ್ಕೆ ನೂರೊಂದು ಹಳೇ ಉದಾಹರಣೆಗಳು ನಮ್ಮೆದುರು ಇವೆ. ಹಳತನ್ನೇ ಮತ್ತೆ ಮತ್ತೆ ತಾಜಾಗೊಳಿಸುವ ಹೊಸ ಉದಾಹರಣೆ ಎಂದರೆ ಮೋದಿಯವರು ಕಳೆದ ಮಾರ್ಚ್ ೨೨ರಂದು ಚಾಲನೆ ಕೊಟ್ಟ 'ಕೆನ್–ಬೆಟ್ವಾ' ನದಿ ಜೋಡಣೆ ಯೋಜನೆ. ಅದರ ಇತಿಹಾಸ ಹೀಗಿದೆ:

ಸರ್ ಆರ್ಥರ್ ಕಾಟನ್ ಎಂಬಾತ ಗಂಗಾ–ಕಾವೇರಿ ಜೋಡಣೆಯ ಕನಸನ್ನು ೧೮೫೦ರಲ್ಲೇ ಹೆಣೆದಿದ್ದ. ಬ್ರಿಟಿಷರ ಕಾಲದಲ್ಲಿ ಮೂಲೆಗುಂಪಾಗಿದ್ದ ಅದು ೧೯೭೨ರಲ್ಲಿ ಖ್ಯಾತ ನೀರಾವರಿ ಇಂಜಿನಿಯರ್ ಕೆ.ಎಲ್.ರಾವ್ ಮೂಲಕ ಮತ್ತೆ ಮುನ್ನೆಲೆಗೆ ಬಂತು. ಈ ಮಧ್ಯೆ ಭಾಕ್ರಾ ನಾಂಗಲ್, ತುಂಗಭದ್ರಾ, ಹಿರಾಕುಡ್ ಮುಂತಾದ ಅಣೆಕಟ್ಟುಗಳು 'ಆಧುನಿಕ ಭಾರತದ ದೇವಾಲಯಗಳು' ಎಂದು ನೆಹ್ರೂ ಹೇಳಿದ್ದರಲ್ಲ? ಆದರೆ ಗಂಗಾ–ಕಾವೇರಿ ಜೋಡಣೆಗೆ ಬೇಕಾದ ಭಾರೀ ಹಣವಾಗಲೀ ಎಂಜಿನಿಯರಿಂಗ್ ಸೌಲಭ್ಯಗಳಾಗಲೀ ಇರಲಿಲ್ಲ.

ಅಂಥ ಏಕೈಕ ಬೃಹತ್ ಯೋಜನೆಯ ಬದಲು ವಿವಿಧ ಗಾತ್ರದ ವಿವಿಧ ಹಂತದ ಯೋಜನೆಗಳ ನೀಲನಕ್ಷೆಗಳು ೧೯೮೦ರಲ್ಲಿ ಸಿದ್ಧವಾಗತೊಡಗಿದವು. ೧೯೮೨ರಲ್ಲಿ 'ರಾಷ್ಟ್ರೀಯ ಜಲವಿಕಾಸ ಪ್ರಾಧಿಕಾರ' ಅಸ್ತಿತ್ವಕ್ಕೆ ಬಂತು. ಭಾರತದ ಭೂಪಟದಲ್ಲಿ ನದಿ ಕಣಿವೆ ಕಂಡಲ್ಲೆಲ್ಲ ಗೆರೆ ಎಳೆಯುವ ಪೈಪೋಟಿಯೇ ಶುರುವಾಯಿತು. ಅರಣ್ಯ, ವನ್ಯಜೀವ, ಆದಿವಾಸಿ ಜನಜೀವನ, ಭೂಚರಿತ್ರೆಗಳ ಕುರಿತು ಕಿಂಚಿತ್ತೂ ತಲೆ ಕೆಡಿಸಿಕೊಳ್ಳದ ಯೋಜನೆಗಳು ಅವು. ಅದೇ ವೇಳೆಗೆ ಪರಿಸರ ಪ್ರಜ್ಞೆ ನಮ್ಮಲ್ಲೂ ಅರಳತೊಡಗಿತ್ತು. ಕೇರಳದ *ಸೈಲೆಂಟ್ ವ್ಯಾಲಿ* ಯೋಜನೆಗೇ ಕೆಂಪು ನಿಶಾನೆ ತೋರಿಸಿ, ಹುಲಿ ರಕ್ಷಣೆಗೆ ಆದ್ಯತೆ ಘೋಷಿಸಿ, ಇಂದಿರಾಗಾಂಧಿಯವರೇ ಪರಿಸರವಾದಿ ಎಂಬುದನ್ನು ಜಾಗತಿಕ ಮಟ್ಟದಲ್ಲಿ ಬಿಂಬಿಸುವ ಯತ್ನಗಳು ನಡೆದವು. ನದಿ ಜೋಡಣೆ ನಕಾಶೆಗಳು ಮತ್ತೆ ಮೂಲೆ ಸೇರಿದವು.

ಬಿಜೆಪಿ ೧೯೯೮ರಲ್ಲಿ ಆಡಳಿತ ಚುಕ್ಕಾಣಿ ಹಿಡಿದಿದ್ದೇ ತಡ, ಭಾರತದ ಅಭಿವೃದ್ಧಿ ಚಕ್ರಕ್ಕೆ ಹೊಸ ಆವೇಗ ಕೊಡಲು ಸಿದ್ಧತೆ ನಡೆದವು. ಜೊತೆಗೆ ಎಂಜಿನಿಯರ್ (ರಾಷ್ಟ್ರಪತಿ) ಅಬ್ದುಲ್ ಕಲಾಮ್ ಜೈ ಎಂದರು. ಹಳೇ ನಕಾಶೆಗಳು ಧೂಳು ಕೊಡವಿಕೊಂಡು ಮೇಲೆದ್ದವು. ಸರ್ವೋಚ್ಚ ನ್ಯಾಯಾಲಯವೂ ಯಾರದೋ ಅರ್ಜಿಗೆ ಉತ್ತರವಾಗಿ, 'ಯಾಕಿಷ್ಟು ತಡ ಆಗ್ತಿದೆ ನದಿ ಜೋಡಣೆ ಕೆಲಸ? *ಶೀಘ್ರ ಕೈಗೆತ್ತಿಕೊಳ್ಳಿ*' ಎಂದು ೨೦೦೨ರಲ್ಲಿ ಆದೇಶ ನೀಡಿತು. ಇಡೀ ಯೋಜನೆಗೆ ವಿದ್ಯುದಾವೇಶ ಬಂತು.

ಅದರ ಮೊದಲ ಪ್ರಾಯೋಗಿಕ ಹಂತವಾಗಿ 'ಕೆನ್ ಮತ್ತು ಬೆಟ್ವಾ' ಎಂಬ ಎರಡು ಕಿರುನದಿಗಳನ್ನು ಜೋಡಿಸುವ ೨೨೨ ಕಿ.ಮೀ. ಉದ್ದದ ಕಾಲುವೆ ನಿರ್ಮಾಣದ ಪುಟ್ಟದೊಂದು ಯೋಜನೆಯನ್ನು ತುರ್ತಾಗಿ ವಾಜಪೇಯಿ ಘೋಷಿಸಿದರು. ಜಾಸ್ತಿ ನೀರಿರುವ ಕೆನ್ ನದಿಯಿಂದ ಕಮ್ಮಿ ನೀರಿನ ಬೆಟ್ವಾ ನದಿಗೆ ಕಾಲುವೆ ಕೊರೆದು ಮಧ್ಯಪ್ರದೇಶದ ೯ ಜಿಲ್ಲೆಗಳಿಗೆ ಮತ್ತು ಉತ್ತರ ಪ್ರದೇಶದ ಐದು ಜಿಲ್ಲೆಗಳಿಗೆ ನೀರಾವರಿ ಒದಗಿಸುವ ಚಿಕ್ಕ ಯೋಜನೆ. ವಾಜಪೇಯಿಯವರ ಜೊತೆ ಯೋಜನೆಯೂ ಮೂಲೆಗೆ ಸೇರಿತು. ೧೫ ವರ್ಷಗಳ ನಂತರ ಮೋದಿ ಸರಕಾರ ಬಂತು. ಮತ್ತೊಮ್ಮೆ ಅದಕ್ಕೆ ಸಮೀಕ್ಷೆ ನಡೆದು ಹೊಸ ವರದಿ ಸಿದ್ಧವಾಯಿತು. ಇದೀಗ ಮಾರ್ಚ್ ೨೨ರಂದು ಪ್ರಧಾನಿ ಮೋದಿಯವರು 'ಅಟಲ್ಜೀ ಕನಸನ್ನು ನನಸು ಮಾಡುವ ದೊಡ್ಡ ಹೆಜ್ಜೆ ಇದು' ಎನ್ನುತ್ತ ಯೋಜನೆಗೆ ಚಾಲನೆ ಕೊಟ್ಟರು. ಎರಡು ರಾಜ್ಯಗಳ (ಉ.ಪ್ರ ಮತ್ತು ಮ.ಪ್ರ.ಗಳ) ನಡುವಣ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಯಿತು. ಬೆಟ್ವಾ–ಕೆನ್




**ಬೆಟ್ವಾ–ಕೆನ್ ಯೋಜನಾ ಪ್ರದೇಶವನ್ನು ವೃತ್ತ ಹಾಕಿ ತೋರಿಸಲಾಗಿದೆ, ಗಮನಿಸಿ**

ತಮಾಷೆ ಏನೆಂದರೆ, ಇಂಥದ್ದೇ ಒಡಂಬಡಿಕೆ ಪತ್ರಕ್ಕೆ ೧೬ ವರ್ಷಗಳ ಹಿಂದೆಯೇ ಎರಡೂ ರಾಜ್ಯಗಳು ಒಟ್ಟಾಗಿ ಸಹಿ ಹಾಕಿದ್ದವು. ಯೋಜನೆ ಮಾತ್ರ ಒಂದಿಂಚೂ ಮುಂದೆ ಹೋಗಿಲ್ಲ; ಈಗಲೂ ಮುಂದೆ ಹೋಗುವ ಸಂಭವ ಇಲ್ಲ. ಏಕೆಂದರೆ, ನದಿ ಜೋಡಣೆಯ ಗೆರೆ ಎಳೆದ ತಜ್ಞರು ನೀರಿನ ಲಭ್ಯತೆಯ ಲೆಕ್ಕಾಚಾರವನ್ನೇ ತಪ್ಪಾಗಿ ಮಾಡಿದ್ದರು. ಅರಣ್ಯ ಮುಳುಗಡೆ ನಗಣ್ಯವೆಂದು ಹೇಳಿದ್ದರು. ಹೆಸರಾಂತ ಪನ್ನಾ ಹುಲಿ ಸಂರಕ್ಷಣಾ ಮೀಸಲು ಅರಣ್ಯದ ಮೂಲಕವೇ ಆ ಗೆರೆ ಎಳೆದಿದ್ದರು. ನೀರಾವರಿ ಆಗಬೇಕಿದ್ದ ಪ್ರದೇಶವನ್ನು ಉತ್ಪ್ರೇಕ್ಷೆ ಮಾಡಿದ್ದರು. ಅವೆಲ್ಲ ಸಂಗತಿಗಳೂ ಈಗ ನ್ಯಾಯದ ಕಟ್ಟೆ ಏರಿವೆ. ಸರ್ವೋಚ್ಚ ನ್ಯಾಯಾಲಯ ನೇಮಕ ಮಾಡಿದ ತಜ್ಞರ ಸಮಿತಿಯೇ ಹುಲಿಯೋಜನಾ ಕ್ಷೇತ್ರಕ್ಕೆ ಭೇಟಿ ನೀಡಿ, ನದಿ ಜೋಡಣೆಗೆ ಅನುಮತಿ ಕೊಡಕೂಡದೆಂದು ಶಿಫಾರಸು ಮಾಡಿದೆ. ಎರ್ರಾಬಿರ್ರಿ ಪರಿಸರ ಪರಿಣಾಮಗಳ ಮೌಲ್ಯಮಾಪನ ಮಾಡಿದ್ದ ತಜ್ಞರ ತಂಡವನ್ನು ತರಾಟೆಗೆ ತೆಗೆದುಕೊಂಡಿದೆ. ಸಾಲದ್ದಕ್ಕೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಅಲ್ಲಿ ಅರಣ್ಯ ನಾಶಕ್ಕೆ ಅನುಮತಿಯನ್ನೂ ಕೊಟ್ಟಿಲ್ಲ.

ಆದರೂ ಮೋದಿ ಸಾಹೇಬರು ಯೋಜನೆಗೆ ಚಾಲನೆ ಕೊಟ್ಟರು ಹೇಗೆ? ಬರಪೀಡಿತ ಪ್ರದೇಶಗಳಲ್ಲಿ ಸ್ವರ್ಗವನ್ನೇ ಧರೆಗಿಳಿಸುವಂತೆ ಆಗ ಧಾಮ್ಧೂಮ್ ಭಾಷಣ ಮಾಡಿದರು ಹೇಗೆ? 'ನೀವು ಕೆಲಸ ಆರಂಭಿಸಿ; ಎಲ್ಲವನ್ನೂ ನಾವು ಮ್ಯಾನೇಜ್ ಮಾಡುತ್ತೇವೆ' ಎಂದು ಅವರು ಯೋಜನೆಯ ಎಂಜಿನಿಯರ್‌ಗಳ, ಗುತ್ತಿಗೆದಾರರ ಕಿವಿಯಲ್ಲಿ ಹೇಳಿರಬಹುದೆ? ಹೇಗೂ ಮ್ಯಾನೇಜ್ ಮಾಡಬಹುದೆಂದು ನೀರಾವರಿ ಸಚಿವಾಲಯದ ಸೆಕ್ರೆಟರಿಗಳು ಪ್ರಧಾನಮಂತ್ರಿಯವರ ಕಚೇರಿಯ ಅಧಿಕಾರಿಗಳ ಕಿವಿ ಊದಿರಬಹುದೆ?

ಪ್ರೊ. ಮಾಧವ ಗಾಡ್ಗೀಳ್ ಹೇಳಿದ 'ಕಬ್ಬಿಣ ತ್ರಿಕೋನ'ವನ್ನು ಈಗ ನೆನಪಿಸಿಕೊಳ್ಳಿ. ನೀರು ಇಲ್ಲಿ ಕೇವಲ ನೆಪವಷ್ಟೇ. ಕಾಲುವೆಯಲ್ಲಿ ನೀರು ಹರಿಯಲಿ, ಬಿಡಲಿ; ಅರಣ್ಯ ಮುಳುಗಲಿ, ಬಿಡಲಿ; ವನ್ಯಜೀವಿಗಳು ಮತ್ತು ಆದಿವಾಸಿಗಳು ತೇಲಲಿ, ಮುಳುಗಲಿ; ನ್ಯಾಯಾಲಯಗಳು ಯೋಜನೆಗೆ ಒಪ್ಪಿಗೆ ಕೊಡಲಿ, ಬಿಡಲಿ; ಅಂತೂ ಡೈನಮೈಟ್ ಸಿಡಿಯಬೇಕು. ಗ್ರಾನೈಟ್ ಗಣಿಗಾರಿಕೆ, ಮರಳು ಸಾಗಣೆ, ಉಕ್ಕಿನ ಕಂಬಿಗಳ ಕಾಂಕ್ರೀಟ್ ಅಣೆಕಟ್ಟು, ಕಾಲುವೆ ಸಿದ್ಧವಾಗಬೇಕು.

ದೇಶದಲ್ಲಿ ಇದುವರೆಗೆ ೮೨೧ ನೀರಾವರಿ ಯೋಜನೆಗಳು ಅಪೂರ್ಣ ಸ್ಥಿತಿಯಲ್ಲಿವೆ ಎಂದು ಸಂಸತ್ತಿನ ಸ್ಥಾಯೀ ಸಮಿತಿ ೨೦೧೮ರಲ್ಲಿ ವರದಿ ಕೊಟ್ಟಿತ್ತು. ಈಗಿನ ಲೆಕ್ಕ ಗೊತ್ತಿಲ್ಲ. ಹತ್ತು ಸಾವಿರ ತಲುಪಿರಬಹುದು.



**(ಲೇಖಕರು ಕನ್ನಡದ ಖ್ಯಾತ ವಿಜ್ಞಾನ ಲೇಖಕರು ಮತ್ತು ಅಂಕಣಕಾರರು)**

# ನಾ ಕಂಡ ಸಮಾಜವಾದಿ ರಾಜಕಾರಣ : ಜಾರ್ಜ್ ಫರ್ನಾಂಡೀಸ್ ಮಾದರಿ

-ಅನಿಲ್ ಹೆಗ್ಡೆ

ಶಿವಮೊಗ್ಗದ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ದಶಮಾನೋತ್ಸವದ ಅಂಗವಾಗಿ ಕಳೆದ ಮಾರ್ಚ್ ೨೮ರಂದು ಏರ್ಪಡಿಸಲಾಗಿದ್ದ 'ಸಮಾಜವಾದಿ ಸಂಗಮ; ಗೋಷ್ಠಿಯಲ್ಲಿ ಮಂಡಿತವಾದ ಈ ಭಾಷಣದಲ್ಲಿ ಸ್ವಾತಂತ್ರ್ಯೋತ್ತರ ಭಾರತದಲ್ಲಿನ ಲೋಹಿಯಾ ಧಾರೆಯ ಸಮಾಜವಾದಿ ರಾಜಕಾರಣದ ಒಂದು ಉಜ್ವಲ ಅಧ್ಯಾಯವನ್ನು ತೆರೆದಿರಿಸಲಾಗಿದೆ. ಭಾರತದಲ್ಲಿ ವಿಫಲವಾಗಿದೆ ಎಂದು ದೂಷಿಸುವ ಟೀಕಾಕಾರರ ಕಣ್ಣು ತೆರೆಸುವಂತಿರುವ ಇಲ್ಲಿನ ವಿವರಗಳು ಇಂದೂ ಸಮಾಜವಾದಿ ರಾಜಕಾರಣವನ್ನು ಪುನರುಜ್ಜೀವಿಸ ಬಯಸುವವರಿಗೆ ಸ್ಫೂರ್ತಿ ನೀಡುವಂತಿದೆ-ಸಂ.



**ಗು**ದ್ದಲಿ, ಜೈಲು ಮತ್ತು ಮತಪತ್ರ ಇವು, ಸಮಾಜವಾದಿ ರಾಜಕಾರಣಕ್ಕಾಗಿ ಲೋಹಿಯಾರವರು ಸೂಚಿಸಿದ್ದ ಮೂರು ಸೂತ್ರಗಳಾಗಿದ್ದವು. ತನ್ನ ಜೀವನಕಾಲದಲ್ಲಿ ಈ ಮೂರನ್ನೂ ಪರಿಣಾಮಕಾರಿಯಾಗಿ ಆಚರಣೆಯಲ್ಲಿ ತಂದ ಸಮಾಜವಾದಿಗಳಲ್ಲಿ ಜಾರ್ಜ್ ಫರ್ನಾಂಡಿಸ್ ಪ್ರಮುಖರು. ಗುದ್ದಲಿ ರಚನಾತ್ಮಕ ಕಾರ್ಯಕ್ರಮವನ್ನೂ, ಜೈಲು ಹೋರಾಟವನ್ನೂ, ಮತಪತ್ರ ಸಂಸದೀಯ ಲೋಕತಂತ್ರವನ್ನೂ ಸಂಕೇತಿಸುತ್ತದೆ.

**ರಚನಾತ್ಮಕ ಕಾರ್ಯಕ್ರಮ**: ಜಾರ್ಜ್ ಫರ್ನಾಂಡಿಸ್ ಮುಖ್ಯವಾಗಿ ಅಸಂಘಟಿತ ಕ್ಷೇತ್ರದ ಕಾರ್ಮಿಕರನ್ನು ಸಂಘಟಿಸಿ ಕಾರ್ಮಿಕರ ಹಕ್ಕುಗಳಿಗೆ ಹೋರಾಡಿ ಯಶಸ್ವಿ ಕಾರ್ಮಿಕ ಮುಖಂಡರಾದರು. ಮುಂಬೈನಲ್ಲಿನ ಎಂಬತ್ತು ಸಾವಿರ ಟ್ಯಾಕ್ಸಿ ಚಾಲಕರ ಸಂಘಟನೆಯಾದ 'ಬಾಂಬೆ ಟ್ಯಾಕ್ಸಿಮೆನ್ಸ್ ಯೂನಿಯನ್'ನ ಅಧ್ಯಕ್ಷರಾಗಿದ್ದರು. ೧೯೬೯ರಲ್ಲಿ ಬ್ಯಾಂಕ್ ರಾಷ್ಟ್ರೀಕರಣದ ಮೊದಲು ಟ್ಯಾಕ್ಸಿ ಚಾಲಕರು ವಾಹನ ಮಾಲೀಕರಾಗಲು ಬ್ಯಾಂಕುಗಳಿಂದ ಸಾಲ ಸಿಗುವುದು ದುರ್ಲಭವಾಗಿತ್ತು. ಬ್ಯಾಂಕ್ ರಾಷ್ಟ್ರೀಕರಣಕ್ಕಾಗಿ ಹೋರಾಟದ ಜೊತೆಜೊತೆಗೆ ಬ್ಯಾಂಕ್ ರಾಷ್ಟ್ರೀಕರಣದ ಒಂದು ವರ್ಷ ಮೊದಲೇ ೧೯೬೮ರಲ್ಲಿ 'ಅಸಂಘಟಿತ ಕಾರ್ಮಿಕರ ಶೇರು' ಹಣದಿಂದ 'ಜರ್ಮನ್ ಲೇಬರ್ ಬ್ಯಾಂಕ್' ಮಾಡೆಲ್‌ನಲ್ಲಿ ೧ ಲಕ್ಷ ರೂಪಾಯಿ ಶೇರ್‌ನೊಂದಿಗೆ 'ಬಾಂಬೆ ಲೇಬರ್ ಕೋ-ಆಪರೇಟಿವ್ ಬ್ಯಾಂಕ್' ಸ್ಥಾಪಿಸಿದರು. ಈ ಬ್ಯಾಂಕ್‌ನ ಕಾರಣ ಮುಂಬೈಯ ಐವತ್ತು ಸಾವಿರಕ್ಕೂ ಹೆಚ್ಚು ಚಾಲಕರು ಟ್ಯಾಕ್ಸಿ ಮಾಲೀಕರಾದರು. ಈ ಬ್ಯಾಂಕ್ ಈಗ 'ನ್ಯೂ ಇಂಡಿಯಾ ಕೋಪರೇಟಿವ್ ಬ್ಯಾಂಕ್' ಹೆಸರಿನಲ್ಲಿ ೩೦ ಶಾಖೆಗಳನ್ನು ಹೊಂದಿದೆ.

ಜಾರ್ಜ್ ಇಂಗ್ಲಿಷ್‌ನಲ್ಲಿ 'ದಿ ಅದರ್ ಸೈಡ್' ಮತ್ತು ಹಿಂದಿಯಲ್ಲಿ 'ಪ್ರತಿಪಕ್ಷ' ಸಮಾಜವಾದಿ ಮಾಸಿಕ ಪ್ರಕಟಿಸುತ್ತಿದ್ದರು. ಸಂಪೂರ್ಣ ಭಾರತದ ಕುಶಲಕರ್ಮಿಗಳಿಗೆ ಮಾರುಕಟ್ಟೆ ಒದಗಿಸುತ್ತಿರುವ ದೆಹಲಿಯಲ್ಲಿನ 'ದಿಲ್ಲಿ ಹಾಟ್'ಗೆ ಅವರೇ ಪ್ರೇರಣೆ.

ಜೈಲು: ತನ್ನ ಕಾರ್ಮಿಕ ಸಂಘಟನೆಯ ಕಾರ್ಮಿಕರನ್ನೇ ಬಳಸಿಕೊಂಡು ಜಾರ್ಜ್ ಜಗತ್ತು ಮತ್ತು ಸಮಾಜದಲ್ಲಿನ ಅನೇಕ ವಿಕೃತಿಗಳನ್ನು ಸರಿಪಡಿಸಲು ಜೀವನದುದ್ದಕ್ಕೂ ಹೋರಾಟ ನಡೆಸಿದರು. ೧೯೪೯ರಿಂದ ೧೯೭೭ರ ಮಧ್ಯೆ ಅವರು ಅನೇಕ ಹೋರಾಟಗಳಲ್ಲಿ ಐದೂವರೆ ವರ್ಷ ಸೆರೆಮನೆವಾಸ ಅನುಭವಿಸಿದ್ದಲ್ಲದೇ ತುರ್ತುಪರಿಸ್ಥಿತಿ ಸಮಯದಲ್ಲಿ ಸೋಷಲಿಸ್ಟ್ ಪಾರ್ಟಿಯ ಅಧ್ಯಕ್ಷರಾಗಿ ಬಂಧನಕ್ಕೊಳಗಾಗುವ ತನಕ ೧೧ ತಿಂಗಳು ಭೂಗತರಾಗಿದ್ದು ದೇಶದಾದ್ಯಂತ ಕ್ರಾಂತಿಕಾರಿ ಹೋರಾಟ ನಡೆಸಿದರು.

ಇವರು ಭಾಗವಹಿಸಿದ ಅನೇಕ ಹೋರಾಟಗಳಲ್ಲಿ ಪ್ರಮುಖವಾದವು, ಗೋವಾ ವಿಮೋಚನೆಗಾಗಿ, ಟಿಬೆಟಿನ ಅತಿಕ್ರಮಣದ ವಿರುದ್ಧ ೧೯೭೪ರಲ್ಲಿ ಅವರ ನೇತೃತ್ವದಲ್ಲಿ ನಡೆದ ಐತಿಹಾಸಿಕ ರೈಲು ಮುಷ್ಕರ, ಪತ್ರಿಕಾ ಸ್ವಾತಂತ್ರ್ಯ-ಮಹಿಳಾ ಸಶಕ್ತೀಕರಣ-ವಿಕೇಂದ್ರೀಕರಣ-ಮದ್ಯನಿಷೇಧಕ್ಕಾಗಿ, ಮ್ಯಾನ್ಮಾರ್‌ನಲ್ಲಿ ಪ್ರಜಾಪ್ರಭುತ್ವದ ಪುನರ್‌ಸ್ಥಾಪನೆಗಾಗಿ, ಶ್ರೀಲಂಕಾದ ಈಳಂ ತಮಿಳರ ಮಾನವಾಧಿಕಾರಕ್ಕಾಗಿ, ಭೂತಾನಿನ ವಿರೋಧಪಕ್ಷದ ನಾಯಕ ರಾಂಗ್ಟೊಂಗ್ ದೋರ್ಜಿಯನ್ನು ತಿಹಾರ್ ಜೈಲಿನಿಂದ ಬಿಡುಗಡೆಗೊಳಿಸಲು, ೧೯೮೪ರ ಸಿಕ್ಖರ ವಿರುದ್ಧದ ದಂಗೆ ನಿಲ್ಲಿಸಲು, ಭೂಪಾಲ್ ದುರಂತದ ವಿಕಿರಣ ಪೀಡಿತರಿಗೆ ನ್ಯಾಯ ದೊರಕಿಸಲು, ಈ ಸಂಬಂಧ ವಾರನ್ ಅಂಡರ್ಸನ್ ದೇಶದಿಂದ ಪರಾರಿಯಾಗಲು ಅನುವು ಮಾಡಿಕೊಟ್ಟಿದ್ದರ ವಿರುದ್ಧ, ಜಗತ್ತಿನಾದ್ಯಂತ ಮಾನವಾಧಿಕಾರಕ್ಕಾಗಿ ಹೋರಾಟ, ಭ್ರಷ್ಟಾಚಾರ-ಕುಟುಂಬ ರಾಜಕಾರಣ, ಬೆಲೆಏರಿಕೆ ವಿರುದ್ಧ, ಸ್ವದೇಶಿ ಪರವಾಗಿ, ೧೯೯೧ರ ಹೊಸ ಆರ್ಥಿಕ ನೀತಿ, ಗ್ಯಾಟ್, ಕುಲಾಂತರಿ ಬೀಜದ ವಿರುದ್ಧ ಹೀಗೆ ಅನೇಕ ಹೋರಾಟ ನಡೆಸಿದರು. ರೈಲು ಮುಷ್ಕರ ಜಗತ್ತಿನಲ್ಲಿ ಅತಿದೊಡ್ಡ ಮುಷ್ಕರವಾಗಿದ್ದು, ಜಾರ್ಜ್‌ರನ್ನು ಅಂತರರಾಷ್ಟ್ರೀಯ ಮಟ್ಟದ ನಾಯಕನನ್ನಾಗಿಸಿತು.

ತುರ್ತುಪರಿಸ್ಥಿತಿಯಲ್ಲಿ ಭೂಗತರಾಗಿದ್ದ ಜಾರ್ಜ್ ಕಲ್ಕತ್ತಾದಲ್ಲಿ ಬಂಧನಕ್ಕೊಳಗಾದಾಗ 'ಸೋಶಿಯಲಿಸ್ಟ್ ಇಂಟರ್‌ನ್ಯಾಷನಲ್'ನ ಮುಖಂಡರಾದ ಬ್ರಿಟನ್ ಪ್ರಧಾನಿ ಜೇಮ್ಸ್ ಕೆಲಗನ್, ಜರ್ಮನಿಯ ಚಾನ್ಸಲರ್ ವಿಲಿ ಬ್ರಾಂಟ್, ಇಂದಿರಾಗಾಂಧಿಯವರ ಜೊತೆ ಅದೇ ರಾತ್ರಿ ಜಾರ್ಜ್ ಸುರಕ್ಷಿತತೆ ಬಗ್ಗೆ ಮಾತನಾಡಿ ಕಾಳಜಿ ವ್ಯಕ್ತಪಡಿಸಿದರು. ಆಸ್ಟ್ರಿಯಾದ ಚಾನ್ಸಲರ್ ಬ್ರುನೋ ಕ್ರೈಸ್ಕಿ, ಸ್ವೀಡನ್ ಪ್ರಧಾನಿ ಓಲೋಫ್ ಪಾಮೆ ಮತ್ತು ನಾರ್ವೆಯ ಪ್ರಧಾನಿ ಓಡವರ್ ನಾರ್ಡ್ ಲೀ ಇಂದಿರಾಗಾಂದಿಯವರಿಗೆ ಕರೆ ಮಾಡಿ ಜಾರ್ಜ್ ಜೀವಕ್ಕೆ ಯಾವುದೇ ರೀತಿಯಲ್ಲಿ ಹಾನಿಯುಂಟಾದರೆ, ತಮ್ಮ ದೇಶಗಳ ಮಧ್ಯೆ ಇರುವ ರಾಜತಾಂತ್ರಿಕ ಸಂಬಂಧ ಕೊನೆಗೊಳ್ಳುವುದು ಎಂಬ ಎಚ್ಚರಿಕೆ ನೀಡಿದರು.

ಜಾರ್ಜ್ ರಾಜದ್ರೋಹದ ಆರೋಪದ ಮೇಲೆ ಬರೋಡ ಡೈನಮೈಟ್ ಮೊಕದ್ದಮೆ ಎದುರಿಸುತ್ತಿದ್ದ ಜೈಲಿನಿಂದಲೇ ೧೯೭೭ರ ಚುನಾವಣೆಗೆ ಸ್ಪರ್ಧಿಸಿ ಮುಜಫರ್‌ಪುರ್‌ದಿಂದ ೩.೩೪ ಲಕ್ಷ ಮತಗಳ ಅಂತರದಲ್ಲಿ ಜಯಗಳಿಸಿದ್ದರು. ತುರ್ತುಪರಿಸ್ಥಿತಿಯಲ್ಲಿ ವೀರನಂತೆ ಹೋರಾಟ ಮಾಡಿದ ಕಾರಣ ಜನ, ಜೆಪಿ ನಂತರ ಜಾರ್ಜ್‌ರನ್ನು ನೆನಪಿಸಿಕೊಳ್ಳುತ್ತಾರೆ.

೧೯೫೭ರಲ್ಲಿ ತನ್ನ ೨೭ನೇ ವಯಸ್ಸಿನಲ್ಲಿಯೇ ಕಾರ್ಮಿಕರ ಹಕ್ಕಿಗಾಗಿ ಅವರ ನೇತೃತ್ವದಲ್ಲಿ ನಡೆದ ಮುಷ್ಕರಕ್ಕೆ ವಿಸ್ತೃತ ಜನಬೆಂಬಲ ಗಳಿಸಲು ಯಶಸ್ವಿ 'ಬಾಂಬೆ ಬಂದ್' ಮಾಡಿದರು.

ಅವರು ಗಲ್ಲುಶಿಕ್ಷೆ ವಿರೋಧಿಯಾಗಿದ್ದರು. ಆ ಕಾಲದ ನಕ್ಸಲ್‌ವಾದಿಗಳ ಸ್ನೇಹಿತರಾಗಿದ್ದು ಸಾವಿರಾರು ನಕ್ಸಲರನ್ನು ಜೈಲಿನಿಂದ ಬಿಡುಗಡೆಗೊಳಿಸಿ ಅವರು ನಕ್ಸಲ್‌ವಾದ ತ್ಯಜಿಸಿ ರಾಜಕೀಯದ ಮುಖ್ಯಧಾರೆಗೆ ಬರುವಂತೆ ಪ್ರೇರೇಪಿಸಿದರು. ಹಾಗಾಗಿ ಐಪಿಎಫ್‌ನ ವಿನೋದ್ ಮಿಶ್ರ, ಕೊಂಡಪಲ್ಲಿ ಸೀತಾರಾಮಯ್ಯ, ಗದ್ದರ್ ಅವರ ಆಪ್ತರಾಗಿದ್ದರು.

೧೯೯೩ರ ಅಕ್ಟೋಬರ್‌ನಲ್ಲಿ ಟಾಡಾ ವಿರುದ್ಧ ಜಾರ್ಜ್ ಅವರ ನೇತೃತ್ವದ ಹೋರಾಟದ ಕಾರಣ ಗುಜರಾತಿನ ಜೈಲಿನಿಂದ ನೂರಾರು ಮುಸಲ್ಮಾನರನ್ನು ಚಿಮನ್‌ಭಾಯಿ ಪಟೇಲ್ ಸರಕಾರ ಬಿಡುಗಡೆಗೊಳಿಸಿತ್ತು. ಕುಟುಂಬ ರಾಜಕಾರಣದ ವಿರೋಧಿಯಾಗಿದ್ದ ಅವರು ಎಂದೂ ತನ್ನ ಪತ್ನಿ ಅಥವಾ ಮಗನನ್ನು ರಾಜಕೀಯದಲ್ಲಿ ಬೆಳೆಯಲು ಪ್ರೋತ್ಸಾಹ ನೀಡಲಿಲ್ಲ.

ಈಳಂ ತಮಿಳರ ಮಾನವಾಧಿಕ್ಕಾರಕ್ಕಾಗಿ ರಕ್ಷಣಾ ಸಚಿವರಾಗಿದ್ದಾಗಲೂ ತನ್ನ ಇತಿಮಿತಿ ಮೀರಿ ತನ್ನದೇ ಸರಕಾರಕ್ಕೆ ಮುಜುಗರ ಉಂಟುಮಾಡಬೇಕಾದದ್ದರ ಹೊರತಾಗಿಯೂ ಅವರು ನೀಡಿದ ಬೆಂಬಲದಿಂದ ಅಲ್ಲಿನ ಅನೇಕರು ಅವರ ಸ್ನೇಹಿತರಾದರು. ಡಾ. ರಾಜಕುಮಾರ್ ಅಪಹರಣದ ಸಂದರ್ಭದಲ್ಲಿ, ಸರಕಾರ ತಮ್ಮ ಈಳಂ ಸ್ನೇಹಿತರ ಜಾಲದ ಮೂಲಕ ವೀರಪ್ಪನ್‌ನನ್ನು ಸಂಪರ್ಕಿಸಲು ಜಾರ್ಜ್‌ರನ್ನು ಕೇಳಿಕೊಂಡಾಗ, ಅವರ ವಿನಂತಿಯ ಮೇರೆಗೆ ಭಾರತದಲ್ಲಿ ಈಳಂನ ಬೆಂಬಲಿಗರಾದ ಪಾಲ ನೆಡುಮಾರನ್ ಮತ್ತು ಷಣ್ಮುಗಸುಂದರಂ ತಡಮಾಡದೆ ಕಾಡಿಗೆ ಹೋಗಿ ವೀರಪ್ಪನ್‌ನನ್ನು ಕಂಡು ಮಾತನಾಡಿ ಅವನ ವಶದಲ್ಲಿದ್ದ ರಾಜಕುಮಾರ್ ಜೊತೆಗೆ ವೀರಪ್ಪನ್ ಸಮ್ಮುಖದಲ್ಲಿ ಫೋಟೋ ತೆಗೆಸಿ ಪತ್ರಿಕೆಗಳಿಗೆ ಬಿಡುಗಡೆ ಮಾಡಿದಾಗ, ಸರಕಾರಗಳು ಮತ್ತು ಜನತೆ ನಿಟ್ಟುಸಿರು ಬಿಟ್ಟರು. ಈ ಘಟನೆ ರಾಜಕುಮಾರ್ ಬಿಡುಗಡೆಗೊಳ್ಳಲು ೨-೩ ಕಾರಣಗಳಲ್ಲಿ ಪ್ರಮುಖವಾದದ್ದು.

**ಮುಕ್ತಮಾರುಕಟ್ಟೆ ವಿರುದ್ಧ ಹೋರಾಟಗಳು**: ೧೯೯೧ರ ಹೊಸ ಆರ್ಥಿಕ ನೀತಿ, ಮುಕ್ತಮಾರುಕಟ್ಟೆ ಮತ್ತು ಉದಾರೀಕರಣ ಅನುಷ್ಠಾನದ ಅಂಗವಾಗಿ ೧೯೯೪ರಲ್ಲಿ ಗ್ಯಾಟ್ ಒಪ್ಪಂದಕ್ಕೆ ಸರಕಾರ ಸಹಿ ಹಾಕುವುದರಿಂದ ಕೃಷಿ ಕ್ಷೇತ್ರದಲ್ಲಿ ಮುಖ್ಯವಾಗಿ ಕುಲಾಂತರಿ ಬೀಜದ ಪ್ರವೇಶವಾಗುವುದರ ಅಪಾಯವನ್ನು ಜಾರ್ಜ್ ಮನಗಂಡರು. ಮೊನ್ಸಾಂಟೋ ಸೇರಿ ಬೀಜ ಮತ್ತು ಔಷಧ ತಯಾರಿಸುವ ಬಹುರಾಷ್ಟ್ರೀಯ ಕಂಪನಿಗಳೇ ಈ ಕ್ಷೇತ್ರಗಳಲ್ಲಿ ಏಕಸ್ವಾಮ್ಯ ಸ್ಥಾಪಿಸಲು ಸಂಬಂಧಿತ ಒಪ್ಪಂದದ ಕರಡನ್ನು ತಾವೇ ಬರೆದು, ಐಎಂಎಫ್ ಮತ್ತು ವಿಶ್ವಬ್ಯಾಂಕ್ ಮೂಲಕ ಭಾರತ ಮತ್ತು ಇತರ ತೃತೀಯ ಜಗತ್ತಿನ ರಾಷ್ಟ್ರಗಳು ಗ್ಯಾಟ್ ಒಪ್ಪಂದಕ್ಕೆ ಸಹಿ ಹಾಕುವಂತೆ ಒತ್ತಡ ತರುತ್ತಿರುವುದು ಜಾರ್ಜ್ ಗಮನಕ್ಕೆ ಬಂತು. ಕೂಡಲೇ ಅವರು ಈ ಸಾಮ್ರಾಜ್ಯಶಾಹಿ ಶಕ್ತಿಗಳ ಷಡ್ಯಂತ್ರ ಸೋಲಿಸಲು ಸಂಸತ್ತಿನ ಒಳಗೆ ಮತ್ತು ಹೊರಗೆ ಆಕ್ರಮಣಕಾರಿಯಾಗಿ ಹೋರಾಟ ಆರಂಭಿಸಿದರು. ಗ್ಯಾಟ್

ಒಪ್ಪಂದ ದೇಶದ ಸಾರ್ವಭೌಮತೆಗೆ ಅಪಾಯವೆಂದೂ, ಇದು ರೈತ ವಿರೋಧಿ ನೀತಿ ಮಾತ್ರವಲ್ಲ ದೇಶಕ್ಕೆ ಬರಲಿರುವ ವಿದೇಶಿ ಕಂಪನಿಗಳಿಗೆ ಅನುಕೂಲ ಕಲ್ಪಿಸಲು, ಕಾರ್ಮಿಕ ಕಾನೂನುಗಳನ್ನು ದುರ್ಬಲಗೊಳಿಸುವಂತಹುದು ಎಂದು ಅವರು ಗುರುತಿಸಿದರು. ೧೯೯೧ರಿಂದ ಇಂದಿನವರೆಗೆ ೩೦ ವರ್ಷಗಳಲ್ಲಿ ಕಾರ್ಮಿಕ ಸಂಘಟನೆಗಳು ದುರ್ಬಲಗೊಂಡಿರುವುದು ಮತ್ತು ಇದರ ಇತಿಹಾಸ ಇದಕ್ಕೆ ಸಾಕ್ಷಿ.

ಗ್ಯಾಟ್ ಒಪ್ಪಂದದ ವಿರುದ್ಧ ೧೯೯೪ರ ಮಾರ್ಚ್ ೧ ರಂದು ಸಮಾಜವಾದಿ ಅಭಿಯಾನ ವೇದಿಕೆಯಿಂದ ಜಾರ್ಜ್ ಸಂಸತ್ತಿನ ಮುಂದೆ ಅನಿರ್ದಿಷ್ಟಾವಧಿ ಸತ್ಯಾಗ್ರಹ ಪ್ರಾರಂಭಿಸಿದರು. ಈ ಸತ್ಯಾಗ್ರಹವನ್ನು, ಜಾರ್ಜ್ ಅವರಿಗೆ ಅಲ್ಜೈಮರ್ಸ್ ಕಾರಣ ನೆನಪಿನ ಶಕ್ತಿ ಹೋಗುವ ತನಕ ಕಾರ್ಯಕರ್ತರು ೨೦೦೮ರವರೆಗೆ ಹದಿನಾಲ್ಕು ವರ್ಷ ೫೧೯೦ ದಿನ ನಡೆಸಿದ್ದು, ನರಸಿಂಹರಾವ್, ದೇವೇಗೌಡ, ಗುಜ್ರಾಲ್, ವಾಜಪೇಯಿ ಮತ್ತು ಮನ್ ಮೋಹನ್ ಸಿಂಗ್ ಪ್ರಧಾನಿಗಳಾಗಿದ್ದ ಸಮಯ (ಜಾರ್ಜ್ ರಕ್ಷಣಾ ಮಂತ್ರಿಯಾಗಿ ತಾವು ಸಂಚಾಲಕರಾಗಿದ್ದ ಎನ್ ಡಿ ಎ ಸರಕಾರದ ಸಮಯದಲ್ಲೂ) ನಿರಂತರವಾಗಿ ಪ್ರತಿದಿನ ದೆಹಲಿಯ ಸಂಸದ್ ಮಾರ್ಗ ಪೊಲೀಸ್ ಸ್ಟೇಷನ್‌ನಲ್ಲಿ ಬಂಧನಕ್ಕೊಳಗಾಗುತ್ತಿದ್ದರು.

ಮಾಧ್ಯಮ ಕ್ಷೇತ್ರದಲ್ಲಿ ಉದಾರೀಕರಣದಿಂದಾಗಿ ಪತ್ರಿಕೋದ್ಯಮದ ಕಾರ್ಪೊರೇಟೀಕರಣವಾಗಿ ಪ್ರಜಾಪ್ರಭುತ್ವಕ್ಕೆ ಧಕ್ಕೆ ಉಂಟಾಗುವುದೆಂಬ ಜಾರ್ಜ್‌ರ ಮಾತನ್ನು ಒಪ್ಪಿ ಅವರ ಈ ಸತ್ಯಾಗ್ರಹದ ನಾಲ್ಕನೇ ದಿನ ದೆಹಲಿಯ ೧೦೫ ಪತ್ರಕರ್ತರು ಪ್ರೆಸ್ ಕ್ಲಬ್ ಆಫ್ ಇಂಡಿಯಾದಿಂದ ಮೆರವಣಿಗೆಯಲ್ಲಿ ಬಂದು ಹಿರಿಯ ಪತ್ರಕರ್ತ ರಾಮ್ ಬಹದ್ದೂರ್ ರಾಯ್ ಅವರ ನೇತೃತ್ವದಲ್ಲಿ ಸಂಸತ್ತಿನ ಮುಂದೆ ಬಂಧನಕ್ಕೊಳಗಾದರು. ಮಾಧ್ಯಮಗಳಿಗೆ ಸಂಬಂಧಪಟ್ಟಂತೆ ಕೂಡ ಜಾರ್ಜ್ ಅವರ ಭವಿಷ್ಯವಾಣಿ ಇಂದು ಪೂರ್ಣ ನಿಜವಾಗಿದೆಯಲ್ಲವೆ?

ಈ ದೀರ್ಘ ಸತ್ಯಾಗ್ರಹದ ಪ್ರಾರಂಭದ ದಿನಗಳಲ್ಲಿ ಪ್ರತಿನಿತ್ಯ ಒಬ್ಬೊಬ್ಬ ಸಂಸತ್ ಸದಸ್ಯ ಸತ್ಯಾಗ್ರಹದ ನೇತೃತ್ವ ವಹಿಸುತ್ತಿದ್ದರು. ಗ್ಯಾಟ್ ಒಪ್ಪಂದದ ವಿರುದ್ಧದ ಈ ಹೋರಾಟದ ಪೂರ್ವಭಾವಿ ಸಿದ್ಧತೆಗಾಗಿ ೧೯೯೪ರ ಜನವರಿ ೨೦ರಂದು ದೆಹಲಿಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕದಿಂದ ಸಿದ್ದರಾಮಯ್ಯ ಮತ್ತು ಬಿಆರ್ ಪಾಟೀಲ್ ಭಾಗವಹಿಸಿದ್ದರು. ೧೪ ವರ್ಷ ನಿರಂತರವಾಗಿ ನಡೆಯುತ್ತಿದ್ದ ಈ ಸತ್ಯಾಗ್ರಹಕ್ಕಾಗಿ ಜಂತರ್ ಮಂತರ್ ಬಳಿ ಇರುತ್ತಿದ್ದ ಕಾರ್ಯಕರ್ತರು ಅಲ್ಲಿ ತಮ್ಮ ಮಾಲುಗಳನ್ನು ಅಂಗಡಿಗಳಿಗೆ ವಿತರಿಸಲು ಬರುತ್ತಿದ್ದ ಪೆಪ್ಸಿ ಕೋಕೋಕೋಲಾ ಇತ್ಯಾದಿ ಬಹುರಾಷ್ಟ್ರೀಯ ಕಂಪನಿಗಳ ವಾಹನಗಳನ್ನು ತಡೆಹಿಡಿಯುತ್ತಿದ್ದು, ಅವು ಸತ್ಯಾಗ್ರಹಿಗಳನ್ನು ದೂರದಿಂದಲೇ ನೋಡಿ ಹಿಂತಿರುಗುತ್ತಿದ್ದವು. ಗಾಂಧಿವಾದಿಗಳಿಂದ ಹಿಡಿದು ನಕ್ಸಲವಾದಿ, ಸಮಾಜವಾದಿ ಮತ್ತು ಸಂಘಪರಿವಾರದವರವರೆಗೆ ಎಲ್ಲರನ್ನೂ ಒಂದೇ ವೇದಿಕೆಯಲ್ಲಿ ತರುವುದು ಜಾರ್ಜ್‌ರ ಉದ್ದೇಶವಿತ್ತು. ೧೯೯೪ರ ಮೇ ೨೮ರಂದು ಧನಬಾದ್‌ನಲ್ಲಿ ಜಾರ್ಜ್ ಆಯೋಜಿಸಿದ ಸಭೆಯಲ್ಲಿ ಗಾಂಧಿವಾದಿ ಸಿದ್ದರಾಜ್ ಧಡ್ಡ, ನಕ್ಸಲ್‌ವಾದಿ ನಾಯಕರಾದ ವಿನೋದ್ ಮಿಶ್ರಾ, ಸಮಾಜವಾದಿಗಳಾದ ನಿತೀಶ್ ಕುಮಾರ್ ಮತ್ತು ಕಾರ್ಮಿಕ ಮುಖಂಡ ಶರದ್ ರಾವ್ (ಹಿಂದೆ ಎಚ್‌ಎಂಎಸ್ ಅಧ್ಯಕ್ಷರಾಗಿದ್ದವರು) ಒಂದೇ ವೇದಿಕೆಗೆ ಬಂದರು.

**ಕಾಂಡ್ಲಾದಲ್ಲಿ ಕಾರ್ಗಿಲ್ ವಿರುದ್ಧ ಸತ್ಯಾಗ್ರಹ:** ೧೯೯೩ರ ಫೆಬ್ರವರಿಯಲ್ಲಿ ಗುಜರಾತಿನ ಕಾಂಡ್ಲಾ ಬಂದರಿನ ಸಮೀಪ ಅಮೆರಿಕದ ಅತಿದೊಡ್ಡ ಬೀಜ ಮತ್ತು ಧಾನ್ಯ ವ್ಯಾಪಾರದ ಕಂಪೆನಿ ಕಾರ್ಗಿಲ್‌ಗೆ ಉಪ್ಪು ತಯಾರಿಸಲು ಕೇಂದ್ರ ಸರಕಾರ ಹದಿನೈದು ಸಾವಿರ ಎಕರೆ ಜಮೀನು ನೀಡುವುದನ್ನು ಜಾರ್ಜ್ ಲೋಕಸಭೆಯಲ್ಲಿ ಕಟುವಾಗಿ ಖಂಡಿಸಿ ವಿರೋಧಿಸಿದರು. ಸರಕಾರ ಮಣಿಯದಾಗ ೧೯೯೩ರ ಮೇ ೧೯ರಂದು ಕಾಂಡ್ಲಾದಲ್ಲಿ ಸತ್ಯಾಗ್ರಹ ಪ್ರಾರಂಭಿಸಿದರು. ದೇಶದ ಮೂಲೆಮೂಲೆಗಳಿಂದ ಪ್ರತಿನಿತ್ಯ ಸತ್ಯಾಗ್ರಹಿಗಳು ಕಾಂಡ್ಲಾಕ್ಕೆ ಬಂದು ಪ್ರತಿಭಟಿಸಿ ಸತ್ಯಾಗ್ರಹ ನಡೆಸಿದರು. ಈ ಸತ್ಯಾಗ್ರಹದಲ್ಲಿ ಪಾಲ್ಗೊಂಡವರಲ್ಲಿ ಚಂದ್ರಶೇಖರ್, ವಿಪಿ ಸಿಂಗ್, ರಬಿ ರಾಯ್, ಮಧು ದಂಡವತೆ, ಮೃಣಾಲ್ ಗೋರೆ, ಲಾಡ್ಲಿ ಮೋಹನ್ ನಿಗಮ್, ತುಳಸಿ ಬೋಡ, ಸುರೇಂದ್ರ ಮೋಹನ್ ಪ್ರಮುಖರು.

ಇದೇ ಹೊತ್ತಿಗೆ ಬಳ್ಳಾರಿಯಲ್ಲಿ ಕಾರ್ಗಿಲ್ ಕಂಪನಿಯ ಬೀಜ ಘಟಕದ ಗೋದಾಮಿನ ಮೇಲೆ ಕರ್ನಾಟಕ ರೈತ ಸಂಘದ ಪ್ರೊ. ಎಂ ಡಿ ನಂಜುಂಡಸ್ವಾಮಿಯವರ ನೇತೃತ್ವದ ರೈತಸಂಘ ದಾಳಿ ನಡೆಸಿತ್ತು. ಇದನ್ನು ಸಮರ್ಥಿಸಿ ಬೆಂಗಳೂರಿನಲ್ಲಿ ೨ ಆಗಸ್ಟ್ ೧೯೯೩ರಂದು ಜಾರ್ಜ್ ಸಭೆ ನಡೆಸಿದರು. ಒಂದೇ ವೈರಿಯ ವಿರುದ್ಧ ಹೋರಾಡುತ್ತಿರುವ ಇಬ್ಬರು ಸಮಾಜವಾದಿಗಳು ತಮ್ಮ ಎರಡು ದಶಕಗಳ ವೈಯಕ್ತಿಕ ಭಿನ್ನಾಭಿಪ್ರಾಯ ಮರೆತು ಒಂದೇ ವೇದಿಕೆಯಲ್ಲಿ ಬಂದರು. ಆಗ ಎಂಡಿಎನ್ ಅವರು, ತಮ್ಮ ಗೌರವಾರ್ಥ ಜಾರ್ಜ್ ಆಯೋಜಿಸಿದ ಸಭೆಯಲ್ಲಿ ಮಾತನಾಡಿ, ಜಾರ್ಜ್ ಕರೆಯನ್ವಯ ೧೯೯೩ರ ಅಕ್ಟೋಬರ್ ೨ರಂದು ಗುಜರಾತಿನ ಕಾಂಡ್ಲಾ ಬಂದರಿನ ಮುತ್ತಿಗೆಗಾಗಿ ಕರ್ನಾಟಕದಿಂದ ೨೫ ಸಾವಿರ ರೈತರು ಭಾಗವಹಿಸುವುದಾಗಿ ಘೋಷಣೆ ಮಾಡಿದರು. ಗಾಂಧಿನಗರ ಉಚ್ಚ ನ್ಯಾಯಾಲಯದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಜಾರ್ಜ್ ಹಾಕಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಸೆಪ್ಟೆಂಬರ್ ೨೭ರಂದು ವಿಚಾರಣೆಗೆ ಬಂದು ಕೋರ್ಟಿನಲ್ಲಿ ಸ್ವತಃ ಜಾರ್ಜ್ ಅವರೇ ವಾದಿಸಿದರು. ಕಾರ್ಗಿಲ್ ಕಂಪನಿ ತನ್ನ ಉಪ್ಪಿನ ಉತ್ಪಾದನೆಯ ಯೋಜನೆಯನ್ನು ರದ್ದುಮಾಡಿತು. ನಾಲ್ಕು ತಿಂಗಳು ನಡೆದ ಈ ಹೋರಾಟಕ್ಕೆ ಐತಿಹಾಸಿಕ ಜಯ ದೊರಕಿತು.

ಯುಪಿಎ–೨ರ ಸರಕಾರದಲ್ಲಿ ಮಂತ್ರಿಯಾಗಿದ್ದ ಜಯರಾಮ್ ರಮೇಶ್‌ರ ಸಚಿವಾಲಯ, ಸಂಸದೀಯ ಸ್ಥಾಯಿ ಸಮಿತಿ, ಸೋಪೋರಿ ಸಮಿತಿ ಮತ್ತು ಸರ್ವೋಚ್ಚ ನ್ಯಾಯಾಲಯದ ತಾಂತ್ರಿಕ ಸಮಿತಿ ಕುಲಾಂತರಿ ಬೆಳೆಗಳನ್ನು ಬೆಳೆಯುವುದಕ್ಕೆ ತಡೆ ನೀಡಿದವು. ಆ ಹೊತ್ತಿಗೆ ಜಾರ್ಜ್ ಅಲ್ಜೈಮರ್ಸ್ ಕಾಯಿಲೆಯಿಂದ ಹಾಸಿಗೆ ಹಿಡಿದಿದ್ದರು. ಆದರೆ ಅವರ ಪಕ್ಷದ ಮುಖ್ಯಮಂತ್ರಿ ನಿತೀಶ್ ಕುಮಾರ್ ಬಿಹಾರದಲ್ಲಿ ಕುಲಾಂತರಿ ಬೆಳೆ ಬೆಳೆಯಲು ಬಿಡುವುದಿಲ್ಲ ಮತ್ತು ಎಸ್‌ಇಜ಼ಡ್‌ಗೆ ಅನುಮತಿ ಕೊಡುವುದಿಲ್ಲ ಎಂದು ಘೋಷಣೆ ಮಾಡಿರುವುದು ಮತ್ತು ಮದ್ಯಪಾನ ನಿಷೇಧ ಮಾಡುವುದರ ಮೂಲಕ ರೈತ–ಕಾರ್ಮಿಕರ ಕುಟುಂಬಕ್ಕೆ ನೆಮ್ಮದಿ ಕೊಟ್ಟಿರುವುದು ಜಾರ್ಜ್ ಅವರಿಗೆ ಸಲ್ಲಬಹುದಾದ ನಿಜವಾದ ಶ್ರದ್ಧಾಂಜಲಿ.

**ಸಂಸದೀಯ ಲೋಕತಂತ್ರ:** ಜಾರ್ಜ್ ಒಂಬತ್ತು ಸಲ ಲೋಕಸಭೆಗೆ ಆಯ್ಕೆಯಾದರು. ಒಂದು ಸಲ ರಾಜ್ಯಸಭೆ ಸದಸ್ಯರಾದರು. ತುರ್ತುಪರಿಸ್ಥಿತಿ ಮುಗಿಯುತ್ತಲೇ ಜೈಲಿನಿಂದ ಬಿಡುಗಡೆಯಾಗಿ ನೇರವಾಗಿ ಮೊರಾರ್ಜಿ ಸಂಪುಟದಲ್ಲಿ ಸಂಪರ್ಕ ಮತ್ತು ಕೈಗಾರಿಕಾ ಸಚಿವರಾದರು. ಉದ್ಯೋಗ ಹುಡುಕಿ ಮುಂಬೈಗೆ ವಲಸೆ ಬಂದ ಕಾರ್ಮಿಕರು

(೧೧ನೇ ಪುಟಕ್ಕೆ

## ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಅಧ್ಯಯನ ಶಿಬಿರಗಳಿಂದ ನಾನೇನು ಕಲಿತೆ?



**ಲೋ**ಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನದ ಟ್ರಸ್ಟಿ ಆಗಿ ನನ್ನ ಪತಿ ದೊಗ್ಗಳ್ಳಿ ಪುಟ್ಟರಾಜು ಅವರು ತಮ್ಮ ಅಲ್ಪಸೇವೆಯನ್ನು ಸಲ್ಲಿಸಿದ್ದರು. ಅದಕ್ಕೆ ಈ ಗೌರವ ಅವರಿಗೆ ಸಲ್ಲಬೇಕಿತ್ತು. ದುರಾದೃಷ್ಟವಶಾತ್ ಅವರು ತೀವ್ರ ಹೃದಯಾಘಾತದಿಂದ ಕಳೆದ ೬ ತಿಂಗಳ ಹಿಂದೆ ನಮ್ಮನ್ನು ಬಿಟ್ಟು ಅಗಲಿರುವುದು ನಮಗೆ ತುಂಬಾ ಆಘಾತವಾಗಿದೆ.

ಪುಟ್ಟರಾಜು ಅವರು ಟ್ರಸ್ಟ್‌ನ ಬಗ್ಗೆ ಮೊದಲು ಪ್ರಸ್ತಾಪಿಸಿದ್ದಾಗ ಬೇರೆ ನಾಮಕಾವಸ್ಥೆ ಟ್ರಸ್ಟ್‌ಗಳ ಹಾಗೇ ಇದೂ ಕೂಡ ಎಂದು ನಾನು ಅಭಿಪ್ರಾಯಪಟ್ಟಿದ್ದೆ. ಏಕೆಂದರೆ ಇಂದು ಬಸವ ಅಂಬೇಡ್ಕರ್‌ರವರಂತಹ ಸಮಾಜಮುಖಿ ವ್ಯಕ್ತಿತ್ವಗಳನ್ನು ಟೋಕನ್ ಆಗಿ ಬಳಸಿಕೊಂಡು ತಮ್ಮ ಸ್ವಾರ್ಥ ಗಿಟ್ಟಿಸಿಕೊಳ್ಳುತ್ತಿರುವ ವಾಸ್ತವತೆಯ ಅರಿವು ನಮ್ಮೆಲ್ಲರಿಗಿದೆ. ಅದರಂತೆಯೇ ರಾಮ್‌ಮನೋಹರ್ ಲೋಹಿಯಾ ಅವರ ಹೆಸರಿನ ಈ ಟ್ರಸ್ಟ್ ಕೂಡ ಒಂದು ಎಂದು ಅಂದುಕೊಂಡಿದ್ದೆ. ಆದರೆ ನಮ್ಮ ಅಭಿಪ್ರಾಯ ಸುಳ್ಳಾಗಿದ್ದು ಕುಪ್ಪಳಿಯಲ್ಲಿ ಈ ಟ್ರಸ್ಟ್ ವಿವಿಧ ಸಾಮಾಜಿಕ ವಿಷಯಗಳ ಬಗ್ಗೆ ನಡೆಸುವ ಪ್ರತಿವರ್ಷದ ಕಾರ್ಯಾಗಾರ–ಶಿಬಿರ ನೋಡಿದಾಗ. ಪ್ರತಿ ವರ್ಷ ನಮ್ಮ ಕಾಲೇಜಿನ ಕೆಲವು ಆಸಕ್ತ ಪದವಿ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಈ ಕಾರ್ಯಾಗಾರಗಳಲ್ಲಿ ಪಾಲ್ಗೊಂಡಿದ್ದು ನನ್ನ ಮತ್ತು ಪುಟ್ಟರಾಜು ಅವರ ಪಾಲಿನ ಅವಿಸ್ಮರಣೀಯ ಅನುಭವ. ಹಲವಾರು ವಿದ್ವಾಂಸರು ಮತ್ತು ವಿಷಯ ಪರಿಣತರ ಜೊತೆ ಆಳವಾದ ಚಿಂತನೆ ಮಂಥನ ಚರ್ಚೆಗಳು ನಮಗೆ ಬೇರೆಯದೇ, ನಮ್ಮೊಳಗೆ ಅವಿತಿದ್ದ, ನಾವೂ ನಿರ್ಲಕ್ಷಿಸಿದ್ದ ಲೋಕದ ಪರಿಚಯ ಮಾಡಿಕೊಟ್ಟಿತು. ನಿಜವಾದ ಸಮಾಜವಾದದ ಕಲ್ಪನೆ ಹಾಗೂ ಅದರ ಅನಿವಾರ್ಯತೆ ಸ್ಪಷ್ಟವಾದದ್ದು ಈ ಕಾರ್ಯಾಗಾರಗಳಿಂದ. ಪುಟ್ಟರಾಜು ಅವರು ಇಂತಹ ಒಂದು ಟ್ರಸ್ಟ್‌ನ ಒಂದು ಭಾಗವಾಗಿದ್ದರು ಎನ್ನುವುದೇ ಒಂದು ಹೆಮ್ಮೆಯ ಸಂಗತಿ.

ಅಷ್ಟೇ ಅಲ್ಲದೇ ಈ ಕಾರ್ಯಾಗಾರದಲ್ಲಿ ಆಯ್ದುಕೊಳ್ಳುವ ವಿಷಯ, ಚರ್ಚೆಗಳು ಎಷ್ಟು ಗಂಭೀರವಾಗಿರುತ್ತವೆ ಎಂದರೆ ಅದಕ್ಕೆ ಸಾಕ್ಷಿಯಾಗಿ ನಾನೇ ಇದ್ದೇನೆ. ಐದಾರು ವರ್ಷಗಳ ಹಿಂದೆ ಶಿಕ್ಷಣ ಮಾಧ್ಯಮ ಕುರಿತ ಚರ್ಚೆಯಿಂದ ನಾನು ಎಷ್ಟು ಪ್ರಭಾವಿತಳಾದೆನೆಂದರೆ, ನಮ್ಮ ಮಕ್ಕಳಿಬ್ಬರನ್ನೂ ಅಂದೇ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಯಲ್ಲಿ ಓದಿಸಬೇಕು ಎಂದು ನಿರ್ಧರಿಸಿ ಈಗಲೂ ಕನ್ನಡ ಮಾಧ್ಯಮದ ಸರ್ಕಾರಿ ಶಾಲೆಯಲ್ಲಿ ಅವರ ಶಿಕ್ಷಣ ಮುಂದುವರೆದಿದೆ. ಹಾಗೇ ಮರು ವರ್ಷದ ಶಿಬಿರದಲ್ಲಿ 'ಭಾರತ್ ಸ್ಟೋರ್ಸ್' ಚಲನಚಿತ್ರದ ಪ್ರದರ್ಶನದ ನಂತರ ನಡೆದ ಚರ್ಚೆಯಿಂದ ನಾನೆಷ್ಟು ಪ್ರಭಾವಿತನಾದೆನೆಂದರೆ, ಇನ್ನೆಂದೂ ಮಾಲ್‌ಗಳಿಗೆ ಹೋಗುವುದಿಲ್ಲ ಎಂದು ಅಂದು ತೆಗೆದುಕೊಂಡ ಪ್ರತಿಜ್ಞೆ ಇವತ್ತಿಗೂ ಉಳಿಸಿಕೊಂಡಿದ್ದೇನೆ. ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು ಎನ್ನುವ ಸಮಾಜವಾದದ ಮಂತ್ರದಂತೆ ಆದಷ್ಟು ಸರಳ ಜೀವನ, ನಮ್ಮ ಇತಿ ಮಿತಿಯಲ್ಲಿ ಒಂದಷ್ಟು ಸೇವೆ ಕಾರ್ಯಗಳನ್ನು ಮಾಡುತ್ತಾ ಬಂದಿರುವುದು ನಮಗೆ ಆತ್ಮತೃಪ್ತಿ ತಂದುಕೊಟ್ಟಿದೆ.

ನಾನು ಮತ್ತು ನನ್ನ ಸಮಾನ ಮನಸ್ಕರು ಈ ಟ್ರಸ್ಟ್‌ನಲ್ಲಿ ಅಧಿಕೃತ ಪಾಲ್ಗೊಳ್ಳುವಿಕೆಯ ಹೊರತಾಗಿಯೂ ನಾವು ಈ ಟ್ರಸ್ಟ್‌ಗೋಸ್ಕರ ಕೆಲಸ ಮಾಡಲು ಸಿದ್ದರಿದ್ದೇವೆ. ನಮ್ಮ ಸಹಕಾರ ಮುಂದೆಯೂ ಶಾಶ್ವತವಾಗಿರುತ್ತದೆ. ಯಾಂತ್ರಿಕ ಬದುಕಿನ ನಡುವೆ ಒಂದಷ್ಟು ತೃಪ್ತಿ ಕೊಡಬಲ್ಲ ವಿಷಯ ಎಂದರೆ ಈ ಟ್ರಸ್ಟ್‌ನಲ್ಲಿ ಹಾಗೂ ಇದರ ಆಶಯದಡಿ ಕೆಲಸ ಮಾಡುವುದು. ಈ ಅವಕಾಶ ಹಾಗೂ ಗೌರವಕ್ಕೆ ನಾನು ಚಿರಋಣಿ..

**–ಪ್ರತಿಭಾ ಪುಟ್ಟರಾಜು, ದಾವಣಗೆರೆ**

# ರೈತ ಚಳುವಳಿ ಮುಂದೇನು?



ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯಿದೆಗಳ ವಿರುದ್ಧ ರೈತರು–ಮುಖ್ಯವಾಗಿ ಪಂಜಾಬ್, ಹರ್ಯಾಣ ಮತ್ತ ಉತ್ತರ ಪ್ರದೇಶದ ಪಶ್ಚಿಮ ಭಾಗದವರು–ಸಾವಿರಾರು ಸಂಖ್ಯೆಯಲ್ಲಿ ದೆಹಲಿಯ ಗಡಿಗಳಲ್ಲಿ ಕಳೆದ ಮೂರು–ನಾಲ್ಕು ತಿಂಗಳುಗಳಿಂದ ನಿರಂತರವಾಗಿ ಧರಣಿ ಮೂಲಕ ಪ್ರತಿಭಟಿಸುತ್ತಿದ್ದಾರೆ. ಚಳಿ ಗಾಳಿ, ಬಿಸಿಲಿಗೆ ನೂರಾರು ಜನ ಬಲಿಯಾಗಿದ್ದಾರೆ, ಸರ್ಕಾರ ಅವರ ಜೊತೆ ಹಲವು ಸುತ್ತುಗಳ ಸಂಧಾನ ನಡೆಸಿ ಸರ್ವೋಚ್ಚ ನ್ಯಾಯಾಲಯದ ಮಧ್ಯಸ್ಥಿಕೆಯಲ್ಲಿ ಕಾಯಿದೆಗಳಿಗೆ ಆರು ತಿಂಗಳುಗಳ ತಡೆ ನೀಡಿದ್ದರೂ ಚಳುವಳಿ ನಿಂತಿಲ್ಲ. ಕಾಯಿದೆಗಳನ್ನು ಪೂರ್ಣ ವಾಪಸ್ ಪಡೆಯುವವರೆಗೂ ಈ ಚಳುವಳಿ ಮುಂದುವರೆಯುವುದೆಂದು ರೈತ ಮುಖಂಡರು ಘೋಷಿಸಿದ್ದಾರೆ

ಈ ಮಧ್ಯೆ ಚಳುವಳಿಗೆ ದೇಶದ ಇತರ ಭಾಗಗಳಿಂದಲೂ ಬೆಂಬಲ ವ್ಯಕ್ತವಾಗುತ್ತಿದೆ, ಅಲ್ಲಿ ರೈತ ಮಹಾ ಪಂಚಾಯತ್‌ಗಳು ನಡೆದು ರೈತರಿಗೆ ಈ ಕಾಯಿದೆಗಳ ಅಪಾಯಗಳನ್ನು ವಿವರಿಸುತ್ತಾ ಅವರನ್ನು ಸಂಘಟಿಸುವ ಪ್ರಯತ್ನಗಳು ನಡೆದಿವೆ,

ತಮ್ಮ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗಳನ್ನು ಶಾಸನದ ಮೂಲಕ ಖಚಿತಪಡಿಸಬೇಕು ಮತ್ತು ಬೆಳೆಗಳ ಖರೀದಿ ವ್ಯವಸ್ಥೆಯನ್ನು ಖಾಸಗಿ ವ್ಯಾಪಾರ ವಲಯಕ್ಕೆ ಮುಕ್ತಗೊಳಿಸಬಾರದೆಂಬುದು ಈ ಚಳುವಳಿಯ ಮುಖ್ಯ ಬೇಡಿಕೆಗಳಾಗಿವೆ, ಒಟ್ಟಾರೆ ಈ ಕಾಯಿದೆಗಳು ರಾಷ್ಟ್ರದ ಕೃಷಿ ವಲಯವನ್ನು ಹಣ ಉಳ್ಳವರ ಸ್ವತ್ತನ್ನಾಗಿ ಮಾಡುವ ಹುನ್ನಾರವಾಗಿದೆ ಎಂದು ಚಳುವಳಿಕಾರರು ಹೇಳುತ್ತಿದ್ದರೆ, ಈ ಕಾಯಿದೆಗಳು ನಮ್ಮ ಕೃಷಿ ವಲಯದ ಸುಧಾರಣೆಗೆ ಮತ್ತು ರೈತರ ಬೆಳೆಗಳಿಗೆ ಉತ್ತಮ ಬೆಲೆ ದೊರಕಲು ಸಹಾಯ ಮಾಡುತ್ತವೆ ಎಂದು ಸರ್ಕಾರ ಹೇಳುತ್ತಿದೆ. ಈ ದ್ವಂದ್ವದ ಹಿನ್ನೆಲೆಯಲ್ಲಿ 'ಹೊಸ ಮನುಷ್ಯ' ಕರ್ನಾಟಕದ ಕೆಲ ರೈತರು, ರೈತ ಮುಖಂಡರು ಮತ್ತು ಕೃಷಿ ಆರ್ಥಿಕತೆಯ ಅಧ್ಯಯನ ನಡೆಸಿರುವ ಪರಿಣತರಿಗೆ ಮೂರು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆದು (ಒಂದಿಬ್ಬರಷ್ಟೇ ಉತ್ತರಿಸಿಲ್ಲ) ಇಲ್ಲಿ ನೀಡುತ್ತಿದೆ. ಶಿ. ನಮ್ಮ ಪ್ರಶೆಗಳು ಹೀಗಿದ್ದವು.

೧. ದೆಹಲಿಯಲ್ಲಿ ನಡೆದಿರುವ ರೈತ ಚಳುವಳಿಯ ಎರಡು ಮುಖ್ಯ ಬೇಡಿಕೆಗಳು ನಮ್ಮ ಕೃಷಿ ವಲಯದ ಹಿತ ದೃಷ್ಟಿಯಿಂದ ಎಷ್ಟು ಮಹತ್ವದವು ಎಂದು ನಿಮಗನ್ನಿಸುತ್ತದೆ ಮತ್ತು ಏಕೆ?

೨. ಈ ಚಳುವಳಿಯ ಪ್ರಾದೇಶಿಕ ವ್ಯಾಪ್ತಿ, ಅದರ ಬೇಡಿಕೆಗಳು ಮತ್ತು ನಾಯಕತ್ವ ಇವುಗಳ ಮಿತಿಗಳ ಬಗ್ಗೆ ನೀವು ಏನು ಹೇಳುವಿರಿ?

೩. ಈ ಚಳುವಳಿಯನ್ನು ಇಂದಿನ ಒಟ್ಟು ರಾಜಕೀಯ ಪರಿಸ್ಥಿತಿಯ ದೃಷ್ಟಿಯಿಂದ ಬಹು ನಿರ್ಣಾಯಕ ಎಂಬ ಅಭಿಪ್ರಾಯವಿದೆ. ಇದನ್ನು ನೀವು ಒಪ್ಪುವಿರಾ? ಒಪ್ಪಿದರೆ ಅಥವಾ ಒಪ್ಪದಿದ್ದರೆ ಕಾರಣಗಳನ್ನು ಕೊಡಿ

–ಸಂ.

## ರೈತರು ಭಿಕ್ಷುಕರಾಶಗಬೇಕಾಗುತ್ತದೆ...



೧, ಖಂಡಿತಾ ಬಹುಮುಖ್ಯ. ನಾವೇ ನಮ್ಮ ಉತ್ಪನ್ನಗಳಿಗೆ ಬೆಲೆ ನಿಗದಿಪಡಿಸಿಕೊಂಡರೆ ಕೊಳ್ಳುವವರಾರು? ಏನೇ ನ್ಯೂನ್ಯತೆಗಳಿದ್ದರೂ APMC ಯೇ ಉತ್ತಮ.

ಚಳುವಳಿಯ ಎರಡು ಮುಖ್ಯ ಬೇಡಿಕೆಗಳು ಈಡೇರದಿದ್ದರೆ, ರೈತರು ಭಿಕ್ಷುಕರಾಗಬೇಕಾಗುತ್ತದೆ.

೨. ಭಾರತದಾದ್ಯಂತ ರೈತರಿದ್ದರೂ, ಬೆಳೆ, ಜಾತಿ, ಭಾಷೆ ಪ್ರಾಂತೀಯ ನಾಯಕತ್ವ ಮೀರದಿರುವುದು ಒಂದು ವಿಷಾದವೇ ಸರಿ. ಇದು ನಮ್ಮ ನೆಲದ ಗುಣ.

೩. ಈ ಚಳುವಳಿ ಖಂಡಿತಾ ನಮ್ಮ ರಾಜಕೀಯದಲ್ಲಿ ನಿರ್ಣಾಯಕ. ಇದರ ಗೆಲುವು. ಸೋಲುವಿನಲ್ಲಿ ದೇಶದ ಪ್ರಜಾತಾಂತ್ರಿಕ ಭವಿಷ್ಯ ಅಡಗಿದೆ. ಜನರು ಸಹಜವಾಗಿರುತ್ತಾರೋ, ಮೈಮೇಲೆ ಬಂದಂತಾಡುತ್ತಿರುತ್ತಾರೋ ತಿಳಿಯದು. ಸಹಜವಾಗಿರಲೆಂದು ಆಶಿಸೋಣ.

**–ಪ್ರೊ.ಬಿ.ಎನ್ ಶ್ರೀರಾಮ,** ಕಬ್ಬು ಬೆಳೆಗಾರರು ಮತ್ತು ಹಿರಿಯ ಸಮಾಜವಾದಿ ಚಿಂತಕರು (ಮೈಸೂರು)

## ವಾಪಸಿಗಿಂತ ಅಗತ್ಯ ತಿದ್ದುಪಡಿಗಳಿಗೆ ಪಟ್ಟುಹಿಡಿಯುವುದು ಸೂಕ್ತ.



೧. ಅ) ದೇಶದಲ್ಲಿ ಆರೋಗ್ಯದ ತುರ್ತುಪರಿಸ್ಥಿತಿ ಇರುವಾಗ ಮತ್ತು ಸಂಸತ್ತು ಅಧಿವೇಶನದಲ್ಲಿ ಇಲ್ಲದಿದ್ದಾಗ ಸುಗ್ರೀವಾಜ್ಞೆ ಮುಖಾಂತರ ಜಾರಿಯಾದ ಕೃಷಿ ತಿದ್ದುಪಡಿ ಮಸೂದೆಗಳು ರಾಷ್ಟ್ರ – ರಾಜ್ಯಗಳ ನಡುವೆ ಸಂವಿಧಾನಾತ್ಮಕ ಅಧಿಕಾರ, ಜವಾಬ್ದಾರಿ ಹಂಚಿಕೆಗೆ ಒಂದು ದೊಡ್ಡ ಸವಾಲು. ಆ) ಖಾಸಗಿಯವರು ಈಗ ದೇಶದಲ್ಲಿ ಒಂದೊಂದೇ ಸಾರ್ವಜನಿಕ ವಲಯದ ಆಸ್ತಿಗಳನ್ನು ಕಬಳಿಸುತ್ತಿರುವುದನ್ನು ನೋಡಿದರೆ, ಕೃಷಿಯನ್ನು ಅವರುಗಳ ಕಪಿಮುಷ್ಠಿಗೆ ಸಿಗದಂತೆ ಎಚ್ಚರವಹಿಸಬೇಕಾದುದು ಅನಿವಾರ್ಯ. ಇ)ರೈತರಿಗೆ ಉತ್ಪಾದನಾ ವೆಚ್ಚ ಸಿಗಬೇಕಾದುದು ನ್ಯಾಯಸಮ್ಮತ. ಇದರಲ್ಲಿ ಮೊದಲ ಹೆಜ್ಜೆ ಕನಿಷ್ಠ ಬೆಂಬಲ ಬೆಲೆ.

೨. ಅ) ಯಾವುದೇ ಚಳುವಳಿ ಮೊದಲು ಪ್ರಾರಂಭವಾಗುವುದು ದೇಶದ ಯಾವುದಾದರೂ ಒಂದು ಜಾಗದಲ್ಲಿಯೇ. ಸ್ವಾತಂತ್ರ್ಯ ಚಳುವಳಿ ಇರಬಹುದು; ಜೆ.ಪಿ.ಚಳುವಳಿ ಇರಬಹುದು; ಅಣ್ಣಾ ಹಜಾರೆ ನೇತೃತ್ವದ ಚಳುವಳಿ ಇರಬಹುದು ಎಲ್ಲವೂ ಚಿಕ್ಕದಾಗಿ ಪ್ರಾರಂಭವಾಗಿ ರಾಷ್ಟ್ರವ್ಯಾಪಿ ಪ್ರತಿಸ್ಪಂದನೆ ಪಡೆದು ನಿರ್ಣಾಯಕ ಪಾತ್ರವಹಿಸಿದ ಉದಾಹರಣೆ ನಮ್ಮ ಮುಂದಿದೆ. ಆ) ವಿಷಯ ಜನಸಮೂಹಕ್ಕೆ ಸಂಬಂಧಿಸಿದ್ದಾಗಿದ್ದರೆ; ನಾಯಕತ್ವಕ್ಕೆ ನೈತಿಕತೆ, ಬದ್ಧತೆಯಿದ್ದರೆ, ಭಾಷೆಯ, ಪ್ರಾದೇಶಿಕತೆಯ ಇತಿಮಿತಿಯನ್ನು ಯಾವುದೇ ಚಳುವಳಿ ದಾಟಿ ಯಶಸ್ವಿಯಾಗಬಹುದು. ೩.ಇ)ಸಂಪೂರ್ಣ ಕಾಯ್ದೆಯನ್ನೇ ವಾಪಾಸು ಪಡೆಯಬೇಕು ಎನ್ನುವುದಕ್ಕಿಂತ ಅಗತ್ಯ ತಿದ್ದುಪಡಿಗಳಿಗೆ ಪಟ್ಟುಹಿಡಿಯುವುದು ಸೂಕ್ತ. ಈ) ಈ ಚಳುವಳಿಯನ್ನು ಮುನ್ನಡೆಸುತ್ತಿರುವವರಲ್ಲಿ ನಾಯಕತ್ವದ ಗುಣಲಕ್ಷಣಗಳಿರುವುದು ಎದ್ದುಕಾಣುತ್ತದೆ.

೩. ಇತ್ತೀಚಿನ ದಿನಗಳಲ್ಲಿ ಸರ್ಕಾರಗಳು ನಗರ, ಪಟ್ಟಣಗಳಿಗೆ, ಉದ್ಯಮ–ಕೈಗಾರಿಕೆಗಳಿಗೆ ನೀಡುತ್ತಿರುವ ಪ್ರಾಧಾನ್ಯತೆ, ರಿಯಾಯಿತಿಗಳು ಕೃಷಿಕರನ್ನು ಕಂಗೆಡಿಸಿವೆ. ಈಗ ಕೃಷಿವಲಯಕ್ಕೂ ದೊಡ್ಡ ಉದ್ದಿಮೆಗಳು ಪ್ರವೇಶಿಸಿದರೆ ರೈತರು ಕೂಲಿಯಾಳುಗಳಾಗುವ ದಿನಗಳು ದೂರವಿಲ್ಲ. ರಾಜಕಾರಣಿಗಳು–ಅಧಿಕಾರಿಗಳು–ಉದ್ಯಮಿಗಳ ನಡುವೆ ಇರಬೇಕಾದ ಲಕ್ಷ್ಮಣರೇಖರ ಮಾಯವಾಗಿ, ಅನೈತಿಕವಾಗಿ ಎಲ್ಲರೂ ಲಾಭಮಾಡಿಕೊಳ್ಳುವ ಮನೋಭಾವ ಪ್ರಜಾಪ್ರಭುತ್ವಕ್ಕೆ ತೀರಾ ಅಪಾಯಕಾರಿಯಾದದ್ದು. ಕೋವಿಡ್–೧೯ರ ನಡುವೆಯೂ ಅಗಾಧವಾಗಿ ಏರುತ್ತಿರುವ ಭಾರತದ ಪ್ರಮುಖ ಉದ್ಯಮಗಳ ಸಂಪತ್ತು ಹಲವು ಪ್ರಶ್ನೆಗಳನ್ನು ದೇಶದ ಮುಂದಿಟ್ಟಿವೆ.

ಸ್ವತಂತ್ರ ಭಾರತದ ರಾಜಕಾರಣದಲ್ಲಿ ಇದೊಂದು ನಿರ್ಣಾಯಕ ಘಟ್ಟ. ಇದನ್ನು ಅರ್ಥಮಾಡಿಕೊಂಡು, ಸಂಘಟನೆ ಕಟ್ಟಿ, ಚಳುವಳಿಯ ಸ್ವರೂಪ ಕೊಡುವ ಗುಣವನ್ನು ಇಂದಿನ ಸಂದರ್ಭದಲ್ಲಿ ಹರಿದು ಹಂಚಿಹೋಗಿರುವ ರೈತಸಂಘಟನೆಗಳು ಮತ್ತು ರೈತನಾಯಕರು ಪ್ರದರ್ಶಿಸಬೇಕಾಗಿದೆ. ನಾನಂತೂ ಆಶಾವಾದಿಯಾಗಿದ್ದೇನೆ.

**–ಬಿ.ಎಲ್. ಶಂಕರ್,** ಕಾಫಿ ಬೆಳೆಗಾರರು ಮತ್ತು ಹಿರಿಯ ರಾಜಕಾರಣಿ (ಬೆಳಗೋಡು, ಚಿಕ್ಕಮಗಳೂರು ಜಿ.)

## ರೈತರನ್ನು ಕಂಪೆನಿಗಳ ಹಿಡಿತಕ್ಕೆ ಒಪ್ಪಿಸಿ ಭೂಮಿ ಕಬಳಿಸುವ, ಹುನ್ನಾರ



೧. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ೩ ಕರಾಳ ಕೃಷಿ ಕಾಯ್ದೆಗಳು ಮೂಲ ಕೃಷಿಕರನ್ನು ಕೃಷಿ ಕ್ಷೇತ್ರದಿಂದ ಒಕ್ಕಲೆಬ್ಬಿಸುವ, ಬಂಡವಾಳಶಾಹಿ ಹೊಸ ರೈತರನ್ನು ಕೃಷಿ ಕ್ಷೇತ್ರದಲ್ಲಿ ಪ್ರತಿಷ್ಠಾಪಿಸುವ ಹುನ್ನಾರವಾಗಿರುತ್ತದೆ. ಈ ಹೊಸ ರೈತರು ಕಾರ್ಪೋರೇಟ್ ಶಕ್ತಿಗಳಾಗಿವೆ. ಭೂಮಿಯನ್ನು ವಿಕೇಂದ್ರೀಕರಣದಿಂದ ಕೇಂದ್ರೀಕರಿಸುವ ಕಾಯ್ದೆಗಳಾಗಿವೆ.

ರೈತರ ಉತ್ಪನ್ನಗಳ ವ್ಯಾಪಾರ ಮತ್ತು ವಾಣಿಜ್ಯ (ಉತ್ತೇಜನ ಹಾಗೂ ಸರಾಗಗೊಳಿಸುವಿಕೆ) ಕಾಯ್ದೆ ೨೦೨೦ ಮತ್ತು ರೈತರ (ಸಬಲೀಕರಣ ಮತ್ತು ರಕ್ಷಣೆ) ಬೆಲೆ ಖಾತರಿ ಒಪ್ಪಂದ ಮತ್ತು ಕೃಷಿ ಸೇವಾ ಕಾಯ್ದೆ, ಇವೆರಡು ಕಾಯ್ದೆಗಳು ಎ.ಪಿ.ಎಂ.ಸಿ.ಗಳನ್ನು

ನಿರುಪಯುಕ್ತಗೊಳಿಸುವುದು. ರೈತರನ್ನು ಕಂಪೆನಿಗಳ ಹಿಡಿತಕ್ಕೆ ಒಪ್ಪಿಸಿ, ರೈತರ ಭೂಮಿ ಕಬಳಿಸುವ, ಈಗ ಇರುವ ಸರ್ಕಾರದ ಬೆಂಬಲ ಬೆಲೆ ನೀತಿಗೆ, ಜನ ಸಾಮಾನ್ಯರ ಆಹಾರ ಭದ್ರತೆಗೆ ಧಕ್ಕೆ ತರುವ ಕಾಯ್ದೆಗಳಾಗಿವೆ. ಈ ಕಾಯ್ದೆಗಳನ್ನು ಮೂಲ ರೈತರ ಹಿತದೃಷ್ಟಿ, ಜನ ಸಾಮಾನ್ಯರ ಆಹಾರ ಭದ್ರತೆ ಹಿತದೃಷ್ಟಿಯಿಂದ ರದ್ದುಪಡಿಸುವುದು ರೈತ ಚಳುವಳಿಯ ಮಹತ್ವದ ಒತ್ತಾಯವಾಗಿದೆ.

೨. ದೆಹಲಿಯಲ್ಲಿ ನಡೆಯುತ್ತಿರುವ ಚಳುವಳಿ ದೇಶವ್ಯಾಪ್ತಿಯಾಗಿದೆ. ದೇಶಾದ್ಯಂತ ರೈತರು, ರೈತ ಸಂಘಟನೆಗಳು ಗಟ್ಟಿ ಹೋರಾಟಗಳನ್ನು ಬಿಡದೆ ಮಾಡುತ್ತಿವೆ. ಈ ಕಾಯ್ದೆಗಳ ಅಪಾಯದ ಮುನ್ನೋಟಗಳನ್ನು ರೈತರು, ರೈತ ಸಂಘಟನೆಗಳು ಅಧ್ಯಯನ ಮಾಡಿ ಪ್ರಭುತ್ವದ ಹುನ್ನಾರಗಳನ್ನು ದೇಶದ ಎಲ್ಲಾ ವರ್ಗದ ಜನತೆಗೆ ಮನನ ಮಾಡಿಸುತ್ತಿವೆ. ಹೋರಾಟದ ನಾಯಕತ್ವದಲ್ಲಿ ಇಡೀ ಭಾರತದ ಎಲ್ಲಾ ಭಾಗಗಳ ರೈತರು, ರೈತ ಸಂಘಟನೆಗಳ ಹೋರಾಟಗಾರರಿದ್ದಾರೆ. ಈ ಹೋರಾಟ ೧೯೯೩ ರಲ್ಲಿ ಗ್ಯಾಟ್, ಡಬ್ಲ್ಯುಟಿಒ ಒಪ್ಪಂದದ ವಿರುದ್ಧ ದೇಶವ್ಯಾಪ್ತಿ ನಡೆದ ಪ್ರತಿಭಟನೆಯು ನೆನಪಾಗುತ್ತಿದೆ. ಈ ಹೊತ್ತಿನ ಹೋರಾಟದ ನಾಯಕತ್ವದಿಂದ ರೈತರಿಗೆ ಜಯ ಸಿಗುವ ವಿಶ್ವಾಸವಿದೆ.

೩.ಪ್ರಭುತ್ವದ ನೀತಿಗಳು, ಯೋಜನೆಗಳು, ಕಾಯ್ದೆಗಳು ಜನರ ಬದುಕನ್ನು ಅತಂತ್ರಗೊಳಿಸಿದಾಗ, ಪ್ರಭುತ್ವವನ್ನು ನಿಯಂತ್ರಣ ಮಾಡಲು, ಜನಸಾಮಾನ್ಯ ಬದುಕಿಗೆ ಭದ್ರತೆ ನೀಡಲು, ಚಳುವಳಿಗಳು ರಾಜಕೀಯ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಪ್ರಸ್ತುತ ನಡೆಯುತ್ತಿರುವ ರೈತ ಚಳುವಳಿ ಸದರಿ ಕಾಯ್ದೆಗಳನ್ನು ರದ್ದುಪಡಿಸಲು, ಪ್ರತಿಭಟನೆಗಳು ಪ್ರದರ್ಶನಗಳ ಜೊತೆಯಲ್ಲಿ ರಾಜಕೀಯ ನಿರ್ಣಯಗಳ ಮುಖಾಂತರ ಪ್ರಭುತ್ವಗಳಿಗೆ ಎಚ್ಚರಿಸಬೇಕಾಗಿದೆ.

**–ಸುನಂದಾ ಸುನಂದಾ ಜಯರಾಂ,** ಕಬ್ಬು ಮತ್ತು ಭತ್ತದ ಬೆಳೆಗಾರರು ಮತ್ತು ರೈತ ಮುಖಂಡರು (ಗೆಜ್ಜಲಗೆರೆ, ಮಂಡ್ಯ ಜಿ,)

## ಇವೆಲ್ಲವೂ ಕೃಷಿಯ ದೀರ್ಘಕಾಲಿಕ ಬಿಕ್ಕಟ್ಟಿನ ಸಂಕೇತಗಳೇ.



೧. ಕೃಷಿ ವಲಯದ ಹಿತದೃಷ್ಟಿಯ ಮಾತುಕತೆಯನ್ನು ಮುಂದುವರೆಸಲು ಈ ಬೇಡಿಕೆಗಳು ಮುಖ್ಯ. ಇವು ಕೃಷಿ ಕ್ಷೇತ್ರದ ಬಿಕ್ಕಟ್ಟಿನ ಮೂಲ ಪ್ರಶ್ನೆಗಳಲ್ಲದಿದ್ದರೂ, ಮಹತ್ವದ ಪ್ರಶ್ನೆಗಳು. ಒಂದು ಸಂವಾದ ಪ್ರಾರಂಭವಾಗಲು ಸರಿಯಾದ ಪ್ರಶ್ನೆಗಳು.

೨. ಚಳುವಳಿಗಳ ತೀವ್ರತೆ ಸಾಮಾನ್ಯವಾಗಿ ಸೀಮಿತ ವ್ಯಾಪ್ತಿಯಲ್ಲೇ ಇರುತ್ತವೆ. ಆದರೆ ಈ ಚಳುವಳಿಯ ವ್ಯಾಪ್ತಿ ನಾವು ಊಹಿಸಿದ್ದಕ್ಕಿಂತ, ನಾವುಗಳು ಅಂದುಕೊಳ್ಳುತ್ತಿರುವುದಕ್ಕಿಂತ ಹೆಚ್ಚಿನ ವ್ಯಾಪ್ತಿಯನ್ನು ಪಡೆದಿವೆ. ಮಾಧ್ಯಮಗಳು ಇವುಗಳಿಗೆ ಮಹತ್ವ ಕೊಡುತ್ತಿಲ್ಲವಾದ್ದರಿಂದ ಇವುಗಳ ವ್ಯಾಪಕತೆ ನಮಗೆ ಕಾಣಿಸುತ್ತಿಲ್ಲ. ಹಲವು ವರ್ಷಗಳ ಕೆಳಗೆ ತಮಿಳುನಾಡಿನ ರೈತರು ಜಂತರ್‌ಮಂತರ್‌ನಲ್ಲಿ ದೀರ್ಘ ಕಾಲದ ಹೋರಾಟ ನಡೆಸಿದರು. ಅದನ್ನು ಯಾರೂ ಗಂಭೀರವಾಗಿ ಪರಿಗಣಿಸಲೇ ಇಲ್ಲ. ಮುಂಬೈಗೆ ಮತ್ತು ದೆಹಲಿಗಳಿಗೆ ರೈತರ ಲಾಂಗ್ ಮಾರ್ಚ್ ಆಯಿತು. ಎರಡು ದಿನದ ಸುದ್ದಿಯಾಯಿತು. ಇವೆಲ್ಲವೂ ಕೃಷಿಯ ದೀರ್ಘಕಾಲಿಕ ಬಿಕ್ಕಟ್ಟಿನ ಸಂಕೇತಗಳೇ. ಆದರೆ ನಮ್ಮ ಮಾರುಕಟ್ಟೆ ಪದ್ಧತಿಯಲ್ಲಿ ಯಾರೂ ಇದನ್ನು ಗಮನಿಸುತ್ತಿಲ್ಲ. ಜನರ ಗಮನ ಸೆಳೆಯಲು ಯಾವ ರೀತಿಯ ಪ್ರತಿರೋಧಾತ್ಮಕ ತಂತ್ರಗಳನ್ನು ಬಳಸಬೇಕು ಎನ್ನುವುದರ ಬಗ್ಗೆ ರೈತ ಸಮುದಾಯ ಆಲೋಚಿಸಬೇಕಾಗಿದೆ. ಮಲಗಿರುವ ಕುಂಭಕರ್ಣನನ್ನು ಬಡಿದೆಬ್ಬಿಸುವುದು ಸರಳವಾದ ವಿಚಾರವಲ್ಲ.

೩. ಇದು ನಿರ್ಣಾಯಕವೋ ಅಲ್ಲವೋ ಎನ್ನುವುದನ್ನು ಭವಿಷ್ಯದಲ್ಲಿ ನಾವು ತಿಳಿಯುತ್ತೇವೆ. ಆದರೆ ಸರ್ಕಾರವನ್ನು ಚುನಾಯಿಸುವ ಪ್ರಕ್ರಿಯೆಗೂ, ಚುನಾಯಿತ (ಎಂದು ಭಾವಿಸಿದ) ಸರ್ಕಾರದ ರಚನೆಯ ಪ್ರಕ್ರಿಯೆಗೂ, ಸರ್ಕಾರ ತನ್ನ ಕಾರ್ಯಕಲಾಪಗಳನ್ನು ನಡೆಸುವ ಪ್ರಕ್ರಿಯೆಗೂ, ತದನಂತರದ ಚುನಾವಣೆಯ ರಣರಂಗಕ್ಕಿಳಿಯುವ ಪ್ರಕ್ರಿಯೆಗೂ ಇರಬಹುದಾದ ಕೊಂಡಿಗಳೆಲ್ಲಾ ಮುರಿದಿವೆ. ಹೀಗಾಗಿ ಈ ಕೊಂಡಿಗಳನ್ನು ನಾವು ಮತ್ತೆ ಕಟ್ಟಬೇಕು. ಈ ಚಳುವಳಿ ಚುನಾವಣೆ, ಪ್ರತಿನಿಧಿಗಳು ಚುನಾಯಿತರಾಗುವ ಪ್ರಕ್ರಿಯೆಯ ಮೇಲೆ ಗಾಢ ಪರಿಣಾಮ ಬೀರುವ ದಿಕ್ಕಿನಲ್ಲಿ ಸಾಗಿದರೆ ನಿರ್ಣಾಯಕವಾಗುತ್ತದೆ. ಇಲ್ಲವಾದರೆ ನಮ್ಮ ಪ್ರಜಾತಂತ್ರ ಸಂಪೂರ್ಣವಾಗಿ ಕುಸಿದಿದೆ ಎಂದು ನಿರೂಪಿಸುತ್ತದೆ. ಆ ದೃಷ್ಟಿಯಿಂದ ನಾವು ನಿಜಕ್ಕೂ ಒಂದು ಪ್ರಜಾಸತ್ತಾತ್ಮಕ ವ್ಯವಸ್ಥೆಯಾಗಿ ಮುಂದುವರೆಯುತ್ತಿದ್ದೇವೋ ಎನ್ನುವ ಪ್ರಶ್ನೆಯನ್ನು ನಿರ್ಣಾಯಕವಾಗಿ ಉತ್ತರಿಸಬಹುದು. ನನ್ನ ಅಭಿಪ್ರಾಯದಲ್ಲಿ ೨೦೧೯ರ ಚುನಾವಣಾ ಫಲಿತಾಂಶ ಈ ಉತ್ತರವನ್ನು ಕೊಟ್ಟುಬಿಟ್ಟಿದೆ. ಆದರೆ ಇದರ confirmation ೨೦೨೪ರಲ್ಲಿ ನಮಗೆ ಮತ್ತೆ ದೊರೆಯಲಿದೆ. ಹೀಗಾಗಿ ರೈತರು ಮತ್ತವರ ಸಮಸ್ಯೆಗಳು ಕೇವಲ ಪ್ರಾಸಂಗಿಕವಷ್ಟೇ.

**–ಪ್ರೊ. ಎಂ.ಎಸ್. ಶ್ರೀರಾಮ್,** ಕೃಷಿ ಅರ್ಥಶಾಸ್ತ್ರಜ್ಞರು ಮತ್ತು ಕನ್ನಡದ ಖ್ಯಾತ ಕಥೆಗಾರರು ಬೆಂಗಳೂರು

## ಈ ಚಳುವಳಿ ಹೊಸರಾಜಕೀಯ ಚಿಂತನೆಯನ್ನು ಹುಟ್ಟುಹಾಕಬಹುದು.



೧ ಈ ಚಳುವಳಿಯ ಎರಡು ಮುಖ್ಯ ಬೇಡಿಕೆಗಳಾದ ಕನಿಷ್ಠ ಬೆಂಬಲ ಬೆಲೆ ಕಾನೂನು ಅನುಷ್ಠಾನ ಮತ್ತು ವಾಣಿಜ್ಯ ಕಾಯಿದೆ ೨೦೨೦ರ ರದ್ದತಿ, ಎರಡು ಬಹುಮುಖ್ಯ ಏಕೆಂದರೆ, ಭಾರತದ ಜನಸಂಖ್ಯೆಯ ಅರ್ಧ ಭಾಗ ಜನರು ತಮ್ಮ ಜೀವನಕ್ಕೆ ವ್ಯವಸಾಯ ಅವಲಂಬಿಸಿದ್ದಾರೆ. ಮಾರುಕಟ್ಟೆಯಲ್ಲಿ ವಸ್ತುವಿಗೆ ಬೆಲೆ ನಿಗದಿಯಾಗುವುದು ಬೇಡಿಕೆ ಮತ್ತು ಪೂರೈಕೆಯ ಆಧಾರದ ಮೇಲೆ, ಸಹಜವಾಗಿ ಭಾರತದಲ್ಲಿ ರೈತರ ಉತ್ಪಾದನೆಯಲ್ಲಿಯೂ ಪೂರೈಕೆ ಹೆಚ್ಚಾಗಿದೆ. ರೈತರು ಮಾರುಕಟ್ಟೆಯಲ್ಲಿ, ಬೆಳೆದ ಖರ್ಚನ್ನು ಸಹ ಬೆಲೆಯಾಗಿ ಪಡೆಯುವುದು ಕಷ್ಟವಾಗಿದೆ. ಆದ್ದರಿಂದ ಕನಿಷ್ಠ ಬೆಂಬಲ ಬೆಲೆ ಕಾನೂನು ಮಾಡುವುದು ರೈತರ ಹಿತದೃಷ್ಟಿಯಿಂದ ಉತ್ತಮ.

ವಾಣಿಜ್ಯ ಕಾನೂನು ೨೦೨೦ ಅನುಷ್ಠಾನಗೊಂಡಲ್ಲಿ, ವ್ಯಾಪಾರದ ಮೇಲೆ ಯಾವುದೇ ನಿರ್ಬಂಧ ಇರುವುದಿಲ್ಲ. ಪೂರೈಕೆ ಹೆಚ್ಚಾಗಿರುವ ಭಾರತೀಯ ಮಾರುಕಟ್ಟೆಯಲ್ಲಿ ವ್ಯಾಪಾರಿಗಳಿಗೆ ಅನುಕೂಲ ಹೆಚ್ಚಾಗಿ ದೊಡ್ಡ ವ್ಯಾಪಾರಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ಏಕಸ್ವಾಮ್ಯತೆ ಸ್ಥಾಪಿಸಿ ಉತ್ಪಾದಕರಾದ ರೈತರು ಮತ್ತು ಗ್ರಾಹಕರಿಬ್ಬರನ್ನು ಸಹ ಶೋಷಣೆ ಮಾಡುವ ಅವಕಾಶ ಹೆಚ್ಚಾಗುವುದರಿಂದ ಈ ಕಾನೂನು ರದ್ದತಿ ಅನಿವಾರ್ಯ.

೨. ಸಾಮಾನ್ಯವಾಗಿ ಎಲ್ಲಾ ಪ್ರಗತಿಪರ ಚಳುವಳಿಗಳು ದೇಶದ ಯಾವುದೇ ಒಂದು ಪ್ರದೇಶದಲ್ಲಿ ಪ್ರಾರಂಭವಾಗಿ ಚಳುವಳಿಯ ಗಟ್ಟಿತನದಿಂದ ದೇಶವ್ಯಾಪಿ ಹರಡುವುದು ಸಹಜಕ್ರಿಯೆ. ಬೇಡಿಕೆಗಳು ಸೀಮಿತವಾಗಿವೆ. ರೈತರ ಬದುಕನ್ನು ಪೂರ್ಣ ಬದಲಾಯಿಸುವ ಶಕ್ತಿ ಬೇಡಿಕೆಗಳಿಗೆ ಇಲ್ಲ. ಪೂರ್ಣ ಹಳ್ಳಿಗಾಡಿನ ಜನರ ಬದುಕನ್ನು ಹಸನಾಗಿಸುವ ಬೇಡಿಕೆಗಳು ಬೇಕು. ಹಲವಾರು ಸಂಘಟನೆಗಳು ಸೇರಿ ಚಳುವಳಿ ನಡೆಸುತ್ತಿರುವುದರಿಂದ, ಸಾಮೂಹಿಕ ನಾಯಕತ್ವ ಅನಿವಾರ್ಯ. ಯೋಗೇಂದ್ರ ಯಾದವ್‌ರಂತಹ ಮೇಧಾವಿ ಮತ್ತು ರಾಕೇಶ್ ಟಿಕಾಯತ್‌ರಂತಹ ಹೃದಯವಂತರು ಮುಂಚೂಣಿಯಲ್ಲಿ ಇರುವುದರಿಂದ, ನಾಯಕತ್ವ ಗಟ್ಟಿಯಾಗಬಹುದು.

೩. ಇಂದಿನ ಆಡಳಿತಾರೂಢ ಪಕ್ಷದ ಸರ್ವಾಧಿಕಾರಿ ಧೋರಣೆ ಮತ್ತು ವಿರೋಧಪಕ್ಷಗಳ ಸೋಗಲಾಡಿತನದ ಸಂದರ್ಭದಲ್ಲಿ ಈ ಚಳುವಳಿ ಹೊಸರಾಜಕೀಯ ಚಿಂತನೆಯನ್ನು ಹುಟ್ಟುಹಾಕಬಹುದು.

**–ಕೆ.ಎಂ ರಾಜೇಗೌಡ,** ಕಾಫಿ ಮತ್ತು ಮೆಣಸು ಬೆಳೆಗಾರರು ಹಾಗೂ ಅಂತಾರಾಷ್ಟ್ರೀಯ ರೈತ ಸಂಘದ ದ.ಏಷ್ಯಾ ಪ್ರತಿನಿಧಿ(ಅರೇಹಳ್ಳಿ, ಹಾಸನ ಜಿ,)

## 'ಎಲ್ಲ ಬೆಳೆಗಳಿಗೂ ಎಂಎಸ್‌ಪಿ': ಚಳುವಳಿಯ ಮೂಲಮಂತ್ರವಾಗಬೇಕು



೧ ಹೊಟ್ಟೆ ಕಟ್ಟಿ ಕಷ್ಟಪಟ್ಟು ಬೆಳೆದ ರೈತನ ಬೆಳೆಗೆ ತಕ್ಕ ಬೆಲೆ ದೊರಕದೆ ರೈತನ ಬದುಕು ಚಿಂತಾಜನಕವಾಗಿದೆ. ನನ್ನ ದೃಷ್ಟಿಯಲ್ಲಿ ಇದೇ ಸಮಸ್ಯೆಯ ಮೂಲ. ಈ ಹಿನ್ನೆಲೆಯಲ್ಲಿ ಎಲ್ಲ ಕೃಷಿ ಉತ್ಪನ್ನಗಳಿಗೆ ವೈಜ್ಞಾನಿಕವಾಗಿ ನಿರ್ಧರಿಸಿದ ಎಮ್ ಎಸ್ ಪಿ ಮಾರಾಟದರ ಅತಿ ಅವಶ್ಯ ಹಾಗೂ ಅನಿವಾರ್ಯ. ಹೊಸ ಕಾಯ್ದೆ ಪಂಜಾಬ ಹರಿಯಾಣದ ಪ್ರಮುಖ ಬೆಳೆಗಳಾದ ಗೋಧಿ, ಭತ್ತಗಳ ಬಹುಭಾಗವನ್ನು ಸರ್ಕಾರವೇ ಬೆಂಬಲ ಬೆಲೆ (ಎಂಎಸ್‌ಪಿ) ಕೊಟ್ಟು ಕೊಳ್ಳುತ್ತಿದ್ದು, ದೇಶದ ಉಳಿದ ಭಾಗದಲ್ಲಿ ಶೇ.೬ರಷ್ಟು ಭಾಗದ ರೈತರು ಮಾತ್ರ ಸೌಲಭ್ಯವನ್ನು ಪಡೆಯುತ್ತಿರುವರಾದರೂ, ಹೊಸ ಕಾಯಿದೆ ಇದಕ್ಕೂ ಕುತ್ತು ತರುವಂತಿರುವುದರಿಂದ ರೈತರು ಚಳುವಳಿ ಮಾಡುತ್ತಿರುವುದು ಸಹಜವಾಗಿಯೇ ಇದೆ, ಹಾಗೆ ನೋಡಿದರೆ ಎಲ್ಲ ಕೃಷಿ ಉತ್ಪನ್ನಗಳಿಗೆ ದೇಶಾದ್ಯಂತ ಎಮ್‌ಎಸ್‌ಪಿ ಬೇಕೇಬೇಕು ಎಂಬುದು ಚಳುವಳಿಯ ಮೂಲ ಮಂತ್ರವಾಗಬೇಕು. ಇದಕ್ಕೆ ಸ್ವಾಮಿನಾಥನ್ ವರದಿ ಆಧಾರವಾಗಬೇಕು.

ಇನ್ನು ಎಪಿಎಂಸಿಗಳು ಸದ್ಯಕ್ಕೆ ರೈತಸ್ನೇಹಿ ಆಗಿರದೆ ದೋ ನಂ. ವ್ಯವಹಾರದ ಮೂಲಕ ರೈತನನ್ನು ಮುಕ್ಕಿ ತಿನ್ನುವ ಕೇಂದ್ರಗಳೇ ಆಗಿದ್ದು, ಅವನ್ನು ಮುಚ್ಚಿ ರೈತರನ್ನು ಕಾರ್ಪೋರೇಟ್ ಖರೀದಿದಾರರಿಗೆ ಒಪ್ಪಿಸುವ ಹುನ್ನಾರವಿದ್ದರೆ ರೈತರು ವಿಸ್ತೃತ ಸೌಲಭ್ಯಗಳಿರುವ ಎಪಿಎಂಸಿಗಳೇ ಇರಲಿ ಎನ್ನುತ್ತಾರೆ. ಏಕೆಂದರೆ ಕೇವಲ ಲಾಭಕೋರತನದ ಬಹುರಾಷ್ಟ್ರೀಯ ಕಂಪನಿಗಳನ್ನು ನಂಬಲಾಗದು. ಆದರೆ ಅವು ರೈತ ಸ್ನೇಹಿಯಾಗಬೇಕೆಂದು ಬಯಸುತ್ತಾರೆ. ಆದರೆ ಎಪಿಎಂಸಿಗಳನ್ನು ಉಳಿಸಿಕೊಂಡು ಖಾಸಗಿಯವರಿಗೂ ಖರೀದಿಗೆ ಅವಕಾಶ ನೀಡುವುದಾದರೆ ರೈತರಿಗೆ ಹೆಚ್ಚಿನ ಬೆಲೆ ದೊರೆಯಬಹುದೆಂಬ ನಿರೀಕ್ಷೆಯಿಂದ ಅಂತಹ ವ್ಯವಸ್ಥೆಯನ್ನು ಒಂದು ಪ್ರಯೋಗವಾಗಿ ಸ್ವಾಗತಿಸಬಹುದು.

೨. ಹೋರಾಟ ತನಗಾಗಿ, ತನ್ನ ಒಳಿತಿಗಾಗಿ ಎನ್ನುವ ಭಾವನೆ ಸಂಕಷ್ಟದಲ್ಲಿ ಸಿಲುಕಿದ ಸಮಸ್ತ ರೈತ ಸಮುದಾಯದಲ್ಲಿ ಮೂಡಿದಾಗ ಮಾತ್ರ ಹೋರಾಟ ಸಮೂಹ ಹೋರಾಟವಾಗಬಲ್ಲದು. ಎಲ್ಲಿಂದಲೋ ಯಾವಾಗಲೊಮ್ಮೆ ಬರುವವರು ನಾಯಕರಾಗಲಾರರು.

೩. ಸರಕಾರವನ್ನು ನಿರ್ಧರಿಸುವ ಶಕ್ತಿ ರೈತರಲ್ಲಿದೆ, ಆದರೆ ದುರ್ದೈವವಶಾತ್ ರೈತರ ಅಜ್ಞಾನ, ಅಪಾರ ತಾಳ್ಮೆ, ಕಷ್ಟಸಹಿಷ್ಣುತೆ, ಸಂಘಟನೆಯ ಕೊರತೆ ಇವುಗಳನ್ನೇ ಬಂಡವಾಳವಾಗಿಸಿಕೊಂಡು ರಾಜಕೀಯ ಪಕ್ಷಗಳು ಗೆಲ್ಲುತ್ತಿವೆ, ಅಧಿಕಾರ ಚಲಾಯಿಸುತ್ತಿವೆ.

ರೈತ ಸಂಪೂರ್ಣ ಜಾಗೃತವಾಗುವವರೆಗೆ ಯಾವುದೇ ಹೋರಾಟ ನಿರ್ಣಾಯಕವಾಗಲಾರದು. ಈ ಸರಕಾರ ಹೋಗಿ ಇನ್ನೊಂದು ಸರಕಾರ ಬಂದರೂ ಪರಿಸ್ಥಿತಿ ಬದಲಾಗದು.

**–ಸಿ.ಯು.ಬೆಳ್ಳಕ್ಕಿ**, ಕಬ್ಬು, ಜೋಳ, ಕಡಲೆ, ಶೇಂಗಾ ಬೆಳೆಗಾರರು ಮತ್ತು ಆಕಾಶವಾಣಿಯ ನಿವೃತ್ತ ನಿರ್ದೇಶಕರು, ಧಾರವಾಡ

## ಇದು ದೇಶದ ಸಣ್ಣ ರೈತರ ಅಸ್ತಿತ್ವದ ಉಳಿವಿಗಾಗಿ ನಡೆಯುತ್ತಿರುವ ಚಳುವಳಿ



೧. ಕಳೆದ ವರ್ಷ ಭಾರತ ಸರ್ಕಾರ ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದಿರುವ ಮೂರು ಕೃಷಿ ಕಾನೂನುಗಳನ್ನು ಸರ್ಕಾರ ಹಿಂಪಡೆಯಬೇಕು ಮತ್ತು ಕನಿಷ್ಠ ಬೆಂಬಲ ಬೆಲೆ ನೀತಿಯನ್ನು ಶಾಸನಬದ್ಧಗೊಳಿಸಬೇಕು ಎಂಬ ಎರಡು ಪ್ರಮುಖ ಬೇಡಿಕೆಗಳು. ಒಟ್ಟಾರೆ ಕೃಷಿ ವಲಯವನ್ನು ಕಾರ್ಪೊರೇಟ್ ಕಂಪೆನಿಗಳು ತಮ್ಮ ವಶಕ್ಕೆ ತೆಗೆದುಕೊಳ್ಳಲು ಮಾಡುತ್ತಿರುವ ಪ್ರಯತ್ನಕ್ಕೆ ತಡೆ ಒಡ್ಡುವುದು ಅಷ್ಟೇ ಅಲ್ಲ ಕುಸಿದು ಬಿದ್ದಿರುವ ಕೃಷಿಕರ ಆರ್ಥಿಕತೆಗೆ ಕನಿಷ್ಠ ಭದ್ರತೆಯನ್ನು ಒದಗಿಸುವುದು ಆಗಿದೆ.

ಎಪಿಎಂಸಿ ಕಾಯ್ದೆಗೆ ತಂದಿರುವ ತಿದ್ದುಪಡಿ, ಗುತ್ತಿಗೆ ಕೃಷಿ ಕಾಯ್ದೆ, ಅಗತ್ಯ ವಸ್ತುಗಳ ಕಾಯ್ದೆಗೆ ತಂದಿರುವ ತಿದ್ದುಪಡಿ ಈ ಎಲ್ಲ ಕಾನೂನುಗಳು ಭಾರತದಲ್ಲಿ ಕೃಷಿಕರೇ ಇಲ್ಲದ ಕೃಷಿಯ ವ್ಯವಸ್ಥೆಯನ್ನು ರೂಪಿಸಲು ಹೊರಟ ಪ್ರಯತ್ನವೇ ಆಗಿವೆ ಈ ಕಾನೂನುಗಳು ಜಾರಿಯಾಗಲು ಅವಕಾಶ ಮಾಡಿಕೊಟ್ಟಿದ್ದೇ ಆದಲ್ಲಿ ಇಡೀ ಕೃಷಿ ಮತ್ತು ಆಹಾರದ ವ್ಯವಸ್ಥೆಯು ಸಾಮಾನ್ಯ ಜನರ ಕೈ ತಪ್ಪಿ ಕೆಲವೇ ಕೆಲವು ಬಂಡವಾಳಿಗರ ಕೈ ಸೇರುವ ಅಪಾಯವಿದೆ. ಈ ದೇಶದ ಆಹಾರ ಭದ್ರತೆ ಅಷ್ಟೇ ಅಲ್ಲ ಆಹಾರದ ಸಾರ್ವಭೌಮತ್ವವನ್ನು ಸಂರಕ್ಷಿಸುವ ಹೊಣೆಗಾರಿಕೆ ಈ ಎರಡು ಮುಖ್ಯ ಬೇಡಿಕೆಗಳಲ್ಲಿ ಕಾಣಿಸುತ್ತವೆ.

೨. ಈ ಚಳುವಳಿ ಭಾರತ ದೇಶದ ಸಣ್ಣ ರೈತರ ಅಸ್ತಿತ್ವದ ಉಳಿವಿಗಾಗಿ ನಡೆಯುತ್ತಿದೆ. ದೊಡ್ಡ ಹಿಡುವಳಿಗಳ ಬೆಳೆಗಳಿಗೆ ಸೀಮಿತವಾಗಿರುವ ಕನಿಷ್ಠ ಬೆಂಬಲ ಬೆಲೆ ಶಾಸನಬದ್ಧ ಗೊಳ್ಳಬೇಕು ಎಂದು ಶುರುವಾದ ಒತ್ತಾಯ ದಿನಕಳೆದಂತೆ ಭಾರತದ ರೈತರು ಬೆಳೆಯುವ ಎಲ್ಲ ಬೆಳೆಗಳಿಗೂ ಅನ್ವಯವಾಗಬೇಕು ಮತ್ತು ಈ ಬೆಂಬಲ ಬೆಲೆ ರೈತರಿಗೆ ಬೆಳೆಗಳಿಗೆ ನ್ಯಾಯಯುತವಾದ ಬೆಲೆ ದಕ್ಕುವಂತೆ ನಿಗದಿಯಾಗಬೇಕು ಎಂಬ ಚರ್ಚೆಗಳಿಗೆ ದಾರಿ ಮಾಡಿಕೊಟ್ಟಿವೆ,. ಹೀಗೆ ರೈತ ಚಳವಳಿಯ ಒತ್ತಾಯಗಳ ವ್ಯಾಪ್ತಿ ವಿಸ್ತರಿಸುತ್ತಿದೆ.

ಉತ್ತರ ಭಾರತದಲ್ಲಿ ಈ ಚಳುವಳಿಯ ನಾಯಕತ್ವವನ್ನು ರೈತರು ವಹಿಸಿಕೊಂಡಿದ್ದಾರೆ. ದಕ್ಷಿಣ ಭಾರತದಲ್ಲೂ ಇದೇ ರೀತಿ ಸಾಮಾನ್ಯ ರೈತರ ಮುಂದಾಳತ್ವದಲ್ಲಿ ನಡೆಯುವಂತೆ ಮಾಡಬೇಕಾದದ್ದು ಎಲ್ಲ ರೈತ ಮುಖಂಡರ ಜವಾಬ್ದಾರಿಯಾಗಿದೆ. ಇದಾಗುವುದು ಸಾಮಾನ್ಯ ರೈತರ ಅರಿವಿಗೆ ಈ ಕಾನೂನುಗಳ ಅಪಾಯಗಳು ಬಂದಾಗ. ಅಲ್ಲಿಯವರೆಗೂ ರೈತ ಸಂಘಟನೆಗಳಲ್ಲಿ ತೊಡಗಿಸಿಕೊಂಡಿರುವವರೆಲ್ಲರ ಪ್ರಾಮಾಣಿಕ ಜವಾಬ್ದಾರಿಯಲ್ಲಿ ಈ ಚಳುವಳಿಯನ್ನು ಕಟ್ಟಬೇಕಾಗಿದೆ.

೩.ಒಟ್ಟು ರಾಜಕೀಯ ಪರಿಸ್ಥಿತಿಯ ದೃಷ್ಟಿಯಿಂದ ನೋಡಿದರೆ ಈ ಚಳುವಳಿಯು ಬಹು ನಿರ್ಣಾಯಕ ಎಂಬುದು ಸರಿ ಏಕೆಂದರೆ ಇವತ್ತಿಗೂ ದೇಶದಲ್ಲಿ ಬಹುಸಂಖ್ಯಾತರು ರೈತರೇ ಆಗಿದ್ದಾರೆ. ಜೊತೆಗೆ ಈ ಚಳುವಳಿಯು ಕೇವಲ ರೈತರ ಬೆಳೆಗೆ ಬೆಲೆಯನ್ನು ಕೇಳುವುದಕ್ಕಷ್ಟೇ ಸೀಮಿತವಾಗದೇ ಜಾತಿ ಧರ್ಮದ ಮೇಲೆ ದೇಶವನ್ನು ಒಡೆದಾಳುವ ಸದ್ಯದ ಪ್ರಭುತ್ವದ ವಿರುದ್ಧ ನಮಗಿರುವುದೊಂದೇ ಜಾತಿ ಅದು ರೈತ ಜಾತಿ ಎಂಬ ವಿಚಾರದೊಂದಿಗೆ ಎಲ್ಲ ಜಾತಿ, ಧರ್ಮಗಳನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿರುವುದು ಒಂದು ದೊಡ್ಡ ರಾಜಕೀಯ ಹೋರಾಟವೂ ಆಗಿದೆ.

**ಚುಕ್ಕಿ ನಂಜುಂಡಸ್ವಾಮಿ,** ರೈತ ಮುಖಂಡರು, ಮ್ಯಾನೇಜಿಂಗ್ ಟ್ರಸ್ಟಿ, ಅಮೃತಭೂಮಿ ನೈಸರ್ಗಿಕ ಕೃಷಿ ಶಾಲೆ (ಹೊಂಡರಬಾಳು, ಚಾಮರಾಜನಗರ ಜಿ.)

## ಸರ್ವಜನಾಂಗದ ಉಳಿವಿಗಾಗಿ ಈ ಹೋರಾಟ

೧. ಈ ದೇಶದಲ್ಲಿ ಕೃಷಿ ಒಂದು ಜೀವನ ಪದ್ದತಿ. ಇಲ್ಲಿ ರೈತನ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಸಿಗಲೇ ಬೇಕು.

ಕೃಷಿ ಕಾರ್ಪೋರೇಟ್ ಉದ್ಯೋಗ ಅಲ್ಲ. ಈ ದೇಶದ ಸಂಸ್ಕೃತಿಯ ಭಾಗ ಅದರ ಜೊತೆಗೆ ಉದ್ಯೋಗ ಕೂಡ. ಇಲ್ಲಿ ರೈತ ಸಮುದಾಯ ಈಗ ಇರುವ ಮಾರುಕಟ್ಟೆ ವ್ಯವಸ್ಥೆಗೆ ಕೆಲ ಬಿಗಿ ಕಾನೂನುಗಳನ್ನು ತರಬೇಕೇ ಹೊರತು ಒಂದೆರಡು ಕಂಪನಿಯ ಕೈಗೆ ದೇಶದ ಮಾರುಕಟ್ಟೆ ವ್ಯವಸ್ಥೆಯನ್ನು ನೀಡಬಾರದು. ದೇಶವಾಸಿಗಳ ಆಹಾರದ ಮೇಲೆ ಸಂಪೂರ್ಣ ಹಿಡಿತ ಸಾಧಿಸಲು ಖಾಸಗಿ ಕಂಪನಿಗಳ ಪ್ರಯತ್ನಕ್ಕೆ ಸರ್ಕಾರ ಬೆಂಬಲ ಕೊಡುತ್ತಿದೆ. ದೇಶದಲ್ಲಿ ಆಹಾರ ವಸ್ತುಗಳ ಭಾರಿ ಪ್ರಮಾಣದ ಶೇಖರಣೆ, ನಂತರ ಕೃತಕ ಅಭಾವ ಸೃಷ್ಟಿಸಿ ಅತೀ ಹೆಚ್ಚು ಲಾಭ ಮಾಡಿಕೊಳ್ಳಲು ಇದು ಅವಕಾಶ ಮಾಡಿಕೊಡುತ್ತದೆ.



೨. ಆಹಾರ ಬೆಳೆಗಳನ್ನ ಹೆಚ್ಚಾಗಿ ಬೆಳೆಯುವ ಪ್ರದೇಶ ಹಾಗೂ ಅಲ್ಲಿ ಕನಿಷ್ಠ ಬೆಂಬಲ ಬೆಲೆ ಸಿಗದ ಹೊರತು ಅಲ್ಲಿ ಕೃಷಿ ಮುನ್ನಡೆಸಲು ಸುಲಭ ವಲ್ಲ, ಹಿಂದೆ ಅಗಿರುವ ಕಹಿ ಘಟನೆಗಳ ಅನುಭವಿರುವ ಪಂಜಾಬ್, ಹರಿಯಾಣ, ಉತ್ತರ ಪ್ರದೇಶಗಳ ರೈತ ಸಮುದಾಯ ಈ ಕಾಯಿದೆಯ ಕರಾಳತೆಯನ್ನ, ಬೇಗ ಅರಿತು ಹೋರಾಟ ಮಾಡುತ್ತಿದೆ, ಇದು ಇಡೀ ದೇಶದ ಹೋರಾಟ ಅಗಬೇಕು. ನಾವುಗಳೆ ನಾಯಕತ್ವ ವಹಿಸಿ ಹೋರಾಟ ವನ್ನ ಯಶಸ್ವಿ ಗೊಳಿಸಬೇಕಿದೆ. ಇದು ಮುಂದಿನ ರೈತ ಪೀಳಿಗೆಯ ಉಳಿವಿಗಾಗಿ ನಡೆಯುತ್ತಿರುವ ಹೋರಾಟ ಅನ್ನುವುದನ್ನ ಅರಿಯಬೇಕಿದೆ. ಮಾಧ್ಯಮಗಳು ಹೋರಾಟವನ್ನ ಜನರಿಗೆ ತಲುಪಿಸದೆ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿರುವ ಸರ್ಕಾರದ ಕೈಯಲ್ಲಿ ಖಡ್ಗವಾಗಿ ತಮ್ಮ ಲೇಖನಿಯನ್ನ ಬಳಕೆ ಮಾಡುತ್ತಿವೆ.

೩. ಸರ್ವಾಧಿಕಾರಿ, ಕೋಮುವಾದಿ ಪ್ರಜಾಪ್ರಭುತ್ವ ವಿರೋಧಿ ಸರ್ಕಾರದ ವಿರುದ್ಧ ಜನಾಭಿಪ್ರಾಯ ಮೂಡಬೇಕು ಹಾಗೂ ಸೈದ್ಧಾಂತಿಕ ಬದಲಾವಣೆ ಆಗಬೇಕು. ಸರ್ವಜನಾಂಗದ ಉಳಿವಿಗಾಗಿ ಈ ಹೋರಾಟ ದೇಶದೆಲ್ಲೆಡೆ ವ್ಯಾಪಿಸಿ ಯಶಸ್ಸು ಕಾಣಲೇ ಬೇಕಾಗಿದೆ.

**–ಹೆಚ್.ಟಿ .ರಾಜೇಂದ್ರ,** ಅಡಿಕೆ ಮತ್ತು ಭತ್ತದ ಬೆಳೆಗಾರರು ಹಾಗೂ ರಾಜಕೀಯ ಮುಖಂಡರು (ಮಡಬೂರು, ಚಿಕ್ಕಮಗಳೂರು ಜಿ.)

## .ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಯನ್ನು ಹಾಳುಗೆಡುವ ಉದ್ದೇಶ



೧. ಖಂಡಿತಾ ಬಹಳ ಮಹತ್ವದವು. ಎಪಿಎಂಸಿ ಹೊರಗಡೆ ಅನಿರ್ಬಂಧಿತವಾಗಿ ರೈತ ಉತ್ಪನ್ನಗಳನ್ನು ಕೊಳ್ಳುವ ಅವಕಾಶ ಕೊಳ್ಳುವವನ ಹಿತ ಕಾಯುವ ದೃಷ್ಟಿಯಿಂದಲೇ ಮತ್ತು ಕಾನೂನಾತ್ಮಕವಾಗಿ ಬಲವಿಲ್ಲದ ಅಶಕ್ತ ರೈತನನ್ನು ಬಲಿಷ್ಠ ಕಾರ್ಪೊರೇಟ್ ಶಕ್ತಿಗಳ ವಿರುದ್ಧ ಸೆಣಸಲಾಗದೇ ಮಂಡಿಯೂರಲೇಬೇಕಾದ ಅನಿವಾರ್ಯ ಸ್ಥಿತಿಗೆ ತಳ್ಳುವ ಹುನ್ನಾರವಾಗಿದೆ.

ಇದರ ಜೊತೆಗೇ ತಳುಕು ಹಾಕಿಕೊಂಡಿರುವ "ಅಗತ್ಯ ವಸ್ತುಗಳನ್ನು ಖಾಸಗೀ ಕಂಪೆನಿಗಳು ಅನಿಯಂತ್ರಿತವಾಗಿ ಎಷ್ಟನ್ನು ಬೇಕಾದರೂ ದಾಸ್ತಾನು ಮಾಡಲು ಅನುಮತಿಸುವ ಕಾಯ್ದೆ" ಏಕಕಾಲಕ್ಕೆ ಮಾರುಕಟ್ಟೆಯನ್ನು ಏಕಸ್ವಾಮ್ಯಕ್ಕೆ ಒಳಪಡಿಸುವ ಮತ್ತು ಆ ಮೂಲಕ ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಯನ್ನು ಹಾಳುಗೆಡುವ ಉದ್ದೇಶದಿಂದಲೇ ರೂಪುಗೊಂಡಿರುವಂತದ್ದು. ಇಲ್ಲಿ ರೈತನೊಂದಿಗೆ ಗ್ರಾಹಕರೂ ಸಂಕಷ್ಟ ಅನುಭವಿಸುವಂತೆ ಮಾಡಿ ಕಾರ್ಪೊರೇಟ್ ಹಿತಕಾಯುವ ಹುನ್ನಾರಗಳೂ ಇಲ್ಲಿ ಗೋಚರಿಸುತ್ತಿವೆ.

ಜೊತೆಗೆ, ಯಾವ ರೈತರಿಗೆ ಈ ಕಾಯ್ದೆಗಳು ಅನುಕೂಲ ತರುತ್ತವೆ ಎಂದು ಸರಕಾರ ಹೇಳುತ್ತಿದೆಯೋ ಅದೇ ರೈತ ವರ್ಗ ದೇಶದಾದ್ಯಂತ ಕೋಟ್ಯಾಂತರ ಸಂಖ್ಯೆಯಲ್ಲಿ ಬೀದಿಗಿಳಿದು ತನ್ನ ವಿರೋಧ ದಾಖಲಿಸುತ್ತಿದ್ದರೆ ಅದಕ್ಕೆ ಕಿವಿಗೊಡುವ ಕೆಲಸಕ್ಕೆ ಸರಕಾರ ಮುಂದಾಗದಿರುವುದೂ, ಕಾಯ್ದೆ ರೂಪುಗೊಳ್ಳುವ ಸಮಯದಲ್ಲೇ ಅದಾನಿಯಂತಹ ಬಂಡವಾಳಿಗರು ಕಾಯ್ದೆಯಿಂದ ಲಾಭ ಮಾಡಿಕೊಳ್ಳಲಿಕ್ಕೆ ಬೇಕಾದ ದಾಸ್ತಾನು ಮಳಿಗೆಗಳ ನಿರ್ಮಾಣದಲ್ಲಿ ತೊಡಗಿರುವುದು ಕೇಂದ್ರ ಸರ್ಕಾರ ಯಾರ ಹಿತ ಕಾಯಲು ಹೊರಟಿದೆಯೆಂಬುದರ ಮೇಲ್ನೋಟದ ಸಾಕ್ಷಿ.

೨.ಚಳುವಳಿಯ ಪ್ರಾದೇಶಿಕ ವ್ಯಾಪ್ತಿಯ ಬಗ್ಗೆ ಹೇಳುವುದಾದರೆ ಪಂಜಾಬ್, ಹರಿಯಾಣ ಮತ್ತು ಉತ್ತರ ಪ್ರದೇಶಗಳ ವ್ಯಾಪ್ತಿಯ ರೈತರೇ, ತಮ್ಮ ಗರಿಷ್ಠ ಹಿಡುವಳಿಯ ಕಾರಣದಿಂದ 'ಕನಿಷ್ಠ ಬೆಂಬಲ ಬೆಲೆ'ಯ ಸವಲತ್ತನ್ನು ಈಗಾಗಲೇ ಪಡೆಯುತ್ತಿರುವದರಿಂದ ಈ ಕಾಯ್ದೆಗಳು ಉಂಟು ಮಾಡುವ ದುಷ್ಪರಿಣಾಮಗಳನ್ನು ಊಹಿಸಿ ಲಕ್ಷಾಂತರ ರೈತರು ದೆಹಲಿಯನ್ನು ಕೇಂದ್ರವಾಗಿಸಿಕೊಂಡು ದೀರ್ಘಕಾಲದ ಚಳುವಳಿಗೆ ಮುಂದಾಗಿರುವುದು ಮತ್ತು ಹಿಂದೆ ಸರಿಯದಿರುವುದು.

ಆ ಮೂರು ರಾಜ್ಯಗಳ ರೈತರಲ್ಲದೇ ಕರ್ನಾಟಕವೂ ಒಳಗೊಂಡು ಹಲವು ರಾಜ್ಯಗಳ ರೈತರೂ ಬೀದಿಗಿಳಿದು ವಿರೋಧ ದಾಖಲಿಸಿರುವುದನ್ನೂ ನಾವು ಗಮನಿಸಬೇಕು.

ಬಹುಶಃ ಹಿಂದೆಂದಿಗಿಂತಲೂ ಈ ಬಾರಿ MSP, APMC , PDS ಮುಂತಾದ ವಿಚಾರಗಳು ಅಕೆಡೆಮಿಕ್ ಹಂತ ದಾಟಿ ಸಮಾಜದ ಹಲವು ವರ್ಗಗಳ ಹೊಸ್ತಿಲು ದಾಟಿರುವುದು ಒಳ್ಳೆಯ ಬೆಳವಣಿಗೆ. ರೈತ ಸಮಸ್ಯೆಗಳ ಬಗ್ಗೆ ಅರಿವಿರುವ ರೈತ ಚಳುವಳಿಗಳ ಅನುಭವ ಮತ್ತು ಪ್ರಭುತ್ವದ ಪಿತೂರಿಗಳ ಅರಿವಿರುವ ಯೋಗೇಂದ್ರ ಯಾದವ್ ಮುಂತಾದ ಹೋರಾಟಗಾರರು ಈ ಕಾಯ್ದೆಗಳು ಸೃಷ್ಟಿಸಲಿರುವ ಅನಾಹುತಗಳನ್ನು ರೈತರಿಗೆ ಮನವರಿಕೆ

ಮಾಡಿಕೊಡುವಲ್ಲಿ ಸಫಲರಾದದ್ದಲ್ಲದೇ ಚಳುವಳಿಯನ್ನು ಕೊಲ್ಲುವ ಪ್ರಭುತ್ವದ ಸಂಚುಗಳನ್ನು ವಿಫಲಗೊಳಿಸುತ್ತಲೇ ಇರುವುದು ಶ್ಲಾಘನೀಯ.

೩, ರಾಜಕೀಯವಾಗಿ ನಿರ್ಣಾಯಕವಾಗತಕ್ಕದು. ಚಳುವಳಿಯ ಆತ್ಮ ಪ್ರಸ್ತುತ ಹಣ, ತೋಳ್ಬಲದಂತಹ ರಾಜಕೀಯ ಸಿದ್ಧ ಮಾದರಿಗಳನ್ನು ತಿರಸ್ಕರಿಸಿ ಸಾತ್ವಿಕ ರಾಜಕೀಯ ಪರ್ಯಾಯದೆಡೆಗೆ ಮುಖ ಮಾಡಬೇಕಿದೆ.

**-ಲಿಂಗೇಗೌಡ ಎಸ್. ಎಚ್.** ರಾಗಿ, ಭತ್ತ, ಕಬ್ಬು ಬೆಳೆಗಾರರು (ಮದ್ದೂರು) ಮತ್ತು ಉಪಾಧ್ಯಕ್ಷರು, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ

## ಪರಂಪರಾಗತ ಕೃಷಿ ಜ್ಞಾನವನ್ನೇ ನಾಶಮಾಡುತ್ತಾರೆ...



೧. ಈಗ ಜಾರಿಗೊಳಿಸಿರುವ ಹೊಸ ಭೂ ಪರಿಮಿತಿ ಕಾಯಿದೆಯ ಪ್ರಕಾರ ಭೂಮಿಯನ್ನು ಗುತ್ತಿಗೆ ನೀಡುವುದು ಮತ್ತು ಭೂಮಿಯನ್ನು ಯಾರು ಬೇಕಾದರೂ ೧೫೦-೨೦೦ ಎಕರೆಗಳವರೆಗೂ ಕೊಳ್ಳಬಹುದು. ಇದು ಅವನ ಬದುಕನ್ನು ಕಿತ್ತುಕೊಳ್ಳುವ ಮತ್ತು ಭೂಮಿಯನ್ನು ಬಂಜರು ಮಾಡುವ ಕ್ರಮವಾಗಿದೆ. ಕೆಲವೇ ಶ್ರೀಮಂತರು ಭೂಮಿಯನ್ನು ಕೊಂಡು, ರೈತರನ್ನು ಅವರ ಹೊಲದಲ್ಲಿಯೇ ಕೂಲಿ ಆಳುಗಳನ್ನಾಗಿ ಮಾಡಿಕೊಳ್ಳುತ್ತಾರೆ. ಇಬ್ಬರ ಮಧ್ಯೆ ತಕರಾರು ಬಂದರೆ ರೈತರು ನ್ಯಾಯಾಲಯಕ್ಕೆ ಹೋಗಲು ಹಲವು ನಿರ್ಬಂಧಗಳನ್ನು ಹೇರಲಾಗಿದೆ.

ಒಟ್ಟಿನಲ್ಲಿ ಇದು ಭೂಮಿ ಮೇಲೆ ಇದ್ದ ರೈತನ ಹಕ್ಕನ್ನು ಕಿತ್ತುಕೊಳ್ಳುವ ಹುನ್ನಾರವಾಗಿದೆ. ವೈವಿಧ್ಯಮಯ ಬೆಳೆಗಳನ್ನು ಇಲ್ಲವಾಗಿಸಿ ಅವರಿಗೆ ಬೇಕಾದ ಏಕ ಬೆಳೆಯನ್ನು ಬೆಳೆದು ರೈತರಿಗೆ ಇದ್ದ ಪರಂಪರಾಗತ ಕೃಷಿ ಜ್ಞಾನವನ್ನೇ ನಾಶಮಾಡುತ್ತಾರೆ. ಈ ಮೂಲಕ ಪರಿಸರದ ಅಸಮತೋಲನತೆಗೆ ಕಾರಣವಾಗುತ್ತದೆ. ವಿದ್ಯುತ್ತನ್ನು ಖಾಸಗೀಕರಣ ಮಾಡುವ ಮೂಲಕ, ರೈತರಿಗೆ, ಬಡವರಿಗೆ ನೀಡುವ ಉಚಿತ ವಿದ್ಯುತ್ ಇಲ್ಲದಂತೆ ಮಾಡುವುದು ಮತ್ತು ಮೀಟರ್ ಅಳವಡಿಸಿ ಹೆಚ್ಚು ವಿದ್ಯುತ್ ಬಿಲ್ ಕಟ್ಟುವಂತೆ ಮಾಡುತ್ತಾರೆ.

೨. ಪಂಜಾಬ್, ಹರಿಯಾಣ ರಾಜ್ಯದ ರೈತರಿಂದ ಬೆಂಬಲ ಬೆಲೆ ಮತ್ತು ಮಂಡಿಗಾಗಿ (ಮುಖ್ಯವಾಗಿ) ಹುಟ್ಟಿಕೊಂಡ ಹೋರಾಟವಾಗಿದ್ದರೂ ನೂರಾರು ರೈತ ಸಂಘಟನೆಗಳು, ಕಾರ್ಮಿಕ ಸಂಘಟನೆಗಳು, ದಲಿತ ಸಂಘಟನೆಗಳು ಐಕ್ಯ ಹೋರಾಟ ರೂಪಿಸಿರುವುದು ನಿಜಕ್ಕೂ ಜನತಂತ್ರ ವ್ಯವಸ್ಥೆ ಬಗ್ಗೆ ಸ್ವಲ್ಪ ಮಟ್ಟಿಗಾದರೂ ಜನರಲ್ಲಿ ಭರವಸೆ ಬಂದಂತಾಗಿದೆ. ದೇಶ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಪಂದನೆ ಪಡೆಯುವಲ್ಲಿ ಯಶಸ್ಸು ಕಂಡಿದೆ, ದೇಶವ್ಯಾಪ್ತಿ ವಿಸ್ತರಣೆಯಾಗಿದೆ. ರೈತನ ಅನ್ನ ತಿನ್ನುವ ಎಲ್ಲರೂ ಇದನ್ನು ಬೆಂಬಲಿಸಬೇಕಿದೆ.

೩. ಈ ಹೋರಾಟದಿಂದ ದೇಶದ ಎಲ್ಲಾ ರೈತರಿಗೂ ಅನುಕೂಲವಾಗಲಿದೆ. ಸ್ಥಳೀಯ ರೈತನಾಯಕರುಗಳಿಂದ ಐಕ್ಯ ಹೋರಾಟ ಸಾಧ್ಯವಾಗುತ್ತಿಲ್ಲ. ಒಟ್ಟಾಗಲು ಸಿದ್ಧರಿಲ್ಲ. ಗ್ರಾಮ ಮಟ್ಟದಲ್ಲಿ ನಿರಂತರವಾಗಿ ಅರಿವು ಮೂಡಿಸಲು ಸಾಧ್ಯವಾಗುತ್ತಿಲ್ಲ. ಒಟ್ಟಿನಲ್ಲಿ ಪ್ರಭುತ್ವದ ವಿರುದ್ಧ ವಿರೋಧ ಪಕ್ಷಗಳು, ಸಮಾಜದ ಹಲವು ಸಂಘಟನೆಗಳು ಪ್ರತಿರೋಧ ಒಡ್ಡುವಲ್ಲಿ ವಿಫಲವಾಗಿರುವ ಸಂದರ್ಭದಲ್ಲಿ ರೈತರ ಹೋರಾಟ ಒಂದು ಆಶಾಕಿರಣ ಮೂಡಿಸಿರುವುದು ಸತ್ಯ. ಎಲ್ಲರನ್ನೂ ಒಗ್ಗೂಡಿಸಿಕೊಂಡು ರೈತ ಹೋರಾಟ ಮುಂದೆ ಸಾಗಿದರೆ, ಇಂದಿನ ರಾಜಕೀಯ ಸ್ಥಿತಿಯನ್ನು ಬದಲಾಯಿಸಬಹುದು.

**-ಡಾ. ಬಸವರಾಜು,** ರಾಗಿ ಮತ್ತು ಸಿರಿಧಾನ್ಯಗಳ ಬೆಳೆಗಾರರು ಮತ್ತು ವೈದ್ಯರು (ಮಾದೇನಹಳ್ಳಿ, ತುಮಕೂರು ಜಿ.)

## ಹೋರಾಟ ಗಾಂಧೀಜಿಯ ಸೋಲು ಗೆಲುವುಗಳಾಚೆಗಿನ ಮಾದರಿಯಲ್ಲಿರಲಿ



೧. ಪ್ರಸ್ತುತ ರೈತ ಚಳುವಳಿಯು ಪಕ್ಷಾತೀತವಾಗಿ ಅತ್ಯಂತ ಸಂಯಮದಿಂದ ನಿರಂತರವಾಗಿ ಮುನ್ನಡೆಯುತ್ತಿರುವುದನ್ನು ಗಮನಿಸಿದಾಗ ಇದು ಸವಲತ್ತುಗಳ ಬೇಡಿಕೆಯ ಹಾಗೂ ಸೋಲು-ಗೆಲುವುಗಳ ಹೋರಾಟವಾಗಿರದೇ ರೈತ ಸಂಕುಲದ ಅಳಿವು-ಉಳಿವಿನ ಹೋರಾಟವಾಗಿರುವುದು ಆಶಾದಾಯಕ ಬೆಳವಣಿಗೆಯಾಗಿದೆ. ಇದಕ್ಕೆ ತಳಹದಿ ಒದಗಿಸಿರುವ ರೈತ ಚಿಂತಕರ ಚಾವಡಿ ಅಭಿನಂದನಾರ್ಹವಾಗಿದೆ.

ಸರ್ಕಾರದ ನೂತನ ಕೃಷಿ ಕಾಯ್ದೆಗಳು ನ್ಯಾಯಾಂಗವನ್ನು ಕೂಡ ಮಿತಿಗೊಳಪಡಿಸಿ ಕೃಷಿ ಕ್ಷೇತ್ರವನ್ನು ನಿರಾಯಾಸವಾಗಿ ಖಾಸಗಿ ಬಂಡವಾಳಗಾರರ ಕೈಗೊಪ್ಪಿಸಿ ಪ್ರಸ್ತುತ ರೈತರು ತಾವಾಗಿಯೇ ಕೃಷಿಯನ್ನು ತೊರೆಯುವಂತೆ ಮಾಡಿ ಸಾವಿರ-ಸಾವಿರ ಹೆಕ್ಟೇರಿಗೊಬ್ಬರಂತೆ ಹೊಸ ಕೃಷಿಕರನ್ನೇ ನಿರ್ಮಿಸಿ ಸರ್ಕಾರ ಕೃಷಿ ಕ್ಷೇತ್ರದ ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತಿರುವ ವಾಸನೆಯನ್ನು ರೈತ ಸಮುದಾಯ ಸರಿಯಾಗಿ ಗ್ರಹಿಸಿದೆ. ಆ ಕಾರಣಕ್ಕೆ ರೈತರ ಕಾಯ್ದೆ ರದ್ದತಿ ಬೇಡಿಕೆ ಅತ್ಯಂತ ಸಮರ್ಪಕವಾಗಿದೆ. ಅದರಂತೆ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಯನ್ನು ಕಾನೂನುಬದ್ಧಗೊಳಿಸುವುದು, ಇದು ಕೂಡ ಅತ್ಯಂತ ಜರೂರಿಯಾಗಿದೆ. ಏಕೆಂದರೆ ಯಾವುದೇ ನಿರ್ದಿಷ್ಟ ಆದಾಯದ ಭರವಸೆಯಿಲ್ಲದ ಜೂಜಾಟವಾಗಿರುವ ಕೃಷಿಯನ್ನು ನಂಬಿರುವ ರೈತ ಸಂಕುಲ ಆತ್ಮಹತ್ಯೆಗೆ ಶರಣಾಗಿರುವುದನ್ನು ಗಮನಿಸಬಹುದು.

೨, ತಮ್ಮ ಬಹುಮತದ ಪಿತ್ತ ನೆತ್ತಿಗೇರಿರುವ ಸರಕಾರ ರೈತ ಸಮುದಾಯವನ್ನು, ಮತ್ತು ಚಳುವಳಿಯ ನಾಯಕರನ್ನು ಪ್ರಚೋದಿಸುವಂತೆ ಇದೊಂದು ಬೆರಳೆಣಿಕೆ ರೈತರು ನಡೆಸುತ್ತಿರುವ ದೇಶ ವಿರೋಧಿ ಚಳುವಳಿಯೆಂದು ಮುಂತಾಗಿ ಬಿಂಬಿಸುತ್ತಿದ್ದರೂ ಕೂಡ ಚಳುವಳಿ ನಾಯಕರು ಸ್ಥಿಮಿತ ಕಳೆದುಕೊಳ್ಳದೇ ಸ್ಥಿತಪ್ರಜ್ಞರಂತೆ, ಇದಕ್ಕೆ ಪ್ರತಿಕ್ರಿಯಿಸದೇ ಆನೆ ನಡಿಗೆಯಲ್ಲಿ ನಿರಂತರವಾಗಿ ಚಳುವಳಿಯನ್ನು ಮುನ್ನಡೆಸುತ್ತಿರುವುದರಿಂದ ಬಲಿಷ್ಠ ಎಂದು ಭಾವಿಸಿರುವ ಅತ್ಯಂತ ದುರ್ಬಲ ಸರ್ಕಾರ ಮೈ ಪರಚಿಕೊಳ್ಳುವಂತಾಗಿದೆ.

೩. ಪ್ರಸ್ತುತ ಸಂದರ್ಭದ ರೈತ ಹೋರಾಟ ದೇಶದ ಇಂದಿನ ರಾಜಕೀಯ, ಸಾಮಾಜಿಕ ಪರಿಸ್ಥಿತಿಯಲ್ಲಿ ಅತ್ಯಂತ ಮೌಲಿಕವಾಗಿದೆ. ಏಕೆಂದರೆ ಇಂದಿನ ಆಡಳಿತ ವ್ಯವಸ್ಥೆ ಜನರ ಅಹವಾಲುಗಳಿಗೆ ತನ್ನದೇ ಪರಿಭಾಷೆಯಲ್ಲಿ ಉತ್ತರಿಸುತ್ತಾ ಪ್ರಶ್ನಿಸುವವರನ್ನು ದಮನಮಾಡಿ ಸಾರ್ವಜನಿಕ ಸಂಸ್ಥೆಗಳನ್ನು ಖಾಸಗಿ ಬಂಡವಾಳಗಾರರಿಗೆ ಒಪ್ಪಿಸಿ ತನ್ನ ಹೊಣೆಗಾರಿಕೆಯಿಂದ ಜಾರಿಗೊಳ್ಳಲು ಯತ್ನಿಸುತ್ತಿದೆ. ಆ ಕಾರಣಕ್ಕೆ ರೈತ ಚಳುವಳಿ ವ್ಯಕ್ತಿ, ಪಕ್ಷ, ಸರ್ಕಾರದ ವಿರೋಧಿ ಚಳುವಳಿಯಾಗಿರದೇ ಗಾಂಧೀಜಿಯವರ ವ್ಯವಸ್ಥೆಯ ಬದಲಾವಣೆಯ ಹೋರಾಟದ ಮಾದರಿಯಲ್ಲಿ ಸೋಲು-ಗೆಲುವುಗಳಾಚೆಗಿನ ಗುರಿ ಸಾಧನೆಯತ್ತ ಚಲಿಸಿದರೆ ಪ್ರಜಾಪ್ರಭುತ್ವಕ್ಕೆ ಸದ್ಯಕ್ಕೆ ಹಿಡಿದಿರುವ ಗ್ರಹಣ ವಿಮೋಚನೆಯಾದೀತು

**-ಅಜ್ಜಪ್ಪ ಬಿರಡಿ,** ಕಬ್ಬು ಮತ್ತು ಜೋಳದ ಬೆಳೆಗಾರರು ಹಾಗೂ ಕೃಷಿ ಪತ್ತಿನ ಸಹಕಾರ ಸಂಘದ ನಿವೃತ್ತ ಕಾರ್ಯದರ್ಶಿ (ಗೋಕಾಕ)

---

**೧ನೇ ಪುಟದಿಂದ)**

ತಾವೇ ತಟ್ಟಿಕೊಂಡು ಸುಖಿಸಿದರು. ಅವರ ಪಕ್ಷವೂ ತನ್ನ ನಾಯಕನ ಈ ಯಶಸ್ಸನು ಜಗತ್ತನಲ್ಲಿ ಯಾರೂ ಸಾಧಿಸದ ವಿಜಯವೆಂದು ಘೋಷಿಸಿತು. ಲಸಿಕೆ ತಯಾರಿಸಿ ಬೇರೆ ದೇಶಗಳಿಗೆ ಕೊಡುವ ಶಕ್ತಿಶಾಲಿ ರಾಷ್ಟ್ರವಾಗಿದೆ ಎಂದು ಎದೆ ತಟ್ಟಿಕೊಂಡಿತು. ಈ ಸ್ವಯಂ ಅಭಿನಂದನೆಯ ಹುಸಿ ಸಂಭ್ರಮಕ್ಕೆ ಸಿಕ್ಕ ದೇಶದ ಆಡಳಿತ ವ್ಯವಸ್ಥೆ ಮತ್ತು ಜನ ಮೊದಲ ಅಲೆಯ ಕಷ್ಟನಷ್ಟಗಳನ್ನೆಲ್ಲ ಬಂದು ಹೋದ ಒಂದು ಕೆಟ್ಟ ಕಾಲವೆಂದಷ್ಟೇ ಭಾವಿಸಿ ಮತ್ತೆ ತಂತಮ್ಮ 'ಅಭಿವೃದ್ಧಿ'ಯ ಎಂದಿನ ದಂಧೆಗಳನ್ನು-ಐಪಿಎಲ್ ಎಂಬ ಅಮಲಾಟವೂ ಸೇರಿದಂತೆ-ಆರಂಭಿಸುತ್ತಿದ್ದಂತೆ ಕೋವಿಡ್‌ನ ಎರಡನೇಯ ಅಲೆ ದಾಳಿ ಇಟ್ಟಿದೆ, ಲಕ್ಷಾಂತರ ಜನ ಇಂದು ಅಗತ್ಯ ವೈದ್ಯಕೀಯ ಸೌಲಭ್ಯಗಳಾಗಲೀ ಆಮ್ಲಜನಕ ತಯಾರಿಕೆಯಾಗಲೀ, ಲಸಿಕೆ ದಾಸ್ತಾನು ಇಲ್ಲದೆ, ಅಂತ್ಯ ಸಂಸ್ಕಾರಕ್ಕೂ ತತ್ವಾರವಾಗುತ್ತಿರುವ ವೇಗದಲ್ಲಿ ಸಾವನ್ನಪ್ಪುತ್ತಿದ್ದಾರೆ. ಇದೆಲ್ಲ ದೇಶದ ನಾಯಕತ್ವದ ಶುದ್ಧ ಹುಂಬತನದ ಪರಿಣಾಮವಲ್ಲದೆ ಮತ್ತೇನಲ್ಲ. ಚಿಂತನಶೀಲತೆಗೆ ಅಷ್ಟೇನೂ ಹೆಸರಾಗದ, ವಿಷಯ ಪರಿಣಿತರನ್ನಾಗಲೀ, ಭಿನ್ನಮತವನ್ನಾಗಲೀ ಸಹಿಸದೆ ಸ್ವಯಂನಂಬಿಕೆಗೆ ನಿಷ್ಠರಾದ ನಾಯಕರೆಂದು ಖ್ಯಾತರಾದ ಮೋದಿಯವರು ಜಗತ್ತಿನ ಇತರ ದೇಶಗಳ ನಾಯಕರು ಕೋವಿಡ್ ಮಾರಿಯ ಪೂರ್ಣಾವತಾರವನ್ನು ಅರಿತು ಅದಕ್ಕೆ ಸಜ್ಜಾದ ರೀತಿಯನ್ನು ಗಮನಿಸದಷ್ಟು ಕುರುಡಾಗಲು ಮೇಲೆ ತಿಳಿಸಿದ ಅವರ ಗುಣ ಸ್ವಭಾವಗಳೆ ಕಾರಣವೆಂದು ತೋರುತ್ತದೆ, ಮುಖ್ಯವಾಗಿ ಅವರ ಬಲಿಷ್ಠತೆಯ ನಂಬಿಕೆಯಲ್ಲಿ ಗಂಡುತನವೇ ಪ್ರಧಾನವಾಗಿದ್ದು ಪಾಲನೆಯ ಹೆಣ್ತನ ಮತ್ತು ಅದರ ಜೊತೆಗೇ ಇರುವ ಮುನ್ನೋಟದ ಗುಣಗಳು ಹಿನ್ನೆಲೆಗೆ ಸರಿದಿರುವುದು ಕಾರಣವೆನ್ನಬಹುದು.

ಸಾಮಾನ್ಯ ಕಾಲದಲ್ಲಿ ಅದೂ ಎದುರಿಗೆ ಸ್ಪರ್ಧೆ ನೀಡಬಲ್ಲ ಸಮರ್ಥ ನಾಯಕರಾರೂ ಇಲ್ಲದ ಸಮಯದಲ್ಲಿ ಆಡಳಿತ ನಡೆಸಿ ಜೈ ಎನ್ನಿಸಿಕೊಳ್ಳುವುದು ಸುಲಭ. ಇರುವ ವ್ಯವಸ್ಥೆಗಳನ್ನು ಬಳಸಿಕೊಂಡೋ, ದುರ್ಬಳಕೆ ಮಾಡಿಕೊಂಡೋ ಅದನ್ನು ಸಾಧಿಸಬಹುದು. ಆದರೆ ಸವಾಲುಗಳು ಎದುರಾದ ಕಾಲದಲ್ಲಿ ಯೋಚನೆ, ಸಮಾಲೋಚನೆ, ಹೊಸ ಆಲೋಚನೆಗಳು ಅಗತ್ಯ ಬೀಳುತ್ತವೆ. ಆದರೆ ಈ ವಿಷಯದಲ್ಲಿ ಮೋದಿಯವರು ಈವರೆಗೆ ಅಷ್ಟೇನೂ ಭರವಸೆ ತೋರಿಲ್ಲ, ಹೆಮ್ಮೆಯ ಹಿಂದೂ ಎಂದು ಹೇಳಿಕೊಳ್ಳುವ ಅವರು (ಮತ್ತು ಅವರ ಪಕ್ಷ) ಹಿಂದೂ ಧರ್ಮದ ಯಾವ ಆವೃತ್ತಿಯನ್ನು ನಂಬಿ ನಡೆದಿದೆಯೋ ತಿಳಿಯದು. ಅದು ಸಾವರ್ಕರ್ ಪ್ರತಿಪಾದಿಸಿದ ಆವೃತ್ತಿ ಇದ್ದೀತು. ಆದರೆ ಅದರಲ್ಲಿ ಧರ್ಮವೆಂಬುದೇ ಇಲ್ಲ, ಬರೀ (ಇಸ್ಲಾಂ ವಿರೋಧಿ)ಪೌರುಷ ಪ್ರದರ್ಶನವಷ್ಟೆ, ಹಾಗಾಗಿ ಹಿಂದೂ ಧರ್ಮದ ಈ ಆವೃತ್ತಿಯ ಪ್ರಭಾವದಿಂದ ಪಾರಾಗಿ ಬೌದ್ಧ-ಜೈನ ತತ್ವಗಳಿಂದ ಹದವಾದ ಸಾಮಾನ್ಯ ಜನರ ಹಿಂದೂ ಧರ್ಮದ ಮೌಲ್ಯಗಳತ್ತ ವಾಪಸಾಗದೆ ಮೋದಿಯವರಿಗಾಗಲೀ, ಅವರ ಪಕ್ಷಕ್ಕಾಗಲೀ ಇಂದಿನ ಅಭಿವೃದ್ಧಿಯ ಪಾತಕತನವಾಗಲೀ, ಅದಕ್ಕೆ ಕಾರಣವಾಗಿರುವ ಹೆಣ್ತನದ ಜೊತೆ ಇರದ ಗಂಡುತನದ ಅಪಾಯಗಳಾಗಲಿ ಕಾಣದು. ಅದು ಕಾಣದೆ ಕೋವಿಡ್ ಕಾಣೆಯಾಗದು. ಅದು ಬೇರೆ ಬೇರೆ ಹೆಸರಿನಲ್ಲಿ ನಮ್ಮನ್ನು ಕಾಡುತ್ತಲೇ ಇರುತ್ತದೆ.

**-ಸಂಪಾದಕ**

# ರೈತನ ಎಲ್ಲ ಬೆಳೆಗಳಿಗೂ ಕನಿಷ್ಠ ಬೆಂಬಲ ಬೆಲೆ ವ್ಯವಸ್ಥೆ : ಒಂದು ವಿವೇಚನೆ

-ಪ್ರೊ. ಅರುಣ್ ಕುಮಾರ್

**ರೈತ ಚಳುವಳಿಯ ಕೇಂದ್ರ ಬೇಡಿಕೆಯೆಂದರೆ ತನ್ನ ಬೆಳೆಗಳಿಗೆ ನ್ಯಾಯಯುತ ಬೆಲೆ ಸಿಗುವುದನ್ನು ಖಚಿತಪಡಿಸುವ ಕನಿಷ್ಠ ಬೆಂಬಲ ಬೆಲೆಯ ಶಾಸನಾತ್ಮಕ ವ್ಯವಸ್ಥೆಯನ್ನು ರೂಪಿಸಬೇಕೆಂಬುದೇ ಆಗಿದೆ. ಇದರ ಹಿಂದಿನ ಕಾರಣಗಳೇನು? ಇದು ಇಂದಿನ ಕೃಷಿ ವ್ಯವಸ್ಥೆಯಲ್ಲಿ ಸಾಧ್ಯವೆ? ಸಾಧುವೆ? ರೈತನ ಎಲ್ಲ ಬೆಳೆಗಳಿಗೆ ಬೆಂಬಲ ಬೆಲೆ ನೀಡುವುದು ಸಾಧ್ಯವೆ? ಅದರ ಹಣಕಾಸಿನ ಸಾಧಕ ಬಾಧಕಗಳೇನು? ಈ ಬೇಡಿಕೆ ಏಕೆ ಈಡೇರಬೇಕು ಮತ್ತು ಹೇಗೆ ಈಡೇರಿಸಬಹುದೆಂಬುದನ್ನು ಈ ಲೇಖನ ಚರ್ಚಿಸುತ್ತದೆ.-ಸಂ**



ರೈತರ ಬಹಳ ದೊಡ್ಡ ಸಮಸ್ಯೆಯೊಂದು ಪತ್ರಿಕೆಗಳ ಮೊದಲ ಪುಟದಿಂದ ಮತ್ತು ಟಿವಿ ವಾಹಿನಿಗಳಲ್ಲಿನ ಪ್ರಧಾನ ಸಮಯದ ಚರ್ಚೆಗಳಿಂದ ನಿಧಾನವಾಗಿ ಮಾಯವಾಗಿದೆ. ಆದರೂ ಸಹ, ರೈತರು ಮತ್ತು ಸರ್ಕಾರದ ನಡುವಿನ ಬಿಕ್ಕಟ್ಟು ಮುಂದುವರಿಯುವ ಎಲ್ಲ ಸೂಚನೆಗಳು ದಟ್ಟವಾಗಿವೆ.

ಬಹಳ ಮುಖ್ಯವಾಗಿ, ರೈತರು ಮತ್ತು ಸರ್ಕಾರದ ನಡುವಿನ ಔಪಚಾರಿಕ ಮಾತುಕತೆ ನಿಂತುಹೋಗಿದೆ. ಕೇಂದ್ರ ಬಜೆಟ್ ೨೦೨೧-೨೨ ಮತ್ತು ರಾಷ್ಟ್ರಪತಿಗಳು ಸಂಸತ್ತಿನಲ್ಲಿ ಮಾಡಿದ ಭಾಷಣಗಳೆರಡರಲ್ಲೂ ರೈತರ ಸಮಸ್ಯೆಗಳ ಬಗೆಗೆ ಪ್ರಸ್ತಾಪವಿಲ್ಲ. ಅದೇ ಸಮಯಕ್ಕೆ, ಕಳೆದ ತಿಂಗಳಲ್ಲಿ ಮಹಾಪಂಚಾಯತ್‌ಗಳು ನಡೆದದ್ದರೊಂದಿಗೆ ಪ್ರತಿಭಟನೆಗಳು ಕೆಲವು ರಾಜ್ಯಗಳಿಗೂ ಹರಡಿವೆ.

ಕೇವಲ ಒಂದು ರಾಜ್ಯಕ್ಕೆ ಸೀಮಿತವಾಗಿದೆಯೆಂದೋ, ದಲ್ಲಾಳಿಗಳು ಅಥವಾ ವಿದೇಶಿ ಶಕ್ತಿಗಳು ಇದರ ಹಿಂದೆ ಇದ್ದಾರೆಂದೋ ಪದೇ ಪದೇ ಆರೋಪಿಸುವ ಮೂಲಕ ಮಂತ್ರಿಗಳು ಈ ಬೃಹತ್ ಚಳುವಳಿಯನ್ನು ತುಚ್ಛೀಕರಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಅನೇಕ ಕಡೆಗಳಲ್ಲಿ ರೈತ ಮುಖಂಡರಿಗೆ ಕಿರುಕುಳ ನೀಡುವುದಲ್ಲದೇ, ಹಲವಾರು ನಿಯಮಗಳ ನೆಪದಲ್ಲಿ ದಂಡ ವಿಧಿಸಲು ಯತ್ನಿಸಲಾಗಿದೆ. ಈ ಆರೋಪಗಳು ಮತ್ತು ಕ್ರಮಗಳು, ರೈತರು ಎತ್ತಿರುವ, ಆದಾಯ ಮತ್ತು ಉತ್ಪನ್ನಗಳಿಗೆ ಅವರು ಪಡೆಯುವ ಬೆಲೆಗಳಂತಹ ನಿಜವಾದ ಸಮಸ್ಯೆಗಳಿಂದ ಗಮನವನ್ನು ಬೇರೆಡೆಗೆ ಸೆಳೆಯುತ್ತವೆ. ರೈತರನ್ನು ಇಂದು ಈ ಬೃಹತ್ ಚಳುವಳಿಗೆ ದೂಡಿದ್ದರ ಹಿಂದೆ ತಮ್ಮ ಸರ್ಕಾರದ ಡಿಮಾನೆಟೈಸೇಶನ್ ಮತ್ತು ಜಿಎಸ್‌ಟಿ ನೀತಿಗಳೂ, ಕೆಲ ಬ್ಯಾಂಕೇತರ ಹಣಕಾಸು ಸಂಸ್ಥೆಗಳ ಹಗರಣಗಳೂ ಇವೆ ಎಂಬುದನ್ನು ಅವರು ಮರೆತಿದ್ದಾರೆ. ಅದೇನೇ ಇರಲಿ, ಈ ವಿಚಾರಗಳನ್ನು ಇನ್ನಷ್ಟು ಬಿಡಿಸಿ ನೋಡುವ ಅಗತ್ಯವಿದೆ.

ಅತ್ಯಂತ ಕೆಳಮಟ್ಟದ ಆದಾಯವನ್ನು ಹೊಂದಿರುವ ಅನೇಕ ರೈತರು, ತಮ್ಮದು ನಷ್ಟದ ವೃತ್ತಿ ಎಂದು ಹೇಳಿಕೊಳ್ಳುತ್ತಾರೆ. ಏಕೆಂದರೆ ಅವರು ತಮ್ಮ ಬೇಸಾಯದ ಪೂರ್ಣ ಉತ್ಪಾದನಾ ವೆಚ್ಚವನ್ನು ಗಳಿಸಿಕೊಳ್ಳುವುದೇ ಬಹಳ ಕಡಿಮೆ. ಅನೇಕ ಯುವ ರೈತರು ಕೃಷಿಯನ್ನು ಕೈಬಿಟ್ಟು ಹೆಚ್ಚಿನ ಸಂಬಳಗಳ ಕೆಲಸಗಳನ್ನು ಅರಸುತ್ತಾ ನಗರಗಳಿಗೆ ವಲಸೆ ಹೋಗಲು ಬಯಸುತ್ತಾರೆ. ವಲಸಿಗರು ತಮ್ಮ ಸಂಬಳದ ಹಣವನ್ನು ಕಳಿಸಿ ಹಳ್ಳಿಗಳಲ್ಲಿರುವ ತಮ್ಮ ಕುಟುಂಬಗಳನ್ನು ಪೋಷಿಸುತ್ತಿದ್ದಾರೆ. ಇದು ಗ್ರಾಮೀಣ ಭಾರತದಲ್ಲಿನ ನಿರ್ಗತಿಕತನದ ಮತ್ತೊಂದು ಸೂಚನೆ. ಈಗ ಈ ಕರೋನಾ, ಉದ್ಯೋಗ ಕಳೆದುಕೊಂಡು ತಮ್ಮ ಗ್ರಾಮಗಳಿಗೆ ಮರಳಿರುವ ವಲಸೆ ಕಾರ್ಮಿಕರ ಪರಿಸ್ಥಿತಿಯನ್ನು ಮತ್ತಷ್ಟು ಕೆಡಿಸಿದೆ.

ಇತ್ತೀಚೆಗೆ ಮಾತ್ರವಲ್ಲ, ಕಳೆದ ಕೆಲವು ವರ್ಷಗಳಿಂದ ರೈತರು ತೀವ್ರವಾಗಿ ಪ್ರತಿಭಟಿಸುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ೨೦೧೯ ರ ಚುನಾವಣೆಗೆ ಮೊದಲು ಮಹಾರಾಷ್ಟ್ರ ಮತ್ತು ದೆಹಲಿಯ ಹೊರಗೆ ರೈತರಿಂದ ದೊಡ್ಡ ಪ್ರದರ್ಶನಗಳು ನಡೆದವು. ಜಂತರ್ ಮಂತರ್‌ನಲ್ಲಿ ತಮಿಳುನಾಡಿನ ರೈತರು ದೀರ್ಘಕಾಲ ಪ್ರತಿಭಟನೆ ನಡೆಸಿದರು. ಮಧ್ಯಪ್ರದೇಶದ ರೈತರು ಕೂಡ ತೀವ್ರವಾಗಿ ಪ್ರತಿಭಟಿಸಿದರು. ಈ ಎಲ್ಲ ಪ್ರತಿಭಟನೆಗಳೂ ಕೂಡ, ನ್ಯಾಯಯುತ ಆದಾಯವನ್ನು ತಂದುಕೊಡುವಂಥ ಉತ್ತಮ ಬೆಲೆಯನ್ನು ಖಚಿತಪಡಿಸಿಕೊಳ್ಳುವ ಬೇಡಿಕೆಗೇ ಸಂಬಂಧಿಸಿದ್ದವು ಎಂಬುದಿಲ್ಲಿ ಗಮನಾರ್ಹ.

## ಉತ್ಪಾದನಾ ವೆಚ್ಚಗಳನ್ನು ಒಳಗೊಂಡಿಲ್ಲದಿರುವುದು

ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಇದನ್ನು ಗುರುತಿಸದೇ ಇಲ್ಲ. ೨೦೧೯ರ ಚುನಾವಣೆಗೆ ಸ್ವಲ್ಪ ಮುಂಚೆ, ೨೦೧೯-೨೦ರ ಬಜೆಟ್‌ನಲ್ಲಿ ಕೇಂದ್ರವು, ೧೨ ಕೋಟಿ ರೈತ ಕುಟುಂಬಗಳಿಗೆ ವಾರ್ಷಿಕ ೬,೦೦೦ ರೂ. ಒದಗಿಸುವ ಕಿಸಾನ್ ಸಮ್ಮಾನ್ ನಿಧಿ ಯೋಜನೆಯನ್ನು ಘೋಷಿಸಿತು. ತೆಲಂಗಾಣ ಮತ್ತು ಒಡಿಶಾಗಳಲ್ಲಿಯಂತೆ, ರಾಜ್ಯಗಳು ತಮ್ಮದೇ ಆದ ಯೋಜನೆಗಳನ್ನು ಘೋಷಿಸಿದ್ದವು. ಸರ್ಕಾರ ನಿಗದಿಪಡಿಸುವ ಎಂಎಸ್‌ಪಿ(ಕನಿಷ್ಠ ಬೆಂಬಲ ಬೆಲೆ)ಯು ರೈತರಿಗೆ ಸಿಗುವಂತಹ *ಭವಂತರ್ ಭುಗ್ತಾನ್* ಯೋಜನೆಯನ್ನು ಮಧ್ಯಪ್ರದೇಶ ಸರ್ಕಾರವು ಘೋಷಿಸಿತು. ಇವು ಆದಾಯ ಮತ್ತು ಬೆಂಬಲ ಬೆಲೆ ಯೋಜನೆಗಳಾಗಿದ್ದು, ರೈತರಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ ಎಂಬುದನ್ನು ಗುರುತಿಸುತ್ತವೆ.

ರೈತರ ಉತ್ಪನ್ನಗಳ ಬೆಲೆ ಅವರ ಬದುಕಿಗೆ ನಿರ್ಣಾಯಕವಾಗಿದೆ. ಏಕೆಂದರೆ ಅದು ಅವರ ಆದಾಯವನ್ನು ನಿರ್ಧರಿಸುತ್ತದೆ. ಇತರ ವ್ಯಾಪಾರಗಳಲ್ಲಿರುವಂತೆಯೇ, ಖರ್ಚು ವೆಚ್ಚಗಳನ್ನು ಕಳೆದ ನಂತರ ಉಳಿಯುವುದು ಆದಾಯ. ಆದ್ದರಿಂದ, ಉತ್ಪಾದನಾ ವೆಚ್ಚಕ್ಕಿಂತ ಬೆಲೆ ಹೆಚ್ಚಿರಬೇಕು. ಬೆಲೆ ಕಡಿಮೆಯಾದರೆ ಆದಾಯ ಕಡಿಮೆಯಾಗುತ್ತದೆ. ಹಾಗಾಗಿ, ಕೃಷಿಯ ವೆಚ್ಚವನ್ನು ಮಾತ್ರ ಸರಿದೂಗಿಸುವುದಷ್ಟೇ ಅಲ್ಲ, ಅದಕ್ಕಿಂತ ಹೆಚ್ಚಿನ ಮತ್ತು ಉತ್ತಮ ಆದಾಯ ತರುವ ಬೆಲೆ ಪಡೆಯುವುದಕ್ಕೆ ರೈತರು ಬೇಡಿಕೆಯಿಟ್ಟಿದ್ದಾರೆ. ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗವು ನಿರ್ಧರಿಸುವ ಕನಿಷ್ಠ ಬೆಂಬಲ ಬೆಲೆಯನ್ನು ಹೀಗೆ ನಿಗದಿಪಡಿಸಬೇಕಾಗಿದೆ.

ರೈತರಿಗೆ ಎರಡು ರೀತಿಯ ಖರ್ಚುಗಳಿವೆ. ಒಂದು, ಅವರು ಮಾರುಕಟ್ಟೆಯಿಂದ ಏನು ಖರೀದಿಸುತ್ತಾರೆಯೋ ಅದು. ಅಂದರೆ, ಕೂಲಿ, ರಸಗೊಬ್ಬರ ಮತ್ತು ಕೀಟನಾಶಕ ಇತ್ಯಾದಿ ಖರ್ಚುಗಳು. ಮತ್ತೊಂದು, ಕುಟುಂಬದ ಸ್ವಂತ ಶ್ರಮ, ಬೀಜ ಸಂಗ್ರಹಣೆ ಮತ್ತು ಪೋಷಣೆ ಮತ್ತು ಸ್ವಂತ ಉಪಕರಣಗಳಿಗೆ ಸಂಬಂಧಿಸಿದ ವೆಚ್ಚ. ವೆಚ್ಚಗಳನ್ನು ಗುರುತಿಸುವಾಗ ಎರಡನೆಯದನ್ನು ಭಾಗಶಃ ಮಾತ್ರ ಪರಿಗಣಿಸುತ್ತಾರೆ ಎಂದು ರೈತರು ವಾದಿಸುತ್ತಾರೆ. ಆದ್ದರಿಂದ, ಉತ್ಪಾದನಾ ವೆಚ್ಚಕ್ಕಿಂತ ಶೇ. ೫೦ರಷ್ಟು ಹೆಚ್ಚು ಎಂಎಸ್‌ಪಿಯನ್ನು ಕೊಡುತ್ತೇವೆ ಎಂದು ಸರ್ಕಾರ ಘೋಷಿಸುವಾಗ, ಅದು ಪೂರ್ಣ ವೆಚ್ಚವನ್ನು ಒಳಗೊಂಡಿಲ್ಲ ಎಂದು ರೈತರು ಹೇಳುತ್ತಾರೆ. ಆದ್ದರಿಂದ ಅವರ ವ್ಯವಹಾರ ನಷ್ಟದ್ದಾಗಿದೆ ಎಂಬ ವಾದವಿದೆ.

ಯಾವುದೇ ಉದ್ಯಮವು ಎಲ್ಲಾ ವೆಚ್ಚಗಳನ್ನೂ ಗುರುತಿಸಿ, ಅದರ ಆಧಾರದ ಮೇಲೆ ಬೆಲೆಯನ್ನು ನಿಗದಿಪಡಿಸುತ್ತದೆ. ಹಾಗಾಗಿ ಲಾಭವನ್ನೂ ಗಳಿಸುತ್ತದೆ. ೧೪ ಕೋಟಿ ರೈತರು-ಅವರಲ್ಲಿ ಶೇ. ೮೬ರಷ್ಟು ಸಣ್ಣ ಮತ್ತು ಅಂಚಿನ ರೈತರು-ಇರುವ ಕೃಷಿಯಲ್ಲಿ ರೈತರು ಹೆಚ್ಚಾಗಿ ತಮ್ಮ ಸ್ಥಳೀಯ ಮಧ್ಯವರ್ತಿಗಳಿಂದಾಗಲೀ, ದೊಡ್ಡ ಮಂಡಿಗಳಲ್ಲಾಗಲೀ ದೊರೆಯುವ ಬೆಲೆಯನ್ನು ಒಪ್ಪಿಕೊಳ್ಳಬೇಕಾಗಿದೆ. ಯಾವುದೇ ಉದ್ಯಮದಲ್ಲಾಗುವಂತೆ, ರೈತರು ತಾವು ಪಡೆಯುವ ಬೆಲೆಯನ್ನು ತಾವಾಗಿಯೇ ನಿರ್ಧರಿಸಲು ಸಾಧ್ಯವಾಗಿಲ್ಲ.

ಎಂಎಸ್‌ಪಿಯ ಪಾತ್ರವಿರುವುದು ಇಲ್ಲಿಯೇ. ಎರಡು ಕಾರಣಗಳಿಗಾಗಿ ರೈತರಿಗೆ ಕನಿಷ್ಠ ಬೆಲೆ ಮುಖ್ಯವಾಗಿದೆ. ಮೊದಲನೆಯದಾಗಿ, ಅದು ಅವರ ಎಲ್ಲಾ ವೆಚ್ಚಗಳನ್ನು ಒಳಗೊಳ್ಳುವುದು ಮತ್ತು ತಕ್ಕಷ್ಟು ಲಾಭವನ್ನು ಒದಗಿಸುವುದು ಅಗತ್ಯವಾಗಿರುತ್ತದೆ. ಎರಡನೆಯದಾಗಿ ಮತ್ತು ಬಹುಶಃ ಹೆಚ್ಚು ಮುಖ್ಯವಾಗಿ, ಮಾರುಕಟ್ಟೆಯಲ್ಲಿ ಎಂಎಸ್‌ಪಿ ಬೆಲೆಯಲ್ಲಿ-ಅದಕ್ಕಿಂತ ಕಡಿಮೆಗೆ ಅಲ್ಲ-ಮಾರಾಟ ಮಾಡಲು ಸಾಧ್ಯವಾಗುವುದು.

ಶೇ. ೬ರಷ್ಟು ಕೃಷಿ ಕುಟುಂಬಗಳಿಗೆ ಮತ್ತು ೨೩ ಬೆಳೆಗಳಿಗೆ ಎಂಎಸ್‌ಪಿ ಲಭ್ಯವಿದೆ ಎಂದು-ಇದು ಕಡಿಮೆ ಅಂದಾಜು ಎಂದು ಹೇಳಲಾಗುತ್ತಿದೆಯಾದರೂ-ಅಧಿಕೃತ ಮಾಹಿತಿ ಹೇಳುತ್ತದೆ. ಹೆಚ್ಚಿನ ರೈತರು ಎಂಎಸ್‌ಪಿಯನ್ನು ಪಡೆಯುವುದಿಲ್ಲ, ವಿಶೇಷವಾಗಿ ಮಾರುಕಟ್ಟೆಯಲ್ಲಿ ದೀನರಾಗಿ ಎಂಎಸ್‌ಪಿಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡುವಂತೆ ಚೌಕಾಶಿಗೊಳಗಾಗುವ ಸಣ್ಣ ರೈತರು. ಬೇಸಾಯದಿಂದ ಜೀವನ ನಡೆಸಲಾಗದ ಮತ್ತು ಬೇಸಾಯ ಮುಂದುವರೆಸಲಾಗದೆ ಸಾಲದ ಸುಳಿಗೆ ಸಿಕ್ಕವರು ಇವರು. ಪ್ರತಿಯೊಬ್ಬರೂ ಕಾನೂನಾತ್ಮಕವಾಗಿ ಎಂಎಸ್‌ಪಿಗೆ ಬದ್ಧರಾಗುವಂತೆ ರೈತರು ಒತ್ತಾಯಿಸುತ್ತಿರುವುದು ಮಾರುಕಟ್ಟೆಯಲ್ಲಿ ಅವರು ಎದುರಿಸುತ್ತಿರುವ ದುರ್ಬಲ ಪರಿಸ್ಥಿತಿಯಿಂದಾಗಿಯೇ.

ಎಲ್ಲಾ ಬೆಳೆಗಳಿಗೆ ಮತ್ತು ಎಲ್ಲಾ ರೈತರಿಗೆ ಎಂಎಸ್‌ಪಿ ಏಕೆ ಇಲ್ಲ ಎಂಬ ಪ್ರಶ್ನೆ

ಏಳುತ್ತದೆ. ಇದು ಜಾರಿಗೆ ಬಂದಲ್ಲಿ, ಖಾಸಗಿ ವ್ಯಾಪಾರಿಗಳು ಉತ್ಪನ್ನಗಳನ್ನು ಖರೀದಿಸುವುದಿಲ್ಲ ಮತ್ತು ಕೃಷಿ ಕ್ಷೇತ್ರದಲ್ಲಿ ಉತ್ಪಾದಿಸಿದ ಎಲ್ಲವನ್ನೂ ಸರ್ಕಾರ ಖರೀದಿಸಬೇಕಾಗುತ್ತದೆ ಎಂದು ವಾದಿಸಲಾಗುತ್ತಿದೆ. ಕೃಷಿಯು ಜಿಡಿಪಿಯ ಶೇ. ೧೮ರಷ್ಟನ್ನು ಉತ್ಪಾದಿಸಿದರೆ, ಸರ್ಕಾರವು ೨೮ ಲಕ್ಷ ಕೋಟಿ ರೂ.ಗಳ ಉತ್ಪನ್ನಗಳನ್ನು ಖರೀದಿಸಬೇಕಾಗುತ್ತದೆ. ಆದ್ದರಿಂದ ಎಂಎಸ್‌ಪಿ ಯೋಜನೆಯ ಟೀಕಾಕಾರರು, ಹಣ ಎಲ್ಲಿಂದ ಬರುತ್ತದೆ? ಎಂದು ಕೇಳುತ್ತಾರೆ.

**ಬಜೆಟ್ ಪರಿಣಾಮಗಳು**

ಇಲ್ಲಿ ಅನೇಕ ಅಂಶಗಳನ್ನು ನಾವು ಪರಿಗಣಿಸಬೇಕಾಗುತ್ತದೆ. ಮೊದಲನೆಯದಾಗಿ, ರೈತರು ಉತ್ಪನ್ನಗಳ ಗಣನೀಯ ಭಾಗವನ್ನು ತಮ್ಮ ಸ್ವಂತ ಬಳಕೆಗಾಗಿ ಉಳಿಸಿಕೊಳ್ಳುತ್ತಾರೆ ಮತ್ತು ಮಿಕ್ಕವುಗಳನ್ನು ಮಾರಾಟ ಮಾಡುತ್ತಾರೆ. ಅದನ್ನು ಸರ್ಕಾರ ಖರೀದಿಸಬೇಕಾಗಬಹುದು. ಎರಡನೆಯದಾಗಿ, ಸರ್ಕಾರವು ತನ್ನ ಸ್ವಂತ ಬಳಕೆಗಾಗಿ ಖರೀದಿಸುತ್ತಿಲ್ಲ, ಆದರೆ ಗ್ರಾಹಕರು ಮತ್ತು ಉತ್ಪಾದಕರನ್ನೊಳಗೊಂಡ ಆರ್ಥಿಕತೆಗಾಗಿ ಖರೀದಿಸುತ್ತದೆ. ಆಹಾರವನ್ನು ಸಾರ್ವಜನಿಕ ಬಳಕೆಗೆ ಖರೀದಿಸಬಹುದು, ಹತ್ತಿಯನ್ನು ಜವಳಿ ಉದ್ಯಮ ಖರೀದಿಸಬಹುದು. ಹೀಗೆ, ಖರೀದಿಸಿದ ಎಲ್ಲವನ್ನೂ ಸಹ ಮಾರಾಟ ಮಾಡಬಹುದಾದ್ದರಿಂದ, ಅದರ ಸಂಗ್ರಹಕ್ಕಾಗಿ ಖರ್ಚು ಮಾಡಿದ ಹಣವು ಸರ್ಕಾರದ ಬೊಕ್ಕಸಕ್ಕೆ ಮರಳುತ್ತದೆ. ಇದು ಉದ್ಯಮಗಳು ಬ್ಯಾಂಕುಗಳಿಂದ ಸಾಲ ಪಡೆದ ಬಂಡವಾಳದಂತೆ ಇದೆಯಷ್ಟೆ. ಸಹಾಯಧನ ಮಾತ್ರ ಬಜೆಟ್‌ನಿಂದ ಬರಬೇಕಾಗುತ್ತದೆ. ಅದು ಮಾರಾಟದ ಬೆಲೆ ಮತ್ತು ವೆಚ್ಚದ ನಡುವಿನ ವ್ಯತ್ಯಾಸವಾಗಿರುತ್ತದಷ್ಟೆ. ಇಲ್ಲಿ ಮಾರಾಟದ ಬೆಲೆಯು ಆಡಳಿತಾತ್ಮಕ ವೆಚ್ಚಗಳು ಮತ್ತು ಬಡವರಿಗೆ ಅಗ್ಗದ ಬೆಲೆಯಲ್ಲಿ ಧಾನ್ಯಗಳನ್ನು ಪೂರೈಸುವುದನ್ನು ಒಳಗೊಂಡಿರುತ್ತದೆ.

ಅಂದರೆ, ಸರ್ಕಾರವು ಎಲ್ಲವನ್ನೂ ಯಾವಾಗಲೂ ಖರೀದಿಸಬೇಕಾಗಿಲ್ಲ ಎಂದಾಯಿತು. ಬೆಲೆ ಎಂಎಸ್‌ಪಿಗಿಂತ ಕಡಿಮೆಯಾಗುವ ಪ್ರವೃತ್ತಿಯಿದ್ದಾಗ ಮಾತ್ರ ಅದು ಖರೀದಿಗೆ ಮುಂದಾಗಬೇಕಾಗುತ್ತದೆ. ಆದರೆ ಇದು ಕಾನೂನುಬದ್ಧವಾಗಿರುವ ಬೆಲೆಯಾಗುವುದರಿಂದ, ಖಾಸಗಿ ವ್ಯಾಪಾರಿಗಳೂ ಸಹ (ಅವರು ಈ ವ್ಯವಹಾರ ಬಿಟ್ಟು ಎಲ್ಲಿ ಹೋದಾರು?) ಈ ಬೆಲೆಗೆ ಅಥವಾ ಹೆಚ್ಚಿನ ಬೆಲೆಗೆ ಖರೀದಿಸುತ್ತಾರೆ. ಬೆಲೆ ಕುಸಿಯುವ ಪ್ರವೃತ್ತಿ ಕಂಡು ಬಂದರೆ ಮಾತ್ರ ಸರ್ಕಾರವು ಕೊಂಡು ಸಂಗ್ರಹಿಸಿಟ್ಟುಕೊಳ್ಳಬೇಕಾಗುತ್ತದೆ ಮತ್ತು ನಂತರ ಬೆಲೆ ತಾನೇತಾನಾಗಿ ಏರುತ್ತದೆ. ಆದ್ದರಿಂದ, ಸರ್ಕಾರಕ್ಕಿರುವ ಖರ್ಚೆಂದರೆ, ದಾಸ್ತಾನು ವೆಚ್ಚ ಮಾತ್ರ, ಇಡೀ ಬೆಳೆಯ ಮೌಲ್ಯವಲ್ಲ.

ಆದಾಗ್ಯೂ, ಎಲ್ಲಾ ಬೆಳೆಗಳಿಗೆ ಎಂಎಸ್‌ಪಿ ಘೋಷಿಸುವುದರೊಂದಿಗೆ, ಬೆಳೆ ವಿಧಾನವು ಬದಲಾಗುತ್ತದೆ ಮತ್ತು ಕೆಲವು ರಾಜ್ಯಗಳಲ್ಲಿ ಗೋಧಿ ಮತ್ತು ಭತ್ತದ ಹೆಚ್ಚುವರಿ ಉತ್ಪಾದನೆ ನಿಲ್ಲುತ್ತದೆ. ಉದಾಹರಣೆಗೆ, ಅಗತ್ಯವಿರುವ ಹೆಚ್ಚಿನ ಎಣ್ಣೆಕಾಳುಗಳು ಮತ್ತು ದ್ವಿದಳ ಧಾನ್ಯಗಳು ಹೆಚ್ಚು (ಕನಿಷ್ಠ ಬೆಂಬಲ) ಬೆಲೆ ಗಳಿಸುವುದರಿಂದ ಅವುಗಳ ಉತ್ಪಾದನೆ ಹೆಚ್ಚುತ್ತದೆ. ಆಗ ಗೋಧಿ ಮತ್ತು ಭತ್ತದ ಬೆಳೆ ಕಡಿಮೆಯಾಗಿ ಅವುಗಳಿಗೆ ನೀಡಬೇಕಾದ ಸಹಾಯಧನ ಬಹಳಷ್ಟು ಕಡಿಮೆಯಾಗುತ್ತದೆ. ಇದಲ್ಲದೆ, ರೈತರು ಹೆಚ್ಚಿನ ಬೆಲೆ ಪಡೆಯುವುದರಿಂದ, ಅವರಿಗೆ ಕೊಡುವ ವಿವಿಧ ಸಹಾಯಧನಗಳನ್ನು ಕಡಿಮೆ ಮಾಡಬಹುದು.

ಆದ್ದರಿಂದ, ಎಲ್ಲಾ ಬೆಳೆಗಳಿಗೆ ಎಂಎಸ್‌ಪಿ ಜಾರಿ ಮಾಡುವುದು ಮತ್ತು ಸಂಗ್ರಹಣಾ ವೆಚ್ಚಗಳು ಬಜೆಟ್‌ಗೆ ಭಾರವೇನೂ ಆಗದು. ವಿವಿಧ ಸಹಾಯಧನಗಳಿಗಾಗಿ ಈಗ ಖರ್ಚು ಮಾಡುತ್ತಿರುವುದಕ್ಕಿಂತ ಹೆಚ್ಚೇನೂ ಹಣ ಬೇಕಾಗುವುದಿಲ್ಲ. ನಿಸ್ಸಂದೇಹವಾಗಿ, ಇದಕ್ಕೆ ಹೆಚ್ಚು ವ್ಯಾಪಕವಾದ ಮತ್ತು ಉತ್ತಮ ಆಡಳಿತ ವ್ಯವಸ್ಥೆ ಬೇಕಾಗುತ್ತವೆ. ಗ್ರಾಮ ಮತ್ತು ನಗರಗಳೆರಡರಲ್ಲೂ ದಿನಗೂಲಿ ನೌಕರರು ಮತ್ತು ಸಂಬಳ ಪಡೆಯುವವರು ಸ್ವಲ್ಪ ಹಣದುಬ್ಬರದ ಪರಿಣಾಮವನ್ನು ಎದುರಿಸಬೇಕಾಗಬಹುದು. ಕನಿಷ್ಠ ವೇತನವನ್ನು ಹೆಚ್ಚಿಸಬೇಕಾಗುತ್ತದೆ. ಕರೋನಾ ಸಾಂಕ್ರಾಮಿಕದಿಂದ ಈಗಾಗಲೇ ಸಂಕಷ್ಟಕ್ಕೀಡಾಗಿರುವ ದುಡಿಯುವ ವರ್ಗಕ್ಕೆ ಜೀವನ ನಿರ್ವಹಣೆಯ ವಿಶೇಷ ಭತ್ಯೆ ಕೊಡುವ ಪದ್ಧತಿಯ ಅಗತ್ಯ ಗೊತ್ತಾಗಿದೆ. ವಿಪರೀತವಾಗಿ ಅಸಮಾನತೆ ಮತ್ತು ಬೇಡಿಕೆ ಕುಸಿತಗಳಿಗೆ ಮುಖ್ಯ ಕಾರಣಗಳಾಗಿರುವ ಬೃಹತ್ ವಾಣಿಜ್ಯ-ವ್ಯವಹಾರಗಳಲ್ಲಿನ ಬೃಹತ್ ಲಾಭಾಂಶವನ್ನು ತಡೆದು ಕುಸಿಯುತ್ತಿರುವ ನಮ್ಮ ಆರ್ಥಿಕತೆಗೆ ಇಂಬು ನೀಡಬೇಕಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಎಲ್ಲಾ ಕೃಷಿ ಉತ್ಪನ್ನಗಳಿಗೆ ಎಂಎಸ್‌ಪಿ ಘೋಷಿಸುವುದು ತಳಮಟ್ಟದಿಂದ ಅಭಿವೃದ್ಧಿಗೆ ಕಾರಣವಾಗುತ್ತದೆ ಮತ್ತು ಪ್ರಸ್ತುತ ಇರುವ ಸಂಪನ್ಮೂಲಗಳಲ್ಲಿಯೇ ಇದನ್ನು ಸಾಧಿಸಬಹುದಾಗಿದೆ. ಸವಾಲಿರುವುದು, ಆಡಳಿತಾತ್ಮಕ ವಿಷಯಗಳಲ್ಲಿ ಮತ್ತು ಹಣದುಬ್ಬರದ ಒತ್ತಡಗಳ ನಿರ್ವಹಣೆಯಲ್ಲಿ. ಆದರೆ ಇತರರ ಜೀವನ ಮಟ್ಟದ ರಕ್ಷಣೆ ರೈತರ ಹಿತವನ್ನು ಬಲಿಗೊಟ್ಟು ನಡೆಯುವಂತಾಗಬಾರದಲ್ಲವೆ?

(ಕೃಪೆ: **ಜನತಾ,** ೭ ಮಾರ್ಚ್, ೨೦೨೧
ಕನ್ನಡಕ್ಕೆ: **ರೇಖಾಂಬ** ಟಿ.ಎಲ್.)



**(ಲೇಖಕರು ದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರೂ, ಹಿರಿಯ ಆರ್ಥಿಕ ವಿಶ್ಲೇಷಣಕಾರರೂ ಆಗಿದ್ದಾರೆ.)**

**೬ನೇ ಪುಟದಿಂದ)**

ಧಾರಾವಿ ಮತ್ತಿತರ ಕೊಳಚೆ ಪ್ರದೇಶಗಳಲ್ಲಿ ನಡೆಸುತ್ತಿದ್ದ ನರಕಸದೃಶ ಜೀವನವನ್ನು ಕಂಡು ನೊಂದಿದ್ದ ಜಾರ್ಜ್, ೧೯೭೭ರಲ್ಲಿ ಮೊರಾರ್ಜಿ ಸರಕಾರದಲ್ಲಿ ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಯತ್ನಿಸಿದರು. ಗಾಂಧೀಜಿಯವರ ಸ್ವದೇಶಿ, ದೇಶದಾದ್ಯಂತ ಏಕರೂಪದ ವಿಕೇಂದ್ರೀಕೃತ ಬೆಳವಣಿಗೆ ಮತ್ತು ಲೋಹಿಯಾರವರ 'ಸೂಕ್ತ ತಂತ್ರಜ್ಞಾನ' (ಅಪ್ರಾಪ್ರಿಯೇಟ್ ಟೆಕ್ನಾಲಜಿ) ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಜನತಾ ಪಾರ್ಟಿ ಸರಕಾರದ ಹೊಸ ಕೈಗಾರಿಕಾ ನೀತಿಯನ್ನು ಜಾರಿಗೊಳಿಸಿದರು. ಈ ನೀತಿಯಿಂದ ಖಾದಿಗೆ ಪ್ರೋತ್ಸಾಹ ದೊರೆಯಿತು. ಇದರ ಅಂಗವಾಗಿ ಸ್ಥಾಪಿಸಲಾದ ಜಿಲ್ಲಾ ಕೈಗಾರಿಕಾ ಕೇಂದ್ರಗಳು ಜಾರ್ಜ್ ಕನಸಿನ ಕೂಸು. ಗ್ರಾಮೀಣ ಪ್ರದೇಶಗಳಲ್ಲಿ ಅಧಿಕ ಉದ್ಯೋಗ ಸೃಷ್ಟಿಯಾಗುವಂತೆ ೫೦೪ ವಸ್ತುಗಳನ್ನು ಸಣ್ಣ ಮತ್ತು ಗುಡಿಕೈಗಾರಿಕೆ ಪಟ್ಟಿಯಲ್ಲಿ ಮೀಸಲಿರಿಸಿದ ಕಾರಣ ದೇಶದ ಉದ್ದಗಲಕ್ಕೂ ಸಣ್ಣ ಉದ್ಯಮಗಳು ಬೆಳೆದು ಲಕ್ಷಾಂತರ ಯುವಜನರು ಉದ್ಯಮಿಗಳಾದರು. ಸಣ್ಣ ಉದ್ಯಮಕ್ಕೆ ತೆರಿಗೆ ವಿನಾಯಿತಿ ಕೊಟ್ಟು ಅದೇ ವಸ್ತು ತಯಾರಿಸುವ ದೊಡ್ಡ ಉದ್ಯಮಗಳಿಗೆ ಎರಡು ಪಟ್ಟು ತೆರಿಗೆ ಹಾಕಿದ ಕಾರಣ ಸಣ್ಣ ಉದ್ಯಮಗಳು ದೊಡ್ಡ ಉದ್ಯಮಗಳಿಗೆ ಪೈಪೋಟಿ ನೀಡಲು ಸಾಧ್ಯವಾಯಿತು.

ಇಂದು ಕೊರೋನಾ ಕಾಲದಲ್ಲಿ ಜಗತ್ತಿನಲ್ಲಿ ಆತ್ಮನಿರ್ಭರತೆ, ಸ್ವದೇಶಿ ಉದ್ಯಮ ಸಂರಕ್ಷಣೆ ಮತ್ತು ವಲಸೆ ಕಾರ್ಮಿಕರ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ೭೦-೮೦ರ ದಶಕಗಳಲ್ಲಿ ಜಾರ್ಜ್ ಮಂತ್ರಿಯಾಗಿ ತೆಗೆದುಕೊಂಡ ನಿರ್ಧಾರಗಳು ಮತ್ತು ಸರಕಾರದಲ್ಲಿಲ್ಲದಾಗ ಅವರು ನಡೆಸಿದ ಹೋರಾಟ, ಅಂದು ಎಷ್ಟು ಪ್ರಸ್ತುತವಾಗಿತ್ತೋ, ನಾಲ್ಕು ದಶಕಗಳ ನಂತರ ಇಂದು ಇನ್ನೂ ಹೆಚ್ಚು ಪ್ರಸ್ತುತವಾಗಿ ಕಾಣಿಸುತ್ತಿದೆ.

ಕಾರ್ಮಿಕರು ಅನ್ಯ ರಾಜ್ಯಗಳಲ್ಲಿ ಶೋಷಣೆಗೆ ಒಳಗಾಗುವುದರಿಂದ ಮುಕ್ತಿ ನೀಡಲು *ಅಂತರರಾಜ್ಯ ವಲಸೆ ಕಾರ್ಮಿಕರು(ಉದ್ಯೋಗ ನಿಯಂತ್ರಣ ಮತ್ತು ಸೇವೆಯ ಷರತ್ತುಗಳು) ಕಾಯ್ದೆ ೧೯೭೯ರ* ಅನುಷ್ಠಾನಕ್ಕೆ ಜಾರ್ಜ್ ಕಾರಣರಾದರು. ಕಡಿಮೆ ಬಂಡವಾಳವೂ ಹೆಚ್ಚು ದುಡಿಮೆಯ ಕೈಗಳೂ ಇರುವ ಭಾರತದಲ್ಲಿ ಇವೆರಡರ ಪರಿಪೂರ್ಣ ಬಳಕೆಯ ಮೂಲಕ ಅಧಿಕ ಉದ್ಯೋಗ ಸೃಷ್ಟಿಸುವುದು, ದೇಶಿ ಬಂಡವಾಳ ಪಲಾಯನ ನಿಲ್ಲಿಸುವುದು, ಬಾಲ್ಯಾವಸ್ಥೆಯಲ್ಲಿರುವ ದೇಶಿ ಉದ್ಯಮಗಳು ವಿದೇಶಿ ಕಂಪನಿಗಳಿಗೆ ಪ್ರತಿಸ್ಪರ್ಧೆ ನೀಡಲು ಸಮರ್ಥವಾಗುವಂತೆ ರಕ್ಷಣೆ ನೀಡುವುದು, ದೇಶವನ್ನು ಸ್ವಾವಲಂಬಿ ಮತ್ತು ಆತ್ಮನಿರ್ಭರವನ್ನಾಗಿ ಮಾಡುವುದು ಜಾರ್ಜ್ ಅವರ ಪ್ರಾಥಮಿಕತೆಯಾಗಿತ್ತು. ಇದಕ್ಕಾಗಿ ಕೋಕೋಕೋಲಾ ಮತ್ತು ಐಬಿಎಂ ಅನ್ನು ಅವರು ಹೊರಗಟ್ಟಿದರು. ಇದರ ಪರಿಣಾಮವಾಗಿ ಸಾವಿರಾರು ಸಂಖ್ಯೆಯಲ್ಲಿ ದೇಶದಾದ್ಯಂತ ಸ್ಥಳೀಯ ತಂಪುಪಾನೀಯಗಳ ಉತ್ಪಾದಕರು ಸೃಷ್ಟಿಯಾಗಿದ್ದಾರೆ. ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾದವು ಮತ್ತು ಭಾರತದಲ್ಲಿ ಮಾಹಿತಿ ತಂತ್ರಜ್ಞಾನದ ಸಿಲಿಕಾನ್ ವ್ಯಾಲಿ ಸೃಷ್ಟಿಯಾಯಿತು. ಐಬಿಎಂ ಹೊರಗಟ್ಟಿದ್ದರಿಂದ ಅಲ್ಲಿಯ ಕೆಲವು ಯುವ ಇಂಜಿನಿಯರುಗಳು ತಮ್ಮದೇ ಕಂಪನಿಗಳನ್ನು ಪ್ರಾರಂಭಿಸಿದರು. ಜೊತೆಗೆ ಟಿಸಿಎಸ್, ಎಚ್.ಸಿ.ಎಲ್ ಮತ್ತು ಪಟನಿ ಕಂಪ್ಯೂಟರ್ಸ್‌ನಂತಹ ಸ್ಥಳೀಯ ಕಂಪನಿಗಳಿಗೆ ಲಾಭವಾಯಿತು. ಇಂದು ಭಾರತದಲ್ಲಿ ಐಟಿ ಕ್ಷೇತ್ರದಲ್ಲಿ ದೇಶೀಯ ಕಂಪನಿಗಳು ೪೦ ಲಕ್ಷ ಪ್ರತ್ಯಕ್ಷ ಮತ್ತು ಒಂದು ಕೋಟಿ ಪರೋಕ್ಷ ಉದ್ಯೋಗಗಳನ್ನು ಸೃಷ್ಟಿ ಮಾಡಿವೆ.

ಜಾರ್ಜ್ ಫರ್ನಾಂಡೀಸರ ಇನ್ನೊಂದು ಗಮನಾರ್ಹ ಸಾಧನೆಯೆಂದರೆ ಸರ್ವೆಯಾದ ನಂತರ ನೂರು ವರ್ಷಗಳ ಕಾಲ ನೆನೆಗುದಿಗೆ ಬಿದ್ದಿದ್ದ ನಾಲ್ಕು ರಾಜ್ಯಗಳನ್ನು ಸಂಪರ್ಕಿಸುವ ಕೊಂಕಣ ರೈಲು ಯೋಜನೆಯ ಮಾರ್ಗವನ್ನು ೧೯೯೦ರಲ್ಲಿ ರೈಲು ಮಂತ್ರಿಯಾಗಿ ಕಾರ್ಯಗತಗೊಳಿಸಿದ್ದು. ರಕ್ಷಣಾ ಸಚಿವರಾಗಿ (೧೯೯೮-೨೦೦೪) ತಮ್ಮ ೬ ವರ್ಷದ ಅವಧಿಯಲ್ಲಿ ಜಾರ್ಜ್ ದೇಶದ ಎಲ್ಲ ಗಡಿ ಪ್ರದೇಶಗಳಿಗೆ ಭೇಟಿ ನೀಡುವ ಕಾರ್ಯಕ್ರಮದ ಭಾಗವಾಗಿ ೩೮ ಬಾರಿ -೫೫ ಡಿಗ್ರಿ ಇರುವ ಸಿಯಾಚಿನ್‌ಗೆ ಹೋಗಿದ್ದಲ್ಲದೆ ೧೯೯೯ರ ಕಾರ್ಗಿಲ್ ಯುದ್ಧದ ವೇಳೆ ಜೀವದ ಹಂಗು ತೊರೆದು ಯುದ್ಧಭೂಮಿಗೆ ಹೋಗಿ ಯೋಧರನ್ನು ಹುರಿದುಂಬಿಸಿ ಅವರ ಕಣ್ಮಣಿಯಾದರು. ಆಗ 'ಇಂಡಿಯಾ ಟುಡೇ' ನಡೆಸಿದ ಸಮೀಕ್ಷೆ ಪ್ರಕಾರ ಅವರು ಭಾರತ ಕಂಡ ಅತ್ಯುತ್ತಮ ರಕ್ಷಣಾ ಮಂತ್ರಿ.

ಉದಾರೀಕರಣದ ಕಾರಣ ಕಳೆದ ೩೦ ವರ್ಷಗಳಲ್ಲಿ ಅಸಮಾನತೆ ಅತಿಯಾಗಿ ಹೆಚ್ಚಾಗಿರುವುದು, ಮೂರು ದಶಕಗಳಿಂದ ಪ್ರತಿನಿತ್ಯ ೨೦೦೦ ಜನ ರೈತರು ಕೃಷಿ ತ್ಯಜಿಸುತ್ತಿರುವುದನ್ನೂ, ೨೦ ವರ್ಷಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಮೂರು ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿರುವವರಲ್ಲಿ ಅತಿ ಹೆಚ್ಚು ಮಂದಿ ಕುಲಾಂತರಿ ಬಿಟಿ ಹತ್ತಿ ಬೆಳೆದ ಕಾರಣ ಸಾಲಗಾರರಾಗಿರುವುದು ಎಂಬುದನ್ನು ಈ ಕ್ಷೇತ್ರದಲ್ಲಿ ಕೆಲಸ ಮಾಡಿರುವ ಹಿರಿಯ ಪತ್ರಕರ್ತ ಪಿ. ಸಾಯಿನಾಥ್ ಅವರ ಅಂಕಿಅಂಶಗಳು ಹೇಳುತ್ತವೆ. ಈ ಅಂಕಿ ಅಂಶಗಳು ಜಾರ್ಜ್ ಅವರ ವಿಚಾರವನ್ನೂ, ಹೋರಾಟವನ್ನೂ, ಭವಿಷ್ಯವಾಣಿಯನ್ನೂ ಪುಷ್ಟೀಕರಿಸುತ್ತವೆ.



**(ಮೂಲತಃ ಕುಂದಾಪುರದವರಾದ ಲೇಖಕರು ಸಮತಾ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಜಾರ್ಜ್ ಫರ್ನಾಂಡೀಸ್‌ರ ಆಪ್ತ ಒಡನಾಡಿಯಾಗಿದ್ದು ಸದ್ಯಕ್ಕೆ ಸಂಯುಕ್ತ ಜನತಾ ದಳದ ಮುಖ್ಯ ಚುನಾವಣಾಧಿಕಾರಿಯಾಗಿದ್ದಾರೆ)**

# ಸಂಗತಿ

(ದಲಿತ ಕ್ರಿಶ್ಚಿಯನ್ ಮಹಿಳೆಯೊಬ್ಬಳ 'ಕರುಕ್ಕು' ಎಂಬ ಆತ್ಮಕಥನಾತ್ಮಕ ಕಿರು ಕಾದಂಬರಿಯಿಂದ ಆಯ್ದ ಎರಡು ಭಾಗಗಳು)

ಮೂಲ: ಬಾಮಾ
ಕನ್ನಡಕ್ಕೆ: ಪದ್ಮಾ ಶ್ರೀರಾಮ್

"ನಿಮಗೇ ಗೊತ್ತಲ್ಲ ಸಮ್ಮುಗ ಕಿಳವಿಯೊಬ್ಬ ಬಲು ಒರಟು ಹೆಂಗಸು, ಇದು ನಡೆದದ್ದು ಅವಳ ಪ್ರಾಯದವಳಾಗಿದ್ದಾಗ ಅಂತ ನನ್ನಮ್ಮ ಹೇಳ್ತಾ ಇದ್ಲು "ಸಮ್ಮುಗ ಕಿಳವಿ, ಈ ಅಯ್ಯ ಇಷ್ಟು ಚೆನ್ನಾಗಿರೊ ಬಾವಿಯನ್ನ ತನ್ನೊಬ್ಬನಿಗೆ ಯಾಕೆ ಇಟ್ಕೊಬೇಕು ?" ಅಂತ ಅನ್ನುತ್ತಿದ್ದಳಂತೆ. ಅವಳು ಒಂದು ದಿನ ಮುಳ್ಳು ಬೇಲಿನ ಎಳೆದುಹಾಕಿ, ಬಾವಿಗೆ ಧುಮುಕಿ ಈಜಾಡಿದಳಂತೆ. ಹೀಗೆ ಅವಳು ಅನೇಕ ಸಲ ಮಾಡಿರಬೇಕು. ಅನೇಕ ಸಲ ಕಳ್ಳತನ ಮಾಡಿದವರು ಒಂದಲ್ಲ ಒಂದು ಸಲ ಸಿಕ್ಕಿಹಾಕಿಕೊಳ್ಳುತ್ತಾರೆ. ಹಾಗೇ ಆಯಿತು. ಕೊನೆಗೆ ಒಂದು ದಿನ ಅವಳು ಸ್ನಾನ ಮಾಡುತ್ತಿದ್ದಾಗ ಅಯ್ಯ ನೋಡಿಬಿಟ್ಟ."



ಚಿತ್ರ : ಗುಜ್ಜಾರ್

ಮರಿಯಮ್ಮನಿಗೆ ಆದ ಅನ್ಯಾಯವನ್ನು ನನಗೆ ಎಂದಿಗೂ ಮರೆಯಲು ಆಗಲಿಲ್ಲ. ಅದರ ಬಗ್ಗೆ ಯೋಚಿಸಿದಷ್ಟೂ ಸಿಟ್ಟು ಮರುಕಗಳಿಂದ ನನ್ನ ಮನಸ್ಸು ತುಂಬಿ ಹೋಯ್ತು. ಸೌದೆ ತರಲು ಹೋಗಿದ್ದ ಹೆಂಗಸರಿಗೆ ಮಾತಾಡಲು ಅವಕಾಶ ಕೊಟ್ಟಿದ್ದರೆ ನಿಜಸ್ಥಿತಿ ಗೊತ್ತಾಗುತ್ತಿತ್ತು. ಯಾವಾಗಲೂ ಎಲ್ಲಿಯೂ ಹೆಂಗಸರನ್ನ ಹಿಂದಕ್ಕೆ ತಳ್ಳುತ್ತಾರೆ ಏಕೆ? ಈ ಪ್ರಶ್ನೆ ನನ್ನ ಮನದಲ್ಲಿ ಮಥಿಸುತ್ತಲೇ ಇತ್ತು.

ಪಾಟಿ ಅವತ್ತಿನ ದಿನ ಪಂಚಾಯ್ತಿ ಎದುರಿಗೆ ಮಾತಾಡಬಹುದಿತ್ತು. ಅವಳು ನಮ್ಮ ಜನರೆಲ್ಲರಿಗೂ ಹೆರಿಗೆ ಮಾಡಿಸಿದ್ದಳು. ಅವಳು ಸೇರೆಗಾತಿ ಬೇರೆ. ಹೀಗಾಗಿ ಅವಳೊಬ್ಬ ಮುಖ್ಯವಾದ ಹೆಂಗಸಾಗಿದ್ದಳು. ಚಿಕ್ಕಮಕ್ಕಳು, ಹುಡುಗಿಯರು ದೊಡ್ಡವರೆದುರಿಗೆ ಮಾತಾಡುವ ಹಾಗಿರಲಿಲ್ಲ. ಹೀಗೆ ಯೋಚಿಸಿಕೊಂಡು ನಾನು ಪಾಟಿಯನ್ನು ಮಾತಾಡಿಸಿದೆ. "ಪಾಟಿ, ಈ ಹಳ್ಳಿಯಲ್ಲಿ ನೀನು ವಯಸ್ಸಿನಲ್ಲಿ ದೊಡ್ಡವಳು. ಅವತ್ತು ನೀನು ಹೋಗಿ ಪಂಚಾಯ್ತಿಯವರಿಗೆ ನಿಜ ಏನೆಂದು ಹೇಳಬಹುದಿತ್ತಲ್ಲಾ ?"

ಕುಟಾಣಿಯಲ್ಲಿ ಅಡಿಕೆ ಕುಟ್ಟುತ್ತ ಪಾಟಿ ನನಗೆ ಉತ್ತರಿಸಿದಳು. "ನೀನು ಇದೆಲ್ಲಾ ಆಟ ಅನ್ಕಂಡಿದೀಯಾ, ವಯಸ್ಸಾದವಳೊ, ಚಿಕ್ಕವಳೊ ಎಲ್ಲಾ ಮೂರ್ಖತನ. ನೀನು ಹೆಣ್ಣಾಗಿ ಹುಟ್ಟಿ ಗಂಡಸರನ್ನ ಎದುರಿಸಬಲ್ಲೆಯಾ ? ನಾವು ಚಿಕ್ಕವರಾಗಿದ್ದಾಗ ಹೀಗೆ ಪಂಚಾಯ್ತಿ ನಡೆದಾಗ ನಾವು ಹೆಂಗಸರು ತೆಪ್ಪಗೆ ಮನೆ ಒಳಗೆ ಗಂಜಿ ಕುಡಿದುಕೊಂಡಿರಬೇಕಿತ್ತು. ಈಗ ಏನು ನಡಿತಾ ಇದೆ ನೋಡು. ಈಗ ಸಣ್ಣಮಕ್ಕಳು ಹುಡುಗಿಯರು ಸಹ ತಮಾಷೆ ನೋಡೊಕ್ಕೆ ಬರೊಹಾಗೆ ಪಂಚಾಯ್ತಿಗೆ ಬರ್ತಾರೆ. ನ್ಯಾಯ ನಮಗೇನು ಗೊತ್ತು. ನಮ್ಮ ಪೂರ್ವಿಕರ ಕಾಲದಿಂದ ಗಂಡಸರು ಏನು ಹೇಳ್ತಾರೆ ಅದು ಸರಿ ಅನ್ನೋದು ಗೊತ್ತು. ನಾಲ್ಕು ಅಕ್ಷರ ಕಲ್ತಿದೀನಿ ಅಂತ ಪ್ರಪಂಚ ಬದಲಾವಣೆ ಆಗುತ್ತೆ ಅಂತ ಕನಸು ಕಾಣ್ಬೇಡ"

ನಾನು ಉದ್ರಿಕ್ತಳಾಗಿ ಕೇಳಿದೆ, "ಪಾಟಿ, ಹಾಗಾದರೆ ಗಂಡಸರು ಹೇಳುವುದೆಲ್ಲಾ ಯಾವಾಗಲೂ ಸರಿ. ಹೆಂಗಸರು ಮಾತಾಡೋದು ಯಾವಾಗಲೂ ತಪ್ಪಾಗಿರುತ್ತ?"

ಸರಿಯೊ ತಪ್ಪೊ ಹೆಂಗಸರು ಬಾಯಿ ಮುಚ್ಕಂಡಿರೋದು ಒಳ್ಳೆಯದು. ನೀನು ಯಾವುದನ್ನ ಸರಿ ಅಂತ ತಿಳ್ಕಂಡಿದೀಯಾ ಅದನ್ನ ಮಾತಾಡಿನೋಡು, ನಿನಗೆ ಒದ್ದು ಹೊಡ್ದು ಅವಮಾನ ಮಾಡ್ತಾರೆ. ಇಲ್ಲಿ ಅಷ್ಟೆ ಅಲ್ಲ, ಪ್ರಪಂಚದ ಉದ್ದಕ್ಕೂ ಅದೇ ನಡೀತಾ ಇರೋದು. ನೀನು ತಿಳಿದ ರೀತಿ ಗೌರವನ ಹೆಂಗಸರಿಗೆ ಕೊಡೊದಿಲ್ಲ.

'ನೋಡು ತಾನೇನೊ ಪ್ರಪಂಚ ಸುತ್ತಿ ಬಂದಿರುವವಳಂತೆ ಪಾಟಿ ಮಾತಾಡ್ತಳಲ್ಲ' ಎಂದು ಮನದಲ್ಲೇ ಅಂದುಕೊಂಡೆ. ಆದರೆ ಪಾಟಿಗೆ ಹೇಳಲಿಲ್ಲ. "ನೀವುಗಳೇ ಹೆಂಗಸ್ರು ನಮ್ ಕೈ ಬಿಡೋದು. ಮಗುವಾಗಿದ್ದಾಗಿನಿಂದ ಗಂಡು ಮಕ್ಕಳನ್ನ ಒಂತರ, ಹೆಣ್ಮಕ್ಕಳನ್ನ ಇನ್ನೊಂದು ತರ ನೋಡ್ತೀರಾ. ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ"

ಪಾಟಿ ಎಲಡಿಕೆ ರಸವನ್ನು ಚಿರಕಿ ಹೊಡೆಯುವಂತೆ ಉಗಿದು ನನ್ನ ಕಡೆ ತಿರುಗಿದಳು. 'ಓಯ್ ಇವಳು ಕೇಳೊದನ್ನ ನೋಡು. ಯಾರು ನಿನ್ನ ಹಸಿವಿನಿಂದ ಸಾಯಿಸಿದವರು? ಕುಡಿಯಕ್ಕೆ ಗಂಜಿ ಕೊಡಲಿಲ್ಲವಾ? ಯಾಕೆ ಹಿಂಗೆ ಮಾತಾಡ್ತೀಯಾ?'

'ನಾನು ಗಂಜಿ ಬಗ್ಗೆ ಮಾತಾಡ್ತ ಇಲ್ಲ. ನಾವು ಹುಡುಗರಂಗೆ ಯಾಕಿರಬಾರದು? ನಾವು ಗಟ್ಟಿಯಾಗಿ ಮಾತಾಡುವ ಹಾಗಿಲ್ಲ. ಜೋರಾಗಿ ನಗುವ ಹಾಗಿಲ್ಲ. ಮಲಗುವಾಗಲೂ ಬೆನ್ನು ಕೆಳಗೆ ಹಾಕಿ ಅಂಗಾತ ಮಲಗಬೇಡಿ. ಹೊಟ್ಟೆ ಕೆಳಗಾಕಿ ಮಕ್ಕಾಡೆ ಮಲಗಬೇಡಿ ಅನ್ತೀರಾ. ನಡೆಯುವಾಗಲೂ ತಲೆ ತಗ್ಗಿಸಿ ನಡೆಯಬೇಕು. ಈ ಹೊಲಸನ್ನೆಲ್ಲಾ ಹೇಳಿ ನಮ್ಮನ್ನ ನಿಮ್ಮ ಹಿಡಿತದಲ್ಲಿಟ್ಟುಕೊತೀರಾ. ಹಸಿವಿನಿಂದ ನಮ್ಮ ಹೊಟ್ಟೆ ತಮಟೆ ಬಾರಿಸ್ತ ಇದ್ರೂ ನಾವು ಮೊದಲು ಉಣ್ಣೊ ಹಾಗಿಲ್ಲ. ಗಂಡಸರೆಲ್ಲಾ ಊಟ ಮಾಡಿ ಹೋದ ಮೇಲೆ ನಾವು ಉಣ್ಣಬೇಕು. ಯಾಕೆ ಪಾಟಿ ನಾವೂ ಮನುಷ್ಯರೆ ಅಲ್ವಾ ?'

ಪಾಟಿ ಕೇಳಿದಳು "ನಿನ್ನೆ ಮೊನ್ನೆಯಿಂದ ಹೀಗೆ ನಡೀತಾ ಇದೆ ಅನ್ಕೊಂಡಾ? ಇದನ್ನೆಲ್ಲಾ ಪುಸ್ತಕದಲ್ಲಿ ಬರೆದಿಲ್ವಾ? ನೀನು ಓದಿಲ್ವಾ?"

"ಪುಸ್ತಕದಲ್ಲಿ ಏನಿದೆ? ನೀನೆ ಎಲ್ಲಾ ಓದಿರೊ ಹಾಗೆ ಮಾತಾಡ್ತೀಯಲ್ಲಾ?"

"ನಿನಗೆ ಚೆನ್ನಾಗಿ ಗೊತ್ತು ನನ್ನ ಯಾರೂ ಓದಿಸಲಿಲ್ಲ. ಇಲ್ಲಿಗೆ ಬಂದ ಬಿಳಿ ತಾಯಾರುಗಳು (ನನ್‌ಗಳು) ನಿಮ್ಮ ಅಮ್ಮನಿಗೆ ಓದು ಬರಹ ಕಲಿಸಲು ಪ್ರಯತ್ನಿಸಿದರು. ಅವರು ನಮ್ಮ ಮಕ್ಕಳಿಗೆ ವಿದ್ಯೆ ಕಲಿಸಲು ಏನೆಲ್ಲಾ ಪ್ರಯತ್ನಪಟ್ಟರು; ಪುಗಸಟ್ಟೆ ಪುಸ್ತಕ ಕೊಟ್ಟರು. ಮದ್ಯಾಹ್ನ ಊಟ, ಗಂಜಿ ಕೊಟ್ಟರು. ಪೆದ್ದ ಮುಂಡೇದು ನಿಮ್ಮ ಅಮ್ಮ ಐದನೆ ಕ್ಲಾಸಿನಿಂದ ಮುಂದಕ್ಕೆ ಹೋಗಲಿಲ್ಲ"

'ಸರಿ ಪುಸ್ತಕಗಳಲ್ಲಿ ಏನೊ ಹೇಳಿದಾರೆ ಅಂದ್ಯಲ್ಲಾ ಪಾಟಿ' ಎಂದು ಜ್ಞಾಪಿಸಿದೆ.

"ಹೌದು ಅದು ತಿರುವಳ್ಳುವರ್ ಅನ್ನೊವರ ಹೆಂಡತಿ ವಿಷಯ. ಅವಳು ತಿರುವಳ್ಳುವರ್ ಊಟ ಮಾಡುವಾಗ ಅವರ ಪಕ್ಕದಲ್ಲಿ ಕುಳಿತು, ಎಲೆಯಾಚೆ ಚೆಲ್ಲುತ್ತಿದ್ದ ಅನ್ನದ ಅಗಳನ್ನು ಸೂಜಿಯಿಂದ ಚುಚ್ಚಿ ಎತ್ತಿಕೊಂಡು ನೀರಿನಲ್ಲಿ ತೊಳೆಯುತ್ತಿದ್ದಳಂತೆ. ಅವಳು ಬಲು ಪಿಸನಾರಿ ಹೆಂಗಸಿರಬೇಕು. ಅವಳ್ಯಾಕೆ ತನ್ನ ಬೆರಳುಗಳಿಂದ ಎತ್ಕೊಬಾರದಿತ್ತ? ಹೇಗಾದರೂ ಇರಲಿ, ಆ ಕಾಲದಲ್ಲೂ ಹೆಂಗಸರು ಗಂಡಸರ ನಂತರ ಊಟ ಮಾಡ್ಬೇಕಿತ್ತು"

ಈ ಪದ್ಧತಿನ ನಾವು ಬದಲಾಯಿಸಿದರೇನು ತಪ್ಪು? ಹೆಂಗಸರು ಮೊದಲು ಊಟ ಮಾಡಿದರೇನು? "ಏನು ಅಂತೀಯಾ? ಹಂಗೆ ಮಾಡಿದ್ರೆ ನಿನ್ನ ಗತಿ ಆ ತೆಂಕಣ ಬೀದಿ ಆನಂದಮ್ಮನ ಗತಿ ಆದಂಗೆ ಆಗುತ್ತೆ"

ಅವಳನ್ನ ಹೊಡೆದು ಚಚ್ಚಿ ಮಲಗಿಸಿದ್ರಲ್ಲಾ ಹಾಗೆ, ಬೀದೀಲಿ ಮಕ್ಕಳು ಹಾಡ್ಕೊಂಡು ಹೋಗೋದು ಕೇಳಿಲ್ವಾ?

**ಏಡಿ, ಓ ಏಡಿ, ನನ್ನ ಪುಟ್ಟ ಮುದ್ದು ಏಡಿಕಾಯಿ/ ನಾನು ನಾಟಿ ಮಾಡಿದ ಗದ್ದೆಗಳಲ್ಲಿ ಅಲೆಯುವ ಏಡಿಯೆ /ನಿನ್ನ ಕೊಂಡಿಗಳ ಕಿತ್ತು ನಾನು ಮಡಿಕೆಯಲ್ಲಿ ಹಾಕಿದೆ/ಒಮ್ಮೆ ಮಡಿಕೆಯ ಕಾಯಿಸಿ, ಕೆಳಗಿಳಿಸಿದೆ ನಾನು ಕಾದೆ, ಕಾದೆ ಅವನು ಮನೆಗೆ ಬರುವುದನು / ಅವನು ಬಾಗಿಲಿಗೆ ಬರುವಾಗ ತಿನ್ನಲು ಮೊದಲಿಟ್ಟೆ / ಹಸಿದ ಪಶು ಅವನು ನನಗೆ ಹೊಡೆದ / ಕೊಂದೇ ಬಿಡಲು ನನ್ನ ಮೇಲೆರಗಿದ / ನನಗೆ ಹೊಡೆದ, ನನ್ನ ಮಗುವಿಗೂ ಒದ್ದ / ನನ್ನ ಹೊಟ್ಟೆಯೊಳಗಿನ ಮಗುವ ಚಚ್ಚಿದ /ನನ್ನ ಕಾಲು ತಿರುಚಿ ಹೋಗುವಂತೆ ಹೊಡೆದ / ನನ್ನ ಕೈಬಳೆ ನುಚ್ಚುನೂರಾಗುವಂತೆ ಬಡಿದ**

"ಈ ಹಾಡು ಒಬ್ಬ ಗಂಡ ತನ್ನ ಹೆಂಡತಿ ತನಗಿಂತ ಮೊದಲು ಊಟ ಮಾಡಿದ್ದಕ್ಕೆ ಅವಳು ಗರ್ಭಿಣಿಯಾಗಿರುವುದನ್ನೂ ಲೆಕ್ಕಿಸದೆ ಹೊಡೆದದ್ದನ್ನು ಹೇಳುತ್ತದೆ. ಅವಳು ಮಾಡಿದ್ದು ಕೇವಲ ಗದ್ದೆಯಲ್ಲಿ ಸಿಕ್ಕ ಏಡಿಯ ಸಾರನ್ನು ಗಂಡನಿಗಿಂತ ಮೊದಲು ತಿಂದದ್ದು. ಇಲ್ಲಿ ನೀನು ಇದ್ಯಾವುದನ್ನೂ ಯೋಚಿಸದೆ ಬಡಬಡಿಸುತ್ತೀಯೆ" ಎಂದು ಹೇಳಿ ಪಾಟಿ ಎದ್ದು ಹೊರಟುಬಿಟ್ಟಳು.

ಪಾಟಿ ಹೇಳಿದ್ದೂ ನಿಜ. ಮಾಮೂಲಿ ವರ್ತನೆಗಿಂತ ಬೇರೆ ತರ ಹೆಂಗಸರು ವರ್ತಿಸಿದರೆ ಎಲ್ಲರೂ ಅವರನ್ನು ಬೈಯ್ಯುತ್ತಾರೆ.

ನಾವು ಮಕ್ಕಳು 'ಅಪ್ಪ ಅಮ್ಮ'ನ ಆಟ ಆಡುವಾಗ 'ಮಣ್ಣನ್ನೇ ಅನ್ನ' ಎಂದು ಭಾವಿಸಿ, ಆಟದಲ್ಲೂ ಸಹ ಹುಡುಗರಿಗೆ ಮೊದಲು ಊಟ ಬಡಿಸಿದಂತೆ ಬಡಿಸಬೇಕಾಗಿತ್ತು. ಆಟದಲ್ಲೂ ಸಹ ಹುಡುಗರು ಹುಡುಗಿಯರ ಜುಟ್ಟು ಹಿಡಿದು ಏನಡೀ ಅನ್ನಕ್ಕೆ ಉಪ್ಪೇ ಹಾಕಿಲ್ಲ ಎಂದು ಬೈದು ಭಂಗಿಸುತ್ತಿದ್ದರು. ಹುಡುಗೀರು ಸಹ ಆಟದ ಹೊಡೆತಗಳನ್ನು ತಮಾಷೆ ಎಂದು ಹೊಡೆಸಿಕೊಳ್ಳುತ್ತಿದ್ದರು. ಈಗಿನ ದಿನಗಳಲ್ಲಿ ಬಹಳಷ್ಟು ಹುಡುಗಿಯರಿಗೆ ಆಟದ ಹೊಡೆತಗಳೆ ನಿಜವಾಗಿ, ಅವರ ಬಾಳ್ವೆ ನರಕವಾಗುತ್ತಿದೆ.

ನಾವು ಹುಟ್ಟಿದ ಕ್ಷಣದಿಂದ ಇದು ಹೀಗೆಯೇ. ಒಂದು ದಿನ ನಾವು ಕೆಲವರು ಚೌಕಾಬಾರ ಆಡುತ್ತ ಕುಳಿತಿದ್ದೆವು. ಆಟದ ಮಧ್ಯೆ ಪಕ್ಕದ ಬೀದಿಯ ಮೂಕ್ಕಮ್ಮ ಬಂದವಳೇ “ಏ, ಲೂರ್ದು ಅತ್ತೆ, ನಿನಗೇನು ಬುದ್ಧಿಗಿದ್ದಿ ಇಲ್ವಾ? ಅಲ್ಲಿ ನಿನ್ನ ಮಗ ತೊಟ್ಟಿಲಲ್ಲಿ ಉಚ್ಚೆ ಹುಯ್ಕಂಡು ಕಾಗೆ ಹಂಗೆ ಕಿರಿಚ್ತಾ ಇದಾನೆ. ಇಲ್ಲಿ ನೀನು ಚೌಕಾಬಾರ ಆಡ್ತಾ ಇದೀಯಾ. ಅದೊಂದು ಹೆಣ್ಮಗು ಆಗಿದ್ರೆ, ಕಿರಚಲಿ ಬಿಡು ಅಂತ ಬಿಡಬಹುದಿತ್ತು ಗಂಡು ಮಗೂನ ನೀನು ಹಾಗೆ ಬೊಬ್ಬೆ ಹೊಡೆಯೊಕ್ಕೆ ಬಿಟ್ಟು ಅದ್ಹೇಗೆ ಬಂದೆ?” ಮೂಕ್ಕಮ್ಮ ಹೇಳುತ್ತಿದ್ದ ಹಾಗೆಯೆ ಲೂರ್ದು ಆಟ ಬಿಟ್ಟು ಮನೆಕಡೆ ಓಡಿದಳು. ತಕ್ಷಣ ನಾನು ಕೇಳಿದೆ. “ಹಾಗಾದರೆ, ನೀವು ಗಂಡು ಮಗೂನ ಅಳೋದಿಕ್ಕೆ ಬಿಡೋದಿಲ್ಲ? ಹೆಣ್ಣು ಮಗು ಆದ್ರೆ ಅತ್ತರೂ ಪರವಾಗಿಲ್ಲ ಅಂತ ಸುಮ್ನಿರ್ತೀರಾ ಅಲ್ವಾ?”

* * *

ಪ್ರತಿ ಶನಿವಾರ ಸಂಜೆ ನಾವು ಜಮೀನುದಾರರ ಜಮೀನುಗಳಲ್ಲಿರೊ ಬಾವಿಗೆ, ಸ್ನಾನ ಮಾಡಿ ಕೊಳೆಬಟ್ಟೆ ಒಗೆದು ಒಣಗಿಸಿಕೊಂಡು ಬರಲು ಹೋಗುತ್ತೇವೆ. ಮಾರನೆ ದಿನ ಭಾನುವಾರ ಚರ್ಚ್‌ನಲ್ಲಿ ಪೂಜೆಗೆ ಶುಭ್ರವಾಗಿ ಹೋಗಲು ಇದು ಹಿಂದಿನ ದಿನದ ತಯಾರಿ. ವಾರದಲ್ಲಿ ಒಂದೇ ದಿನ ಶನಿವಾರ ನಾವು ಸ್ನಾನ ಮಾಡುವುದು. ನಮಗೆ ಸ್ನಾನವೆನ್ನುವುದು ಸಹ ಒಂದು ಭೋಗ. ಬಹಳಷ್ಟು ದಿನಗಳು ನಮ್ಮ ಹೆಂಗಸರು ಬಿಸಿಲಲ್ಲಿ ಹೊಲದ ಕೆಲಸ ಮಾಡಿ, ಸಂಜೆ ಮನೆಗೆ ಬಂದ ಮೇಲೂ ಕೆಲಸ ಮಾಡ್ತಾರೆ. ಅವರಿಗೆ ಬಾವಿಗೆ ಹೋಗಿ ಸ್ನಾನ ಮಾಡಲು ಪುರುಸೊತ್ತೆ ಇರುವುದಿಲ್ಲ.

ನಾವು ಸ್ನಾನ ಮಾಡುವುದಕ್ಕೆ ಹೋದಾಗ, ಮಿಷಿನ್ ಮನೆಯ ಮೇಲಿಂದ ಧುಮುಕಿ ಈಜುತ್ತೇವೆ. ಚಿಕ್ಕ ಮಕ್ಕಳಿದ್ದಾಗ ಹುಡುಗರು, ಹುಡುಗಿಯರು ಯಾವ ಭೇದವಿಲ್ಲದೆ ಒಟ್ಟಿಗೆ ಈಜುತ್ತಿದ್ದೆವು. ಈಜುತ್ತ ಒಬ್ಬರನ್ನೊಬ್ಬರು ಹಿಡಿಯುವ ಆಟ ಆಡುತ್ತಿದ್ದೆವು. ನಾವು ವಯಸ್ಸಿಗೆ ಬಂದ ಮೇಲೆ ಹೆಣ್ಮಕ್ಕಳು ಪ್ರತ್ಯೇಕವಾಗಿ ಸ್ನಾನ ಮಾಡುತ್ತಿದ್ದೆವು.

ಪರಯಾ, ಚಮ್ಮಾರ ಮತ್ತು ಪಳ್ಳ ಜಾತಿಯ ಹೆಂಗಸರು ಮಾತ್ರ ಹೊರಗೆ ಬಾವಿಗಳಲ್ಲಿ ಸ್ನಾನ ಮಾಡುತ್ತಾರೆ. ನಮಗೆ ಪರಸ್ಪರ ನಾಚಿಕೆ ಎನಿಸುತ್ತಿರಲಿಲ್ಲ. ಸಹಜವಾಗಿ ನಮ್ಮ ಬಟ್ಟೆಗಳನ್ನು ಬಿಚ್ಚಿ ನೀರಿಗಿಳಿಯುತ್ತಿದ್ದೆವು. ಅವತ್ತು ಮಾತ್ರ ನಮ್ಮ ಮುಖದ ತುಂಬಾ ಅರಿಶಿನ ಹಚ್ಚಿ ಸ್ನಾನ ಮಾಡುತ್ತೇವೆ.

ಒಮ್ಮೆ ರಾಜನಾಯ್ಕರ್ ಬಾವಿಯಲ್ಲಿ ನಾವು ಹತ್ತು ಹನ್ನೆರಡು ಹೆಣ್ಮಕ್ಕಳು, ಕೆಲವು ಮಕ್ಕಳೂ ಸೇರಿ ಸ್ನಾನ ಮಾಡುತ್ತಿದ್ದೆವು. ಆಗ ನಾನು ಉಳಿದವರನ್ನು ಬೇರೆ ಜಾತಿಯ ಹೆಂಗಸರು ಇಲ್ಲಿಗೆ ಬಂದು ಬಾವಿಯಲ್ಲಿ ಈಜುವುದಿಲ್ಲವಲ್ಲ ಯಾಕೆ ? ಎಂದು ಕೇಳಿದೆ.

ಬಾವಿಯಲ್ಲಿ ಆಗಲೇ ಈಜುತ್ತಿದ್ದ ಒತಾಡಿಪಿಳ್ಳೆ ಹೇಳಿದಳು. ಅವರಿಗೆ ಈಜಲು ಬರುವುದಿಲ್ಲ. ಅದೂ ಅಲ್ಲದೆ ಅವರುಗಳು ಒಬ್ಬರ ಎದುರಿಗೆ ಒಬ್ಬರು ಬೆತ್ತಲೆಯಾಗಿ ಸ್ನಾನ ಮಾಡುವುದಿಲ್ಲ. ಅವರು ತಮ್ಮ ಮೈ ನಮ್ಮದಕ್ಕಿಂತ ಬೇರೆ ಏನೊ ಅನ್ನೊ ಹಾಗೆ ಮುಚ್ಚಿಕೊಂಡಿರ್ತಾರೆ.

ಕಣ್ಣಿಯಮ್ಮ ಒತಾಡಿಪಿಳ್ಳೆಯನ್ನು “ನೀನೊಬ್ಬಳು ಮುದಿ ಮುಂಡೆ ನೀನು ಯಾವಾಗಲೂ ಹೆಂಗಸರು ಗಂಡಸರನ್ನ ಸಮವಾಗಿ ನೋಡ್ಬೇಕು ಅಂತೀಯಾ? ಆ ಹೆಂಗಸರು ನಾವು ಕೀಳು ಜಾತಿಯವರು ಉಪಯೋಗಿಸೊ ಬಾವೀಲಿ ಹೆಂಗೆ ಸ್ನಾನ ಮಾಡ್ತಾರೆ?” ಎಂದು ಬೈದಳು.

ಒತಾಡಿಪಿಳ್ಳೆ ಪ್ರತಿಭಟಿಸಿದಳು ಏಯ್, ಈ ಬಾವೀಲಿ ಸ್ನಾನ ಮಾಡೊ ನಾವು ಹೇಲು ತಿನ್ನೊ ಹಂದಿಗಳಾ? ಅವರು ಬೇರೆ ಬಾವಿಯಲ್ಲಾದರೂ ಸ್ನಾನ ಮಾಡೊದನ್ನ ಯಾರು ತಡೆದಿದ್ದಾರೆ?

ಅವರೆಲ್ಲ ಪವಿತ್ರವಾದ ಬೆಕ್ಕುಗಳು! ಡೀ ಅವರಿಗೆ ಈಜೊದಿಕ್ಕೆ ಬರೊದಿಲ್ಲ ಅನ್ನೋದೇ ನಿಜ. ಅವರು ಮನೇಲಿ ಎರಡು ಬಕೀಟು ನೀರನ್ನ ಮೈಮೇಲೆ ಹಾಕ್ಕೊತಾರೆ. ನಮ್ಮ ಹಾಗೆ ನೆಗೆದು ನೀರಿನಾಳಕ್ಕೆ ಹೋಗೋದು ಎಷ್ಟು ಚಂದ! ಅನ್ನುತ್ತ ಪೂರ್ಣಂ ದೊಡ್ಡ ಸದ್ದಿನೊಂದಿಗೆ ನೀರಿಗೆ ನೆಗೆದಳು.

ಆಗ ಬಾವಿಯ ಅಂಚಿನಲ್ಲಿ ಹುಲ್ಲು ಕುಯ್ಯುತ್ತಿದ್ದ ಕೊವಾಲು ಪಾಟಿ ಇನ್ನೊಂದು ಅಂಶದ ಬಗ್ಗೆ ನಮ್ಮ ಗಮನ ಸೆಳೆದಳು. ನಮ್ಮನೆಗಳಲ್ಲಿ ಸ್ನಾನ ಮಾಡೊದಿಕ್ಕೆ ಜಾಗ ಇರೊದಿಲ್ಲ. ಚಿಕ್ಕ ಗುಡಿಸಲುಗಳಲ್ಲಿ ಅಲ್ಲೇ ಊಟ, ನಿದ್ದೆ ಮಾಡ್ಕಂಡು ಇರೊ ನಮಗೆ ಗುಡಿಸಿಲಿನಲ್ಲಿ ಸ್ನಾನಕ್ಕೆ ಜಾಗ ಎಲ್ಲಿ? ಅದಕ್ಕೆ ನಾವುಗಳು ಯಾವಾಗಲೂ ಬಾವಿಗಳಿಗೆ ಬರ್ತೀವಿ. ಮೇಲ್ಜಾತಿಯವರ ಮನೆಗಳಲ್ಲಿ ಸ್ನಾನ, ಕಕ್ಕಸ್ಸು, ಉಚ್ಚೆ ಎಲ್ಲಾದಕ್ಕೂ ಬೇರೆ ಬೇರೆ ರೂಮು ಕಟ್ಟಿಸಿಕೊಂಡಿರ್ತಾರೆ. ಅದಕ್ಕೇ ಅವರ್ಯಾಕೆ ಇಲ್ಲಿಗೆ ಬರ್ತಾರೆ?

ಆದರೆ ಪೂರ್ಣಂ ಒಪ್ಪಲಿಲ್ಲ. “ನೀನು ಹಾಗಂತೀಯಾ ಕಿಳವಿ? ಅವರಿಗೆ ಇಲ್ಲಿಗೆ ಬಂದು ನಮ್ಮ ಹಾಗೆ ಈಜೊದಿಕ್ಕೆ ಸ್ವಾತಂತ್ರ್ಯ ಇದೆ ಅಂದ್ಕೊಂಡಿದೀಯಾ? ನಮಗೆ ಸಿಗೊ ಆನಂದ ಅವರಿಗಿಲ್ಲ. ದೇವರಿಗೇ ಗೊತ್ತು ಇಪ್ಪತ್ತನಾಲ್ಕು ಗಂಟೆ ಮನೆಯೊಳಗೆ ಗೋಡೆ ನೋಡ್ಕಂಡು ಹೇಗೆ ಕೂತಿರ್ತಾರೊ. ನನ್ನ ಕೈಲಂತೂ ಸಾಧ್ಯವಿಲ್ಲ ತಾಯಿ” ಸ್ನಾನ ಮುಗಿಸಿ, ಬಟ್ಟೆ ಹಾಕಿಕೊಂಡು ನಾವು ಒಣಗಿದ ಬಟ್ಟೆ ಮಡಚಿಟ್ಟುಕೊಂಡು ಮನೆ ಕಡೆ ತೆರಳುವಾಗ ಒತಾಡಿಪಿಳ್ಳೆ ಕೇಳಿದಳು “ನಿಮಗೆ ಸಮ್ಮುಗ ಕಿಳವಿ ಬಾವಿಗೆ ಸ್ನಾನಕ್ಕೆ ಹೋಗಿದ್ದಾಗ ತೊಂದರೆಗೆ ಸಿಕ್ಕಿ ಹಾಕಿಕೊಂಡ ಕಥೆ ಗೊತ್ತಾ ?

ಅವಳೆಲ್ಲಿ ಸ್ನಾನ ಮಾಡುತ್ತಿದ್ದಳು?

ಅವಳು ಬಲು ಜಂಭದವಳು. ನಾವು ಸ್ನಾನ ಮಾಡೊ ಬಾವಿಗಳು ಪ್ರಯೋಜನ ಇಲ್ವಂತೆ ಅದಕ್ಕೆ ರಸ್ತೆ ಪಕ್ಕ ಇದೆಯಲ್ಲಾ ಸೀನಿವಾಸ ಅಯ್ಯನ ಬಾವಿ, ಅದಕ್ಕೆ ಒಬ್ಬಳೇ ಹೋಗಿದ್ದಳು. ಆ ಅಯ್ಯ ಈ ಕೀಳು ಜಾತಿ ಕತ್ತೆಗಳು ಬಂದು ಸ್ನಾನ ಮಾಡಿ, ತಮ್ಮ ಬಾವಿ ನೀರು ಅಶುದ್ಧವಾಗದಿರಲಿ ಅಂತ ಮುಳ್ಳುಬೇಲಿ ಹಾಕಿಸಿದ್ದರು.

ಅವಳು ಒಳಕ್ಕೆ ಹೇಗೆ ಹೋದಳು?

ನಿಮಗೇ ಗೊತ್ತಲ್ಲ ಸಮ್ಮುಗ ಕಿಳವಿಯೊಬ್ಬ ಬಲು ಒರಟು ಹೆಂಗಸು, ಇದು ನಡೆದದ್ದು ಅವಳ ಪ್ರಾಯದವಳಾಗಿದ್ದಾಗ ಅಂತ ನನ್ನಮ್ಮ ಹೇಳ್ತಾ ಇದ್ಲು “ಸಮ್ಮುಗ ಕಿಳವಿ, ಈ ಅಯ್ಯ ಇಷ್ಟು ಚೆನ್ನಾಗಿರೊ ಬಾವಿಯನ್ನ ತನ್ನೊಬ್ಬನಿಗೆ ಯಾಕೆ ಇಟ್ಕೊಬೇಕು ?” ಅಂತ ಅನ್ನುತ್ತಿದ್ದಳಂತೆ. ಅವಳು ಒಂದು ದಿನ ಮುಳ್ಳು ಬೇಲಿನ ಎಳೆದುಹಾಕಿ, ಬಾವಿಗೆ ಧುಮುಕಿ ಈಜಾಡಿದಳಂತೆ. ಹೀಗೆ ಅವಳು ಅನೇಕ ಸಲ ಮಾಡಿರಬೇಕು. ಅನೇಕ ಸಲ ಕಳ್ಳತನ ಮಾಡಿದವರು ಒಂದಲ್ಲ ಒಂದು ಸಲ ಸಿಕ್ಕಿಹಾಕಿಕೊಳ್ಳುತ್ತಾರೆ. ಹಾಗೇ ಆಯಿತು. ಕೊನೆಗೆ ಒಂದು ದಿನ ಅವಳು ಸ್ನಾನ ಮಾಡುತ್ತಿದ್ದಾಗ ಅಯ್ಯ ನೋಡಿಬಿಟ್ಟ.

‘ಹಾಗಾದರೆ ಅವಳು ಸಿಕ್ಕಿಹಾಕಿಕೊಂಡಳು ಅನ್ನು?’

ಅವಳನ್ನ ಹಿಡಿದು ಅಯ್ಯ ಚೆನ್ನಾಗಿ ಬಯ್ದ. ಅವಳು ತನ್ನ ಎಂದಿನ ದಿಟ್ಟತನದಿಂದ ಜಮೀನುದಾರನಿಗೆ ಉತ್ತರಿಸಿದಳು. ‘ಅಯ್ಯಾ ನಿನ್ನ ಬಾವಿ ನೀರು ಏನೂ ಚೆನ್ನಾಗಿಲ್ಲ. ಉಪ್ಪುಪ್ಪು ನೀರು ಎಂದವಳೇ ಬಾಯಿ ತುಂಬಾ ನೀರು ತುಂಬಿಕೊಂಡು ಬಾವಿಗೆ ನೀರನ್ನು ಉಗಿದುಬಿಟ್ಟಳು. ಆಮೇಲೆ ಅವಳು ಬಟ್ಟೆ ಬದಲಿಸಿದಳು. ಅವನು ಅವಳನ್ನ ಮುಟ್ಟಿ ಹೊಡೆಯುವ ಹಾಗೂ ಇರಲಿಲ್ಲ. ಏಕೆಂದರೆ ಅವಳು ಅರೆಬೆತ್ತಲೆಯಾಗಿ ನಿಂತಿದ್ದಳು. ಅದರಿಂದ ಆ ಅಯ್ಯ ಸೀದಾ ಹಳ್ಳಿಯೊಳಕ್ಕೆ ಹೋಗಿ ನಾಟ್ಟಾಮೆಗೆ ದೂರುಕೊಟ್ಟ. ನಾಟ್ಟಾಮೆ ಅವಳನ್ನು ಕರೆದು ಸರಿಯಾಗಿ ದಂಡಿಸಿದ. ಇದು ನಿಜಕ್ಕೂ ಅವಳ ಕೋಪವನ್ನು ಕೆರಳಿಸಿತ್ತು. ಇದಾದ ಎರಡು ತಿಂಗಳುಗಳ ನಂತರ ನಮ್ಮ ಹೆಂಗಸರು ಸೀನಿವಾಸ ಅಯ್ಯನ ಹೊಲಕ್ಕೆ ಕಡ್ಲೆಕಾಯಿ ಕೀಳಲು ಹೋದರು. ಅವರೊಡನೆ ಸಮ್ಮುಗ ಕಿಳವಿಯೂ ಹೋದಳು. ಆಗ ಅವಳು ಏನ್ಮಾಡಿದ್ಲು ಗೊತ್ತಾ?”

“ಏನು ಮಾಡಿದಳು?”

ಆ ಅಯ್ಯ ಅವರಿಗೋಸ್ಕರ ಒಂದು ಮಡಿಕೆಯಲ್ಲಿ ಕುಡಿಯುವ ನೀರು ತಂದಿಟ್ಟುಕೊಂಡಿದ್ದರು. ನಮ್ಮ ಮಕ್ಕಳಲ್ಲಿ ಒಂದು ಅಕಸ್ಮಾತ್ ಅದನ್ನು ಮುಟ್ಟಿಬಿಟ್ಟಿತು. ಅದಕ್ಕೆ ಅಯ್ಯ ಕಡ್ಲೆಗಿಡದ ದಂಟು ತಗೊಂಡು ಆ ಮಗೂಗೆ ರಪರಪ ಹೊಡೆದ ಅದನ್ನ ನೋಡಿದ ಸಮ್ಮುಗ ಕಿಳವಿ, ಅಕಸ್ಮಾತ್ ಮಗೂ ಕೈ ಮಡಿಕೆಗೆ ತಾಗಿತು. ಅಷ್ಟಕ್ಕೆ ಮಗೂಗೆ ಹೊಡಿತಾನೆ ತಾಳು ಅವನಿಗೇನ್ಮಾಡ್ತೀನಿ ನೋಡು ಎಂದು ಹೇಳಿ, ಅವನು ಅಲ್ಲಿ ಇಲ್ಲದೆ ಇದ್ದಾಗ ನೀರಿನ ಮಡಿಕೆಯೊಳಕ್ಕೆ ಉಚ್ಚೆ ಹುಯ್ದುಬಿಟ್ಟಳು.

ಇದನ್ನು ಕೇಳಿ ನಾವೆಲ್ಲಾ ನಕ್ಕುಬಿಟ್ಟೆವು.

ಇಷ್ಟು ಮಾಡಿದ್ದೂ ಅಲ್ಲದೆ ಸಮ್ಮುಗ ಕಿಳವಿ ಹಳ್ಳಿಗೆ ಹೋಗಿ ಎಲ್ಲರಿಗೂ ‘ಸೀನಿವಾಸ ಅಯ್ಯನ ಬಾವೀಲಿ ಒಬ್ಬ ಪರ್ರೈಚಿ ಸ್ನಾನ ಮಾಡಿದ್ದರಿಂದ ಅವನ ಬಾವಿ ನೀರು ಅಶುದ್ಧವಾಯ್ತಂತೆ. ಈಗ ಆ ಕೆಟ್ಟ ಮನುಷ್ಯ ನನ್ನ ಉಚ್ಚೆ ಕುಡಿಯಲಿ’ ಎಂದು ಹೇಳಿಕೊಂಡು ಬೈದುಕೊಂಡು ಓಡಾಡಿದಳು.

ಮನೆಗೆ ಹೋದ ಮೇಲೆ ನಾನು ಅಮ್ಮನ್ನ “ಅಮ್ಮಾ ಸಮ್ಮುಗ ಕಿಳವಿ ಚಿಕ್ಕವಳಿದ್ದಾಗ ಜಮೀನುದಾರ್ರು ಕುಡಿಯಕ್ಕೆ ಇಟ್ಟಿದ್ದ ನೀರಿಗೆ ಉಚ್ಚೆ ಹುಯ್ದಿದ್ದು ನಿಜವಾ? ಎಂದು ಕೇಳಿದೆ.

ಹಾಗಂತ ಅವಳು ಹೇಳ್ಕೊತಾ ಇದ್ಲು. ಅದು ನಿಜವೊ ಕಟ್ಟುಕತೆಯೊ ಯಾರಿಗೆ ಗೊತ್ತು. ನಿಜಕ್ಕೂ ಅವಳು ಹಾಗೆ ಮಾಡಬಲ್ಲ ಗಟ್ಟಿಗಿತ್ತಿಯೇ ಸರಿ.

ನಾನು ನನ್ನಲ್ಲಿಯೇ ಯೋಚಿಸಿದೆ. ನಮ್ಮಲ್ಲಿ ಕೆಲವರಿಗಾದರೂ ಸಮ್ಮುಗ ಕಿಳವಿಯ ದಿಟ್ಟತನ ಇದ್ದರೆ ಒಳ್ಳೆಯದು. ಹೀಗೆ ಪ್ರತಿಭಟಿಸುವ ಧೈರ್ಯ ತೋರಿಸಬಹುದು. ಆದರೆ ನಮ್ಮ ಜನರ ಜೀವನ ನೋವು ನರಳುವಿಕೆಯಿಂದ ಮುದುಡಿ ಹೋಗುತ್ತದೆ. ಎಲ್ಲಿ ನೋಡಿದರೂ ಹೊಡೆತ, ಏಟು, ನಾಚಿಕೆ, ಅವಮಾನ ಸ್ವಲ್ಪ ವಿದ್ಯಾಭ್ಯಾಸವನ್ನಾದರೂ ಮಾಡಿದರೆ ನಮ್ಮವರು ಕೊಂಚ ಅರಿವಿನಿಂದ ಇರಬಹುದು.

**(ಕೃಪೆ : ಅಭಿರುಚಿ ಪ್ರಕಾಶನ, ಮೈಸೂರು : ೯೭೮೦೫೬೦೦೧೩)**



**(ವೃತ್ತಿಯಿಂದ ಉಪಾಧ್ಯಾಯಿನಿಯಾಗಿರುವ ಲೇಖಕಿ ಬಾಮಾ ೧೯೯೨ರಲ್ಲಿ ಪ್ರಕಟಿಸಿದ ಈ ಕಿರುಕಾದಂಬರಿ ‘ಕರುಕ್ಕು’ ತಮಿಳು ದಲಿತ ಸಾಹಿತ್ಯದಲ್ಲಿ ಒಂದು ಹೊಸ ಅಲೆಯನ್ನೇ ಸೃಷ್ಟಿಸಿದೆ)**

# ನವಿಲುಗರಿ

**ಹೇಳು...**



ದೊರೆ ಕಿವುಡನಾಗಿದ್ದಾನೆ
ನಮ್ಮ ಕೂಗು ಅವನನ್ನು ತಾಕುತ್ತಿಲ್ಲ!

ದೊರೆ ಕುರುಡನಾಗಿದ್ದಾನೆ
ನಮ್ಮ ಪಡಿಪಾಟಲು ಅವನಿಗೆ ಕಾಣುತ್ತಿಲ್ಲ !

ದೊರೆ ಮೂಗನಾಗಿದ್ದಾನೆ...
ತನ್ನ ದನಿಯನ್ನೇ ಒತ್ತೆ ಇಟ್ಟು ಬಿಟ್ಟಿದ್ದಾನೆ !

ಅವನು ನಮ್ಮನ್ನು ಮುಟ್ಟಲಾರ...
ಬಾಚಿ ತಬ್ಬಿಕೊಳ್ಳಲಾರ...
ಹತ್ತಿರ ಕೂಡ ಬರಲಾರ....
ಏಕೆಂದರೆ
ಮುಳ್ಳಿನ ಬೇಲಿ ಹಬ್ಬಿಸಿದ್ದಾನೆ....
ಕಬ್ಬಿಣದ ಮೊಳೆಯ ಹಾಸು ಹಾಸಿದ್ದಾನೆ
ತಡೆಗೋಡೆ ಬೇರೆ ಎಬ್ಬಿಸಿದ್ದಾನೆ..

ಮುಟ್ಟಾಬಾರದೆಂದೇ...
ದೊಡ್ಡ ಕಂದಕವನ್ನೇ ತೋಡಿಕೊಂಡಿದ್ದಾನೆ ?!

ಹೇಳು ದೊರೆ...
ನೀನು ಯಾರಿಗೆ ವಚನಬದ್ಧನಾಗಿರುವೆ?
ಯಾರ ಹಂಗಿಗೆ ಸಿಲುಕಿ ಹೀಗೆ ಒದ್ದಾಡುತಿರುವೆ?

ಹೇಳು...ನೀನೂ ಅಸಹಾಯಕನೆ?
ಹೃದಯವಿಲ್ಲದ ಮನುಷ್ಯ ಈ ಜಗದಲ್ಲೇ ಇಲ್ಲ!
ನಾ ನಿನ್ನ ಮುಟ್ಟಬೇಕಿದೆ.....
ನಿನ್ನೊಂದಿಗೆ ಮಾತನಾಡಬೇಕು. ..
ಆಗಲೇ ಹೊಸ ಆಲೋಚನೆ, ವಿಮೋಚನೆ..

**–ಸವಿತಾ ನಾಗಭೂಷಣ**

**(ಇವರ ಇತ್ತೀಚಿನ *'ಕಡೇಮಾತು' : ಲೈತ ಗೀತ* ಸಂಕಲನದಿಂದ ಆಯ್ದ ಪದ್ಯ)**



**ಚಿತ್ರ: ವಿಜಯಶ್ರೀ ಪಾಲಾಡಿ**



**ಪರಿಪೂರ್ಣ ಕವಿತೆ**



ಅನುಭವದ ಪಕ್ವತೆಗೆ ಕಾಯುತ್ತ
ಕವಿ ಏನನ್ನೂ ಬರೆದಿರುವುದಿಲ್ಲ
ಯಾಕೆಂದರೆ ಅವನ ಬದುಕಿನ ಕೊನೆಯ ಕ್ಷಣದವರೆಗೂ
ಅವನ ಅನುಭವ ಅಪೂರ್ಣವಾಗಿಯೇ ಉಳಿದಿರುತ್ತೆ

ಅನುಭವದ ಪರಿಪೂರ್ಣತೆಯ ಅರಿವು ಬರುವುದೇ
ಸಾವಿನ ದಾರುಣ ಯಾತನೆಯ ಕೊನೆಯ ಕ್ಷಣದಲ್ಲಿ

ಗಂಟಲು ಗೊರಗೊರೆಂದು ಇನ್ನೇನು ಪ್ರಾಣವಾಯು
ಹೊರ ಚೆಲ್ಲಬೇಕು
ಆ ನಿಖರ ಕ್ಷಣವಷ್ಟೆ ಅನುಭವದ ಪರಿಪೂರ್ಣತೆಯ
ಕೊನೆಯ ಬಿಂದು

ಆಗ ಕವಿಯೆದ್ದು
ಆಹಾ! ಈ ಸಂಪೂರ್ಣ ಅನುಭವದ ಮೇಲೆ
ಒಂದು ಕವಿತೆ ಬರೆಯಬೇಕಲ್ಲ ಅನ್ನುವಷ್ಟರಲ್ಲಿ

ಯಾರೋ ಅವನನ್ನು ಆಗಲೇ ಗೋರಿಯೊಳಗೆ
ಎಳೆದಿರುತ್ತಾರೆ.

**ದೀಪ ಹೊತ್ತುವ ಸಮಯ**

ಸೂರ್ಯ ಮುಳುಗಿದ್ದೇ ತಡ
ನಿದ್ರಿಸುತ್ತಿದ್ದ ಕತ್ತಲು
ತನ್ನ ಸಾವಿರ ಬೆಳಕಿನ ಕಣ್ಣುಗಳನ್ನು
ಥಕ್ಕೆಂದು ತೆರೆಯಿತು

**–ಹರಿಯಪ್ಪ ಪೇಜಾವರ**

**(ಇವರ ಇತ್ತೀಚಿನ 'ಪಿಲಿಯನ್ ರೈಡರ್' ಕವನ ಸಂಕಲನದಿಂದ ಆಯ್ದ ಪದ್ಯಗಳು)**

---

೨ನೇ ಪುಟದಿಂದ)

ವಿವರಿಸಿದ್ದಾರೆ. ದಲಿತ ಅಸ್ಮಿತೆಯನ್ನಾಧರಿಸಿದ ರಾಜಕೀಯ ಸಂಘಟನೆಗಳಿಂದ ಉಂಟಾದ ಲಾಭವನ್ನು ಒಪ್ಪಿಕೊಳ್ಳುತ್ತಲೇ, ಜಾತಿಗಳನ್ನು ಮೂಲ ಘಟಕಗಳನ್ನಾಗಿ ಗುರುತಿಸಿದ್ದರ ದುಷ್ಪರಿಣಾಮವನ್ನೂ, ಆ ಚಿಂತನೆಯು ಮೇಲ್ಜಾತಿ ಸಂಘಟನೆಗಳಿಗೆ ಪ್ರಬಲ ಸಮರ್ಥನೆಯಾಗಬಹುದಾದ ಅಪಾಯವನ್ನೂ ಮನಗಾಣಿಸಿದ್ದಾರೆ.

ಅಂಬೇಡ್ಕರ್ ಚಿಂತನೆಗಳ ಕುರಿತು ಇಂಥಾ ವಿಮರ್ಶಾತ್ಮಕ ಒಳನೋಟಗಳುಳ್ಳ ಲೇಖನಗಳನ್ನು ಓದಿ, ವಿಮರ್ಶೆಗೆ ಹಚ್ಚುವುದರಿಂದ ಅಂಬೇಡ್ಕರ್ ಜಯಂತಿಯನ್ನು ಅರ್ಥಗರ್ಭಿತವಾಗಿ ಆಚರಿಸಿದಂತಾಗುತ್ತದೆ.

**–ವನಿತಾ ಪಿ. ವಿಶ್ವನಾಥ್,** ಬೆಂಗಳೂರು

ಏಪ್ರಿಲ್ ಸಂಚಿಕೆಯಲ್ಲಿನ ನಿಮ್ಮ ಬಿಡಿ ಟಿಪ್ಪಣಿಗಳಲ್ಲಿ ಲಕ್ಷ್ಮೀನಾರಾಯಣ ಭಟ್ಟರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿಯನ್ನು ನೀಡಲಿಲ್ಲ ಎಂದು ಬರೆದಿರುವುದು ಸರಿಯಲ್ಲ. ಅವರಿಗೆ ೨೦೧೭ರಲ್ಲಿ ಬನ್ನಂಜೆ ಗೋವಿಂದಾಚಾರ್ಯರ ಜೊತೆಗೆ ಆ ಪ್ರಶಸ್ತಿಯನ್ನು ನೀಡಲಾಗಿತ್ತು. ಇನ್ನು ಅವರ ಕೊನೆಯ ದಿನಗಳಲ್ಲಿ ಅವರು ಒಂಟಿಯಾಗಿದ್ದರು ಎಂಬುದು ನಿಜ. ಅವರ ಅಂತ್ಯ ಸಂಸ್ಕಾರಕ್ಕೆ ಬೆರಳೆಣಿಕೆಯಷ್ಟೇ ಜನ ಮಾತ್ರ ಬಂದಿದ್ದುದಕ್ಕೆ ಕರೋನಾ ಭೀತಿಯೂ ಕಾರಣವಿರಬಹುದು.

**–ಸುಬ್ರಾಯ ಚೊಕ್ಕಾಡಿ,** ಚೊಕ್ಕಾಡಿ(ಸುಳ್ಯ)

ಲಕ್ಷ್ಮೀನಾರಾಯಣ ಭಟ್ಟರಿಗೆ ಗೌರವ ಪ್ರಶಸ್ತಿ ನೀಡಲಿಲ್ಲ ಎಂಬುದು ಮಾಹಿತಿಯಾಗಿ ನಿಜವಲ್ಲವಾದರೂ ಆ ಬಗ್ಗೆ ನೀವು ಬರೆದಿರುವ ಸಾಲುಗಳ ಹಿಂದಿನ ಭಾವನೆ ಸತ್ಯವೇ ಆಗಿದೆ. ಏಕೆಂದರೆ ಅವರಿಗೆ ಗಿರಡ್ಡಿ ಗೋವಿಂದರಾಜರು ಅಕಾಡೆಮಿಯ ಅಧ್ಯಕ್ಷರಾಗಿದ್ದು ನಾನು ರಿಜಿಸ್ಟ್ರಾರ್ ಆಗಿದ್ದ ತೊಂಬತ್ತರ ದಶಕದಿಂದಲೂ ಇವರ ಹೆಸರು ಗೌರವ ಪ್ರಶಸ್ತಿ ನೀಡುವ ವಿಷಯ ಚರ್ಚೆಗೆ ಬರುತ್ತಿತ್ತಾದರೂ ಅವರು ಸೇರಿದ್ದ ಸಮುದಾಯದ ಕಾರಣಕ್ಕೋ, ನೀವು ಪ್ರಸ್ತಾಪಿಸಿರುವ ಅವರ ಸ್ವಭಾವದ ಕಾರಣದಿಂದಲೋ ಆ ಪ್ರಸ್ತಾಪ ತಿರಸ್ಕೃತವಾಗುತ್ತಾ ಬಂದು ಕೊನೆಗೆ ಅವರ ೮೧ನೇ ವಯಸ್ಸಿನಲ್ಲಿ ಅದನ್ನು ಅವರಿಗೆ ಪ್ರದಾನ ಮಾಡಲಾಯಿತು. ಅದರ ಹಿಂದೆಯೂ ಒಂದು ಕಥೆ ಇದೆ, ಅದು ಇಲ್ಲಿ ಬೇಡ, ಆದರೆ ನಿಧಾನವೂ ಒಂದು ರೀತಿಯ ನಿರಾಕರಣೆಯೇ. ಈಗ ಅಕಾಡೆಮಿಯ ಪ್ರಶಸ್ತಿಗಳಿಗೆ ಅನೇಕ ಬಾರಿ ಸಾಧನೆ ಮಾನದಂಡವಾಗಿರುವುದಿಲ್ಲ.

**–ಟಿ.ಎಸ್. ದಕ್ಷಿಣಾಮೂರ್ತಿ,** ಬೆಂಗಳೂರು

ವೀರಪ್ಪ ಮೊಯ್ಲಿಯವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿರುವುದನ್ನು ಕುರಿತ ನಿಮ್ಮ ಟಿಪ್ಪಣಿ ಸರಿಯಾಗಿದೆ.

**–ಎಚ್. ಪಟ್ಟಾಭಿರಾಮ ಸೋಮಯಾಜಿ,** ಮಂಗಳೂರು

ನೀವು ಹೇಳಿದಂತೆ ಯಾವುದೇ ಒಂದು ಕೃತಿ ಆ ಭಾಷೆಯ ಸಾರಸ್ವತ ಲೋಕದ ವೇದಿಕೆಗಳಲ್ಲಿ ಕಾಣಿಸಿಕೊಳ್ಳುವ ಮುನ್ನವೇ ಅದಕ್ಕೆ ಪ್ರಶಸ್ತಿಗಳ ಹಾರ ತುರಾಯಿ ಹಾಕುವುದು ರಾಜಕಾರಣ ಮಾತ್ರ ಎನಿಸಿಕೊಳ್ಳುತ್ತದೆ. ಮೊಯ್ಲಿಯವರ ಯಾರೂ ಕೇಳದ ಮತ್ತು ಓದದ ಮಹಾಕಾವ್ಯಕ್ಕೆ ನಮ್ಮ ಕೇಂದ್ರ ಸಾಹಿತ್ಯ ಅಕಾಡೆಮಿ ತನ್ನ ಪ್ರತಿಷ್ಠಿತ ಪ್ರಶಸ್ತಿಯನ್ನು ಘೋಷಿಸುವ ಮೂಲಕ ಪುಢಾರಿ ರಾಜಕಾರಣದ ಆರೋಪಕ್ಕೆ ಸಿಕ್ಕಿ ತನ್ನ ಪ್ರತಿಷ್ಠೆಯನ್ನು ಕಳೆದುಕೊಂಡಿದೆ.

**–ಎಂ.ಎಸ್. ಅಂಗಡಿ, ಹುಬ್ಬಳ್ಳಿ**

ಇತ್ತೀಚಿನ ವರ್ಷಗಳಲ್ಲಿ ಮರ್ಯಾದಸ್ಥರೆನಿಸಿದ ಲೇಖಕರು ಅಕಾಡೆಮಿಗಳ ಪ್ರಶಸ್ತಿ-ಗೌರವಗಳೆಂದರೆ ತಲೆ ಮರೆಸಿಕೊಂಡು ಓಡಾಡುವಂತಾಗಿದೆ.

**–ಎಂ.ಕೆ. ಮೃತ್ಯುಂಜಯ,** ಮೈಸೂರು

**ಹಿರಿಯ ನಿಘಂಟು ತಜ್ಞ ಪ್ರೊ. ಜಿ. ವೆಂಕಟಸುಬ್ಬಯ್ಯ, ಹಿರಿಯ ಹಾಸ್ಯ ಸಾಹಿತಿ ಎಂ.ಡಿ. ಗೋಗೇರಿ ಮತ್ತು ಖ್ಯಾತ ಹಿಂದೂಸ್ತಾನಿ ಗಾಯಕ ಸಾಜನ್ ಮಿಶ್ರಾ ಅವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ-ಸಂ**

# ಪ್ರಶಸ್ತಿ, ಪದವಿ, ಸಾಹಿತ್ಯ ಸಂವೇದನೆ, ಆಕಾಶವಾಣಿ ಇತ್ಯಾದಿ ; ಕೆಲ ಬಿಡಿ ಟಿಪ್ಪಣಿಗಳು

## ಸಾಹಿತ್ಯದಲ್ಲಿ ಮೀಸಲಾತಿ: ತೇಜಸ್ವಿ ಹೇಳಿದ ಮಾತು



ಲಕ್ಷ್ಮೀ ನಾರಾಯಣ ಭಟ್ಟರಿಗೆ ರಾಜ್ಯ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ನೀಡಿರಲಿಲ್ಲ ಎಂದು ನಾನು ಕಳೆದ ಸಂಚಿಕೆಯ ಈ ಅಂಕಣದಲ್ಲಿ ಬರೆದದ್ದು ಸರಿಯಲ್ಲ; ಅವರಿಗೆ ೨೦೧೭ರಲ್ಲಿ ಅದನ್ನು ನೀಡಲಾಗಿತ್ತು ಎಂದು ಕೆಲವು ಓದುಗರು ಪತ್ರ ಬರೆದು ನನ್ನನ್ನು ತಿದ್ದಿದ್ದಾರೆ. ಅವರಿಗೆ ನನ್ನ ಧನ್ಯವಾದಗಳು. ಅವರಿಗೆ ಈ ಪ್ರಶಸ್ತಿ ಸಂದ ಹಿಂದಿನ ಒಂದೆರಡು ವರ್ಷಗಳ ಹಿಂದೆ ತಮಗೆ ಆ ಪ್ರಶಸ್ತಿ ನೀಡುವ ಪ್ರಸ್ತಾಪ ಬಂದಾಗ ಅದನ್ನು ತಮಗೆ ಕೊಡಬಾರದೆಂಬ ಮಾತು ಅಕಾಡೆಮಿಯ ಸಭೆಯಲ್ಲಿ ಕೇಳಿಬಂತು ಎಂಬ ಸಂಗತಿ ಭಟ್ಟರ ಕಿವಿಗೆ ಬಿದ್ದಾಗ ಅವರು ಅಕಾಡೆಮಿಯ ಕಛೇರಿಗೆ ಹೋಗಿ ತಮ್ಮ ಅಸಮಾಧಾನ–ಆಕ್ರೋಶಗಳನ್ನು ವ್ಯಕ್ತಪಡಿಸಿ ಆ ಪ್ರಶಸ್ತಿ ನೀಡಿದರೂ ತಮಗೆ ಬೇಡವೆಂದು ಹೇಳಿಬಂದಿದ್ದರೆಂಬುದನ್ನು ನಾನು ಅವರ ಹತ್ತಿರದ ಗೆಳೆಯರಿಂದ ಕೇಳಿದ್ದೆನಾದ್ದರಿಂದ ಮತ್ತು ಈಗ ಇಂತಹ ಪ್ರಶಸ್ತಿಗಳು ಹೆಚ್ಚು ಸದ್ದು ಮಾಡದಿರುವುದು ನನ್ನ ತಪ್ಪು ಮಾತಿಗೆ ಕಾರಣವಾಗಿರಬಹುದು. ಅಂತೂ ಅವರು ತಮಗೆ ತಮ್ಮ ೮೧ನೇ ವಯಸ್ಸಿನಲ್ಲಿ ಕೊಡಮಾಡಿದ ಈ ಪ್ರಶಸ್ತಿಯನ್ನು ಸ್ವೀಕರಿಸಿದ್ದು ಸಂತೋಷವೇ.

ಆದರೆ ಓರ್ವ ಓದುಗರು ಹೇಳಿರುವಂತೆ ಈಗ ಅಕಾಡೆಮಿ ಪ್ರಶಸ್ತಿ–ಗೌರವ ಎಂದರೆ ಮರ್ಯಾದಸ್ಥ ಲೇಖಕ–ಲೇಖಕಿಯರು ತಲೆ ಮರೆಸಿಕೊಂಡು ಓಡಾಡುವಂತಾಗಿದ್ದರೆ, ಅವು ಯಾವ ಯಾವ ಕಾರಣಕ್ಕೋ ಯಾರ್‍ಯಾರಿಗೋ ಸಂದು ತನ್ನ ಘನತೆ–ಗೌರವಗಳನ್ನು ಕಳೆದುಕೊಂಡಿರುವುದೇ ಆಗಿದೆ. ಹಾಗಾಗಿಯೇ ಹಿರಿಯ ಲೇಖಕಿ ವೈದೇಹಿಯವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದಾಗ ಅವರು ಇದಕ್ಕಿಂತ ದೊಡ್ಡ ಪ್ರಶಸ್ತಿ ತಮಗೀಗಾಲೇ ಸಂದಾಗಿದೆ ಎಂದು ಅದನ್ನು ತಿರಸ್ಕರಿಸಿದರು. ಹಾಗೇ, ಇನ್ನೋರ್ವ ಹಿರಿಯ ಲೇಖಕ ಕೆ.ವಿ. ಸುಬ್ಬಣ್ಣನವರನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕರಿಸಿದ ಮೇಲೇ ನಮ್ಮ ರಾಜ್ಯ ಸಾಹಿತ್ಯ ಅಕಾಡೆಮಿ ಎಚ್ಚೆತ್ತುಕೊಂಡು ಅವರಿಗೆ ತನ್ನ ಪ್ರಶಸ್ತಿಯನ್ನು ಪ್ರಕಟಿಸಿತು. ಆದರೆ ಸುಬ್ಬಣ್ಣ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಹೋಗಲಿಲ್ಲ ಎಂದು ಕೇಳಿರುವೆ. ಇನ್ನು ನಮ್ಮನ್ನು ಅರ್ಧ ಶತಮಾನದ ಕಾಲ ತಮ್ಮ ಹಾಸ್ಯ ಬರಹಗಳಿಂದ ರಂಜಿಸಿದ ಎಚ್.ಎಲ್.ಕೇಶವಮೂರ್ತಿ ತಮ್ಮ ಇಳಿವಯಸ್ಸಿನಲ್ಲಿ ಒಂದು ಪುಸ್ತಕ ಬಹುಮಾನಕ್ಕೇ ತೃಪ್ತರಾಗಿ ಅಸು ನೀಗಿದರು. ಅವರು ಒಮ್ಮೆ ನನ್ನನ್ನು ಕೇಳಿದ ಪ್ರಶ್ನೆ: 'ಏಕೆ ಹಾಸ್ಯ ಸಾಹಿತ್ಯಕ್ಕೇ ಅರ್ಪಿಸಿಕೊಂಡವನ ಸಾಧನೆ ಸಾಧನೆ ಅಲ್ಲವೆ?' ಸುಮತೀಂದ್ರ ನಾಡಿಗರಿಗೂ ಇದೇ ಗತಿ ಒದಗಿತು.

ಇದಕ್ಕೆ ಮುಖ್ಯ ಕಾರಣ ಈ ಹಿಂದೆ ಅಕಾಡೆಮಿಯ ಸದಸ್ಯರಾಗಿದ್ದ ಹಲವರ ಪ್ರಕಾರ ನಮ್ಮ ರಾಜ್ಯ ಸಾಹಿತ್ಯ ಅಕಾಡೆಮಿಯ ಈ ಪ್ರಶಸ್ತಿಗಳಲ್ಲಿ ಕೂಡ ಜಾತಿ, ಲಿಂಗ ಮತ್ತು ಪ್ರದೇಶವಾರು ಮೀಸಲಾತಿಯನ್ನು ಅಳವಡಿಸಿರುವುದು. ಇದು ಸರಿಯಲ್ಲ ಎಂದು ಹೇಳಬಯಸುವವರೂ ಹಾಗೆ ಹೇಳಲಾಗದ ರೀತಿಯಲ್ಲಿ ಇಡೀ ಅಕಾಡೆಮಿಯನ್ನು ಈಗ ಹಾಗೆ ರಚಿಸಲಾಗುತ್ತಿದೆ. ಸದ್ಯದ ಸಾಹಿತ್ಯ ಅಕಾಡೆಮಿಯ ರಚನೆಯನ್ನೊಮ್ಮೆ ನೋಡಿದರೆ ಸಾಕು ಈ ಎಲ್ಲವೂ ಅರ್ಥವಾದೀತು. ನಿಜ ಸಾಹಿತಿಗಳಾರೂ ಅದರತ್ತ ಸುಳಿಯದೇ ಹೋದ ಕಾರಣವೋ ಏನೋ ಅದೀಗ ಸಾಹಿತ್ಯದ ತಂಟೆಯೇ ಬೇಡವೆಂದು ವೈದ್ಯರನ್ನು ಹಿಡಿದುಕೊಂಡು ಆರೋಗ್ಯ ಸಂಸ್ಕೃತಿಯ ಪಾಠಗಳನ್ನು ಆರಂಭಿಸಿದೆ! ಯಾರೇ ಏನೇ ಮಾಡಿದರೂ ಯಾರೂ ಕೇಳದ ಪರಿಸ್ಥಿತಿ ಉಂಟಾಗಿದೆ. ಹಾಗಾಗಿಯೇ ಈಗ ಯಾರೂ ಹೆಸರು ಕೇಳಿರದ ಲೇಖಕರಿಗೂ ಈ ಪ್ರಶಸ್ತಿಗಳನ್ನು ನೀಡುವುದು ಸಾಧ್ಯವಾಗಿದೆ. ಇತ್ತೀಚೆಗೆ ನಮ್ಮ ಸಾಹಿತಿ ಸಮೂಹವೂ ರಾಜಕೀಯ ಧೋರಣೆಗಳನುಸಾರವಾಗಿ ಸಂಪೂರ್ಣ ಒಡೆದುಹೋಗಿರುವುದರಿಂದ ರಾಜಕೀಯ ಒಲವು–ನಿಲುವುಗಳೂ ಅಕಾಡೆಮಿಯ ರಚನೆ ಮತ್ತು ಪ್ರಶಸ್ತಿ ಆಯ್ಕೆಗಳಲ್ಲಿ ಪಾತ್ರ ವಹಿಸುತ್ತಿದ್ದು ಸಾಹಿತ್ಯದ ಗುಣಮಟ್ಟದ ಮಾನದಂಡಗಳೇ ಅನುಮಾನಾಸ್ಪದವಾಗತೊಡಗಿವೆ. ಸಾಹಿತ್ಯ ಎನ್ನುವುದು ಒಂದು ಸಮಾಜದ ವಿವೇಕ ಮತ್ತು ಅದರ ಪಾಕದಿಂದ ಸೃಷ್ಟಿಯಾಗುವ ಸೌಂದರ್ಯಗಳ ಪ್ರತೀಕವಾದ್ದರಿಂದ ಈ ಅವನತಿ ಸಮಾಜದ ಒಟ್ಟು ಅವನತಿಗೇ ದಾರಿ ಮಾಡಿಕೊಡುವಂಥದ್ದು.

ಇದನ್ನೇ ಪೂರ್ಣಚಂದ್ರ ತೇಜಸ್ವಿಯವರ 'ಸಾಹಿತ್ಯ ಎನ್ನುವುದು ಒಂದು ಲಲಿತ ಕಲೆ. ಅದರಲ್ಲಿ ಮೀಸಲಾತಿಯ ಮೂಲಕ ಹಸ್ತಕ್ಷೇಪ ಸಲ್ಲದು, ಹಾಗೆ ನೋಡಿದರೆ ಈಗ ನಮ್ಮ ಸಾಹಿತ್ಯಲೋಕವನ್ನೊಮ್ಮೆ ಅವಲೋಕಿಸಿದರೆ ಮೀಸಲಾತಿ ಬೇಕಿರುವುದು ಮೇಲ್ಜಾತಿಗಳಿಗೇ!' ಎಂಬ ಮಾತಿನ ಮೂಲಕ ಸೂಚಿಸಿದ್ದು.

ಹಾಗೆ ನೋಡಿದರೆ ಈ ಎಲ್ಲ ಅನಾಹುತಗಳ ನಡುವೆಯೂ ನಮ್ಮ ಕನ್ನಡ ಸಾಹಿತ್ಯ ಸಮಾಜ ತನ್ನ ಸೂಕ್ಷ್ಮತೆ ಮತ್ತು ಗುಣ ತಾರತಮ್ಯ ಜ್ಞಾನವನ್ನು ಕಳೆದುಕೊಂಡಿಲ್ಲ. ವೀರಪ್ಪ ಮೊಯ್ಲಿಯವರ ಇತ್ತೀಚಿನದೆಂದು ಹೇಳಲಾದ ಸ್ವಯಂಘೋಷಿತ ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ೨೦೨೦ರ ತನ್ನ ಅತ್ಯುನ್ನತ ಪ್ರಶಸ್ತಿ ನೀಡಿದ್ದರೂ, ಅದನ್ನು ಮೂಸಿ ನೋಡುವವರೂ ಯಾರೂ ಇಲ್ಲವಾಗಿದ್ದಾರೆ. ಈ ಕೃತಿಯ ಬಗೆಗಿನ ಕನ್ನಡ ಸಾರಸ್ವತ ಲೋಕದ ಮೌನ ಈ ಲಜ್ಜೆಗೆಟ್ಟ ಸಾಹಿತ್ಯ ರಾಜಕಾರಣದ ಬಗ್ಗೆ ಎಲ್ಲವನ್ನೂ ಹೇಳುವಂತಿದೆ. ಮೊಯ್ಲಿಯವರಿಗೆ ಹಿಂದೆ ಇವರ ಇನ್ನೊಂದು ಮಹಾಕಾವ್ಯಕ್ಕೆ ಸರಸ್ವತಿ ಸಮ್ಮಾನ್ ಕೊಡಮಾಡಿದಾಗಲೂ ಕನ್ನಡ ಸಾರಸ್ವತ ಸಮಾಜ ಇದೇ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದಾಗಿದೆ. ಹಾಗಾಗಿ ಈ ಅಕಾಡೆಮಿಗಳು ಎಷ್ಟೇ ಅವನತಿಗಳಿಗೀಡಾಗಿದ್ದರೂ ನಮ್ಮ ಸಾಹಿತ್ಯ ಸಮಾಜದ ಆಧಾರ ಸ್ತಂಭಗಳನ್ನು, ಮೂಲ ನಂಬಿಕೆಗಳನ್ನು ಅಲುಗಾಡಿಸದಾಗಿವೆ ಎಂಬುದೇ ಸದ್ಯದ ನೆಮ್ಮದಿಯ ಸಂಗತಿಯಾಗಿದೆ.

## ಹರಾಜಾಗುತ್ತಿರುವ ಗೌರವ ಪದವಿಗಳು.

ನಮ್ಮ ಸಾಮಾಜಿಕ ಸಂಸ್ಥೆಗಳ ಈ ಅವನತಿ ಸಾಹಿತ್ಯ–ಸಾಂಸ್ಕೃತಿಕ ಕ್ಷೇತ್ರಗಳಿಗೇ ಸೀಮಿತವಾಗಿಲ್ಲ, ಹಾಗೆ ಇರುವುದು ಸಾಧ್ಯವೂ ಇಲ್ಲ. ಆಧುನಿಕ ಸಾಮಾಜಿಕ ರಚನೆ ಹಾಗೆ ಅವಿಭಾಜ್ಯವಾಗಿರುತ್ತದೆ. ನಮ್ಮ ವಿಶ್ವವಿದ್ಯಾಲಯಗಳು ಈಗ ಕೊಡಮಾಡುತ್ತಿರುವ ಗೌರವ ಡಾಕ್ಟೋರೇಟ್ ಮತ್ತು ಅದಕ್ಕೆ ಸಮಾನಾಂತರವಾದ ನಾಡೋಜ ಪದವಿಗಳ ಗತಿ ಏನಾಗಿದೆ ನೋಡಿ. ಇವು ಕೆಲ ವರ್ಷಗಳಿಂದೀಚೆಗೆ ವಶೀಲಿಬಾಜಿ ಮತ್ತು ಮಾರಾಟಕ್ಕೆ ಮುಕ್ತವಾದಂತೆ ಸ್ಪಷ್ಟವಾಗಿ ಕಾಣುತ್ತಿದೆ. ನಮ್ಮ ಶಿಕ್ಷಣ ವ್ಯವಸ್ಥೆಯ ಮೂಲಮಂಟಪಗಳಿಗೇ ಗೆದ್ದಲು ಹಿಡಿಯಲಾರಂಭಿಸಿರುವಾಗ ಇನ್ನೇನು ಉಳಿದೀತು? ಈ ಅವನತಿಯ ಮೂಲ ನಮ್ಮ ಕುಲಪತಿ ಮತ್ತು ಉಪಕುಲಪತಿಗಳ ಆಯ್ಕೆ ಪದ್ಧತಿಯಲ್ಲೇ ಇದೆ. ಕುಲಪತಿಗಳಾದ ರಾಜ್ಯದ ರಾಜ್ಯಪಾಲರನ್ನು ಕೇಂದ್ರ ಸರ್ಕಾರ ಯಾವ ಪರಿಗಣನೆಯ ಮೇಲೆ ಆಯ್ಕೆ ಮಾಡುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ನಮ್ಮ ಇಂದಿನ ರಾಜ್ಯಪಾಲರನ್ನು ನೋಡಿದರೇ ಇದು ಗೊತ್ತಾಗುವಂತಿದೆ. ಇನ್ನು ಈಗ ಉಪಕುಲಪತಿಗಳಾಗ ಬಯಸುವ ಅಭ್ಯರ್ಥಿಗಳ ಚರಿತ್ರೆ ನೋಡಿದರೇ ಈ ದುರಂತ ಕಥೆಯ ಕೊನೆ ವಾಕ್ಯ ತಾನೇ ತಾನಾಗಿ ಬರೆಯಲ್ಪಡುವಂತಿದೆ. ಕೆಲ ವರ್ಷಗಳ ಹಿಂದೆ ಒಂದು ವಿಶ್ವವಿದ್ಯಾಲಯದ ಉಪಕುಲಪತಿಗಳಾಗಲು ಪ್ರಯತ್ನಿಸಿ ವಿಫಲರಾಗಿದ್ದ ನನ್ನ ಗೆಳೆಯರನ್ನು ಕೇಳಿದಾಗ ಅವರು ಒಂದಿಷ್ಟೂ ಸಂಕೋಚವಿಲ್ಲದೆ 'ಎಷ್ಟೇ ಪ್ರಯತ್ನಿಸಿದರೂ ಹತ್ತು ಲಕ್ಷ ಕಡಿಮೆ ಬಿದ್ದಿತು ಸಾರ್' ಎಂದಾಗ ನನಗೆ ಅರೆಕ್ಷಣ ಏನೂ ಗೊತ್ತಾಗದೆ ತಬ್ಬಿಬ್ಬಾದೆ. ಆದರೆ ಅವರು ಛಲಬಿಡದ ತ್ರಿವಿಕ್ರಮನಂತೆ ತಮ್ಮ ಪ್ರಯತ್ನ ಬಿಡದೆ ಮುಂದಿನ ಸರದಿಯಲ್ಲಿ ಉಪಕುಲಪತಿಯಾಗೇಬಿಟ್ಟರು. ಇದು ಈಗ ಆ ಹತ್ತು ಲಕ್ಷವನ್ನು(ಅಥವಾ ಈ ಹೊತ್ತಿಗೆ ಹೆಚ್ಚಾದ ರೇಟಿಗನುಸಾರವಾದ ಮೊತ್ತವನ್ನು) ಹೊಂದಿಸಿದ್ದರಿಂದ ಸಾಧ್ಯವಾಯಿತೋ ಏನೋ ಗೊತ್ತಾಗಲಿಲ್ಲ. ಆದರೆ ಈ ಹೊಲಸಿನ ಮಧ್ಯೆಯೂ ಕೆಸರಿನ ಕೊಳದ ಕಮಲದಂತೆ ತಮ್ಮ ಶೈಕ್ಷಣಿಕ ಯೋಗ್ಯತೆಯ ಮೇಲೆ ಈ ಸ್ಥಾನಗಳನ್ನು ಪಡೆವರು ಒಂದಿಬ್ಬರು ಯಾವಾಗಲೂ ಇರುವರು. ಇವರೇ ನಮ್ಮ ಭರವಸೆಯ ದೀಪಸ್ತಂಭಗಳು.

## ಅವನತಿಯ ಹಾದಿಯಲ್ಲಿರುವ ಆಕಾಶವಾಣಿ

ಈ ಮಧ್ಯೆ ಹಾಗೂ ಹೀಗೂ ಉಸಿರು ಹಿಡಿದುಕೊಂಡು ಬದುಕಿದ್ದ ನಮ್ಮ ಆಕಾಶವಾಣಿ ಕೇಂದ್ರಗಳನ್ನು ಪೂರ್ತಿ ಕತ್ತು ಹಿಸುಕಿ ಕೊಲ್ಲುವ ಪ್ರಯತ್ನ ನಡೆದಿರುವ ಸುದ್ದಿ ಬಂದಿದೆ. ಕರ್ನಾಟಕದ ಎಲ್ಲ ಆಕಾಶವಾಣಿ ಕೇಂದ್ರಗಳನ್ನೂ ಕಾರ್ಯಕ್ರಮ ಪ್ರಸಾರದ ವಿಷಯದಲ್ಲಿ ಬೆಂಗಳೂರು ಆಕಾಶವಾಣಿ ಕೇಂದ್ರದ ಅಧೀನಕ್ಕೆ ತಂದು ಅವನ್ನು ಬಹುತೇಕ ಮರುಪ್ರಸಾರ ಕೇಂದ್ರಗಳನ್ನಾಗಿ ಪರಿವರ್ತಿಸುವ ತೀರ್ಮಾನ ಕೈಗೊಳ್ಳಲಾಗಿದ್ದು, ಇದನ್ನು ಬೆಂಗಳೂರು ಆಕಾಶವಾಣಿಯ ಯಜಮಾನ ಪ್ರಭೃತಿಗಳು ಪ್ರಭುತ್ವದ ಚರಣಸೇವೆಯ ಭಾಗವಾಗಿ ತಮ್ಮ ಸೃಜನಶೀಲತೆಯನ್ನೆಲ್ಲ ಬಳಸಿ 'ಯುಗಾದಿ'ಗೆ ತಗುಲುಹಾಕಿ 'ಇದು ಬದಲಾವಣೆಯ ಸಮಯ' ಎಂದು ಒಂದು ಸಂಭ್ರಮಾಚರಣೆಯ ರೂಪದಲ್ಲಿ ಜನರನ್ನು ಯಾಮಾರಿಸಲು ಪ್ರಯತ್ನಿಸಿದರೂ ಕೆಲವೆಡೆಯ ಜನರ ಮತ್ತು ಅದರ ಹೊರಗುತ್ತಿಗೆ ಸಿಬ್ಬಂದಿಯ ಪ್ರತಿಭಟನೆಯ ಕಾರಣದಿಂದ ಸಂಬಂಧಿತ ಆದೇಶವನ್ನು ತಡೆಹಿಡಿಯಲಾಗಿದೆಯಂತೆ. ಆದರೆ ಇಂದಿನ ಪ್ರಭುತ್ವದ ಕೇಂದ್ರ ನೀತಿಯೇ ಕೇಂದ್ರೀಕರಣವಾದ್ದರಿಂದ ಈ ತಡೆ ಎಷ್ಟು ಕಾಲ ನಿಲ್ಲುವುದೋ ಗೊತ್ತಿಲ್ಲ. ಈ ಅನುಮಾನಕ್ಕೆ ಇನ್ನೊಂದು ಕಾರಣವೂ ಇದೆ. ಅದೆಂದರೆ, ಆಕಾಶವಾಣಿ ಕಳೆದ ಮೂರು ದಶಕಗಳಲ್ಲಿ ನಡೆದಿರುವ ಮಾಧ್ಯಮ ಕ್ರಾಂತಿಯ ನೆದರೇ ಇಲ್ಲದಂತೆ ತನ್ನದೇ ಹೊಸ ಸಂವಹನ ಮಾರ್ಗಗಳನ್ನು ಕಂಡುಕೊಂಡು ಅದಕ್ಕೆ ತಕ್ಕ ಕಾರ್ಯಕ್ರಮ ರೂಪಗಳನ್ನು ಆವಿಷ್ಕರಿಸಿಕೊಳ್ಳಲು ವಿಫಲವಾಗಿರುವುದು. ಇದಕ್ಕೆ ಅದರ ನೀತಿ ನಿರೂಪಕ ಆಡಳಿಗಾರರೂ, ಸಿಬ್ಬಂದಿ ಎರಡೂ ಕಾರಣ. ಆಕಾಶವಾಣಿ ನನ್ನ ಮಾತೃ ಇಲಾಖೆ, ಹಾಗೆಂದು ನನಗೇನೂ ಹೆಮ್ಮೆ ಇಲ್ಲ. ಅದಕ್ಕೆ ಇದೇ ಕಾರಣ. ಈ ಬಗ್ಗೆ ಇನ್ನೊಮ್ಮೆ ವಿಸ್ತರಿಸಿ ಬರೆಯುವೆ.

–ಡಿಎಸ್ಸೆನ್

# ಪುಸ್ತಕಾವಲೋಕನ

ಪು: **ಭಿನ್ನ-ಅಭಿಪ್ರಾಯ: ವೈ.ವಿ.ರೆಡ್ಡಿ** ನಿರೂಪಣೆ: **ಎಂ.ಎಸ್. ಶ್ರೀರಾಮ್** ಪ್ರ: **ಅಕ್ಷರ ಪ್ರಕಾಶನ**, ಹೆಗ್ಗೋಡು ಪು: ೨೮೮ ಬೆಲೆ: ರೂ.೨೭೦/-

## ದಕ್ಷ ಹಣಕಾಸು ಆಡಳಿತಗಾರನ ಸಮೃದ್ಧ ಅನುಭವ ಕಥನ



**ವೈ**. ವಿ. ರೆಡ್ಡಿಯವರು ನಮ್ಮ ನಡುವಿನ ಮೇಧಾವಿ ಅರ್ಥಶಾಸ್ತ್ರಜ್ಞರು, ಭಾರತೀಯ ಅರ್ಥವ್ಯವಸ್ಥೆಯನ್ನು ಸೊಗಸಾಗಿ ಅರ್ಥಮಾಡಿಕೊಂಡವರು, ಅತ್ಯಂತ ವೃತ್ತಿಪರತೆಯಿಂದ ಕೇಂದ್ರ ಬ್ಯಾಂಕನ್ನು ಮುನ್ನಡೆಸಿದಂತಹವರು ಅನ್ನುವುದರಲ್ಲಿ ಅನುಮಾನವೇ ಇಲ್ಲ. ಅರ್ಥಶಾಸ್ತ್ರದಲ್ಲಿ ತಮ್ಮ ಓದಿನ ದಿನಗಳಲ್ಲೇ ಪ್ರತಿಭೆಯನ್ನು ತೋರಿದರು. ಆದರೆ ತಂದೆಯ ಆಸೆಗಾಗಿ ಐಎಎಸ್ ಓದಿ, ಎಲ್ಲಾ ಹುದ್ದೆಗಳಲ್ಲೂ ಸ್ವತಂತ್ರವಾಗಿ ಕೆಲಸ ಮಾಡಿದರು. ಸೇವೆಯಲ್ಲಿರುವಾಗಲೇ ತಮ್ಮ ಪ್ರೀತಿಯ ಅರ್ಥಶಾಸ್ತ್ರದಲ್ಲಿ ಅಧ್ಯಯನ ಮುಂದುವರಿಸಿ ಪಿಎಚ್‌ಡಿ ಮುಗಿಸಿದರು. ವಿತ್ತವಿಭಾಗದ ಅಧಿಕಾರಿಯಾಗಿ, ರಿಸರ್ವ್ ಬ್ಯಾಂಕಿನ ಉಪಗವರ್ನರ್ ಆಗಿ, ನಂತರ ಗವರ್ನರ್ ಆಗಿ, ಹದಿನಾಲ್ಕನೇ ಹಣಕಾಸು ಆಯೋಗದ ಅಧ್ಯಕ್ಷರಾಗಿ ರೆಡ್ಡಿಯವರು ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸಿದ್ದಾರೆ. ಭಾರತದ ಆರ್ಥಿಕತೆ ಕಂಡ ಏಳುಬೀಳುಗಳಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಅವರ ಪಾತ್ರ ಇದೆ.

ಹಾಗಾಗಿ ಅವರ ಆತ್ಮ ಚರಿತ್ರೆಯೆನ್ನುವುದು ಕೇವಲ ಅವರ ಜೀವನದ ಚರಿತ್ರೆಯಾಗಿರುವುದಕ್ಕೆ ಸಾಧ್ಯವಿಲ್ಲ. ಸ್ವಾತಂತ್ರೋತ್ತರ ಭಾರತದ ಆರ್ಥಿಕತೆಯ ಚರಿತ್ರೆಯೂ ಆಗಿರುತ್ತದೆ. ಭಾರತದ ಆರ್ಥಿಕ ಚಿಂತನೆಯ ಮಾರ್ಪಾಡಿನ ಚರಿತ್ರೆಯೂ ಆಗಿರುತ್ತದೆ. ಹಾಗೆಯೇ ಆ ಕಾಲದ ಪ್ರತಿಯೊಬ್ಬ ಭಾರತೀಯ ಚಿಂತಕನ ಕನಸು, ನೋವು, ತಾಕಲಾಟಗಳ ಚರಿತ್ರೆಯೂ ಆಗಿರುತ್ತದೆ. ಹೆಚ್ಚಿನ ಆಡಳಿತಾಧಿಕಾರಿಗಳಿಗಿಂತ ಇವರು ಭಿನ್ನವಾಗಿರುವುದರಿಂದ ಅದು ಆತ್ಮರತಿಯಾಗಿರುವುದಕ್ಕೂ ಸಾಧ್ಯವಿಲ್ಲ.

ರೆಡ್ಡಿಯವರು 'ನಾ ಜ್ಞಾಪಕಲು'(ನನ್ನ ನೆನಪುಗಳು) ಅಂತ ತಮ್ಮ ಆತ್ಮಕಥೆಯನ್ನು ತೆಲುಗಿನಲ್ಲಿ ಬರೆದಿದ್ದಾರೆ. ನಂತರ ಇಂಗ್ಲಿಷಿನಲ್ಲಿ ಹೆಚ್ಚು ವಿಸ್ತೃತವಾಗಿ 'ಅಡ್ವೈಸ್ ಅಂಡ್ ಡಿಸ್ಸೆಂಟ್' ಬರೆದರು. ಎರಡೂ ಬೇರೆಯದೇ ಆದ ಓದುಗರಿಗಾಗಿ ಬರೆದ ಕೃತಿಗಳಾಗಿವೆ. ಎರಡನೆಯದರಲ್ಲಿ ಹಣಕಾಸು, ಆರ್ಥಿಕತೆ, ಇತ್ಯಾದಿಗಳಿಗೆ ಸಂಬಂಧಿಸಿದ ತಾಂತ್ರಿಕ ವಿವರಗಳೂ ಸೇರಿಕೊಂಡಿವೆ. ಅದು ಸಾಮಾನ್ಯ ಓದುಗರಿಗೆ ಕಷ್ಟವಾಗಬಹುದು ಅನ್ನುವ ಕಾರಣಕ್ಕೋ ಏನೋ ತೆಲುಗಿನ ಆವೃತ್ತಿಯಲ್ಲಿ ಈ ವಿವರಗಳು ಅಷ್ಟಾಗಿ ಕಾಣುವುದಿಲ್ಲ. ಆದರೆ ಈ ವಿವರಗಳು ತುಂಬಾ ಉಪಯುಕ್ತವಾದವು ಅನ್ನುವುದರಲ್ಲಿ ಅನುಮಾನವಿಲ್ಲ.

ಎಂ.ಎಸ್.ಶ್ರೀರಾಂ ನಿರೂಪಿಸಿರುವ 'ಭಿನ್ನ ಅಭಿಪ್ರಾಯ' ಪುಸ್ತಕ, ತೆಲುಗಿನ ಆತ್ಮಕಥೆಯ ಜೊತೆಗೆ ಇಂಗ್ಲೀಷ್ ಆವೃತ್ತಿಯಲ್ಲಿ ಚರ್ಚಿಸಿರುವ ಹಲವು ತಾಂತ್ರಿಕ ವಿಷಯಗಳನ್ನೂ ಸೇರಿಸಿಕೊಂಡು ಹೆಣೆದಿರುವ ಪುಸ್ತಕ. ಇದು ಅವರ ವೃತ್ತಿಜೀವನದ ಚರಿತ್ರೆ. ಆದರೆ ಅವರ ಮೇಲೆ ನಿರಂತರವಾಗಿ ಆದಂತಹ ಪ್ರಭಾವಗಳಿಂದ ಅವರ ವೃತ್ತಿ ಜೀವನವನ್ನು ಪ್ರತ್ಯೇಕಿಸಿ ನೋಡುವುದಕ್ಕೆ ಸಾಧ್ಯವಿಲ್ಲ. ರೆಡ್ಡಿಯವರು ಈ ಶತಮಾನದ ಅತ್ಯಂತ ಮೇಧಾವಿಗಳೊಂದಿಗೆ ಒಡನಾಡಿದ್ದಾರೆ, ಚರ್ಚಿಸಿದ್ದಾರೆ ಹಾಗೂ ಕೆಲಸ ಮಾಡಿದ್ದಾರೆ. ಅವರಿಂದ ಕಲಿತಿದ್ದಾರೆ. ಆರ್ಥಿಕ ಕ್ಷೇತ್ರದಲ್ಲಿ ಸಂಭವಿಸಿದ ಒಳ್ಳೆಯ ಹಾಗೂ ಕೆಟ್ಟ ಗಳಿಗೆಗಳಲ್ಲಿ ಇವರು ಇದ್ದಾರೆ. ಹಾಗಾಗಿ ಆ ಸಂದರ್ಭದ ಹಿನ್ನೆಲೆ, ನಡೆದ ಚರ್ಚೆಗಳು, ಸಂಭವಿಸಿದ ಘಟನೆಗಳ ವಿವರಗಳು ನಮಗೆ ಸಿಗುತ್ತವೆ.

ಭಾರತದ ಆರ್ಥಿಕತೆಯ ನಿರ್ವಹಣೆಯಲ್ಲಿ ಕೆಲಸ ಮಾಡಿದ ಇನ್ನಿತರ ಹಿರಿಯರೊಂದಿಗೂ ಇವರು ಕೆಲಸ ಮಾಡಿದ್ದಾರೆ. ಆತ್ಮೀಯವಾಗಿ ಒಡನಾಡಿದ್ದಾರೆ. ಸಿ ರಂಗರಾಜನ್, ಬಿಮಲ್ ಜಲಾನ್, ಮನಮೋಹನ್ ಸಿಂಗ್ ಮೊದಲಾದವರ ನಿಕಟ ಸಂಪರ್ಕ ಇವರಿಗಿತ್ತು. ಹಾಗಾಗಿ ಅಂತಹ ಮೇಧಾವಿಗಳ ಕಾರ್ಯವೈಖರಿಯ ಪರಿಚಯವೂ ನಮಗೆ ಆಗುತ್ತದೆ. ಅವರೆಲ್ಲರ ವ್ಯಕ್ತಿತ್ವದ ಇನ್ನೊಂದು ಆಯಾಮ ನಮ್ಮ ಮುಂದೆ ಅನಾವರಣಗೊಳ್ಳುತ್ತದೆ. ಅವರೆಲ್ಲರೂ ಯೋಚಿಸುತ್ತಿದ್ದ, ಕೆಲಸ ಮಾಡುತ್ತಿದ್ದ ವಿಧಾನ ಬೇರೆ ಬೇರೆ. ಅವರೆಲ್ಲರೂ ಆರ್‌ಬಿಐನ ಘನತೆ, ಸ್ವಾಯತ್ತತೆಗಾಗಿ ಹೋರಾಡಿದವರು.

ಹಾಗೆಯೇ ಎನ್‌ಟಿಆರ್, ಚಿದಂಬರಂ, ಜಸ್ವಂತ್ ಸಿಂಗ್, ಯಶವಂತ್ ಸಿನ್ಹಾ ಮೊದಲಾದವರ ರಾಜಕೀಯ ನಾಯಕರೊಂದಿಗೆ ಇವರು ಕೆಲಸ ಮಾಡಿದ್ದಾರೆ. ಆ ಅನುಭವ ನಿಜಕ್ಕೂ ತುಂಬಾ ಆಸಕ್ತಿದಾಯಕವಾಗಿದೆ. ವಿಶೇಷವಾಗಿ ಎನ್ ಟಿ ಆರ್ ಹಾಗೂ ಚಿದಂಬರಂ ಅವರೊಂದಿಗಿನ ಒಡನಾಟದ ವಿವರಗಳು ಸೊಗಸಾಗಿ ಮೂಡಿಬಂದಿವೆ, ಬೋಧಪ್ರದವೂ ಆಗಿವೆ. ಆ ಅರ್ಥದಲ್ಲಿ ರಾಜಕೀಯ ವ್ಯವಸ್ಥೆಯಲ್ಲಿನ ಭಿನ್ನಾಭಿಪ್ರಾಯವನ್ನು ಹೇಗೆ ನಿರ್ವಹಿಸಬೇಕು, ಸರಿಯಾದ ನೀತಿಯನ್ನು ಹೇಗೆ ಕಾರ್ಯಗತಗೊಳಿಸಬೇಕು ಇತ್ಯಾದಿಗಳನ್ನು ತಿಳಿಯಬಯಸುವರಿಗೆ ಇದು ಒಂದು ಪಠ್ಯಪುಸ್ತಕ ಇದ್ದ ಹಾಗೆ.

ಇವರ ಅಧಿಕಾರದ ಅವಧಿಯಲ್ಲಿ ಹಲವು ಘಟನೆಗಳು ನಡೆದಿವೆ. ಉದಾಹರಣೆಗೆ ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸಲು ಚಿನ್ನವನ್ನು ಅಡಮಾನ ಇಟ್ಟು, ಸಾಲ ತಂದದ್ದು ಇತ್ಯಾದಿ. ಇವರು ಚಿನ್ನವನ್ನು ನಿರ್ವಹಿಸಿದ ರೀತಿಯಿಂದ ಇವರನ್ನು 'ಬಂಗಾರದ ಮನುಷ್ಯ' ಅಂತ ಕರೆದದ್ದೂ ಇದೆ. ಫೆರಾ ಕಾಯಿದೆ ತುಂಬಾ ಬಿಗಿಯಾಗಿದ್ದ ಕಾಲದಲ್ಲಿ ಇಂದಿರಾ ಗಾಂಧಿಯವರು ಮಗನ ಓದಿಗೆಂದು ವಿದೇಶಿ ವಿನಿಮಯಕ್ಕೆ ಅನುಮತಿ ಕೋರಿ ರಿಸರ್ವ್ ಬ್ಯಾಂಕಿಗೆ ಪತ್ರ ಬರೆದದ್ದು, ಹೀಗೆ ಎಷ್ಟೋ ಸಣ್ಣ ಪುಟ್ಟ ವಿವರಗಳು ಪುಸ್ತಕದ ಉದ್ದಕ್ಕೂ ಸಿಗುತ್ತವೆ.

ಅವರು ಕೆಲಸಕ್ಕೆ ಸೇರಿದ ಸಂದರ್ಭದಲ್ಲಿ ಸಮಾಜವಾದ ಹೆಚ್ಚು ಜನಪ್ರಿಯವಾಗಿದ್ದ ಸಿದ್ಧಾಂತವಾಗಿತ್ತು. ಅವರೂ ಅದರ ಪ್ರಭಾವಕ್ಕೆ ಒಳಗಾಗಿದ್ದವರೆ. ಆದರೆ 1980ರ ಲೆನಿನ್‌ಗ್ರಾಡ್ ಭೇಟಿಯಿಂದ ಆ ಬಗ್ಗೆ ಉತ್ಸಾಹ ಕಮ್ಮಿಯಾಗಿತ್ತು. ಅವರು 1991ರಲ್ಲಿ ಆರ್ಥಿಕ ಸುಧಾರಣೆಯನ್ನು ಬೆಂಬಲಿಸಿದರು. ಹಾಗಂತ ಅವರೇನೂ ಮಾರುಕಟ್ಟೆಯ ಆರ್ಥಿಕತೆಯ ಉತ್ಸಾಹಿ ಬೆಂಬಲಿಗರೂ ಆಗಿರಲಿಲ್ಲ. ಅದರ ಮಿತಿಯೂ ಅವರಿಗೆ ಗೊತ್ತಿತ್ತು. ಈ ತಿಳುವಳಿಕೆಯೇ 2008ರಲ್ಲಿ ಜಗತ್ತಿನಾದ್ಯಂತ ಆವರಿಸಿದ್ದ ಬಿಕ್ಕಟ್ಟಿನಿಂದ ಭಾರತವನ್ನು ಪಾರುಮಾಡಿತು. ಅವರು ಆಗ ತೆಗೆದುಕೊಂಡಿದ್ದ ಕ್ರಮಗಳು ಅವರಿಗೆ ಖ್ಯಾತಿಯನ್ನು ತಂದುಕೊಟ್ಟಿತು. ಅವರು 2007ರ ನಂತರ ಜಗತ್ತಿನಾದ್ಯಂತ ಆರ್ಥಿಕ ಬಿಕ್ಕಟ್ಟಾಗುತ್ತದೆಂದು ನಿರೀಕ್ಷಿಸಿದ್ದರು. ಅದಕ್ಕಾಗಿ ಎಲ್ಲಾ ತಯಾರಿಯನ್ನು ನಡೆಸಿ, ತುರ್ತುತಂತ್ರದ ಸ್ಥೂಲ ರೂಪುರೇಷೆಯನ್ನು ತಯಾರಿಸಿಕೊಂಡಿದ್ದರು, ಅಮೆರಿಕೆಯಲ್ಲಿ ವಸತಿ ಸಾಲದ ಗುಳ್ಳೆ ಒಡೆಯಿತು. ಅಲ್ಲಿ ಪ್ರಾರಂಭವಾದ ಆರ್ಥಿಕ ಬಿಕ್ಕಟ್ಟು ಒಂದೊಂದೇ ದೇಶವನ್ನು ಪ್ರವೇಶಿಸುತ್ತಾ ಕೊನೆಗೆ ಇಡೀ ಜಗತ್ತನ್ನು ಆಕ್ರಮಿಸಿಕೊಂಡಿತು. ಬಹುಶಃ ರೆಡ್ಡಿಯವರು ತೆಗೆದುಕೊಂಡಿದ್ದ ಕ್ರಮಗಳಿಂದ ಭಾರತ ಬಿಕ್ಕಟ್ಟಿನಿಂದ ಪಾರಾಯಿತು. ಇಡೀ ಜಗತ್ತು ಇದನ್ನು ಮೆಚ್ಚಿಕೊಂಡಿತು. ಜೋಸೆಫ್ ಸ್ಟಿಗ್ಲಿಟ್ಜ್ "ಅಮೆರಿಕಾಕ್ಕೆ ರೆಡ್ಡಿಯಂತಹ ಗವರ್ನರ್ ಇದ್ದಿದ್ದರೆ ಈ ದೇಶ ಬಿಕ್ಕಟ್ಟಿಗೆ ಸಿಲುಕುತ್ತಿರಲಿಲ್ಲ" ಎಂದಿದ್ದರು.

ಇಂತಹ ಒಂದು ಪುಸ್ತಕವನ್ನು ಕನ್ನಡಕ್ಕೆ ತಂದು ಶ್ರೀರಾಂ ಒಳ್ಳೆಯ ಕೆಲಸ ಮಾಡಿದ್ದಾರೆ. ಕನ್ನಡ ಭಾಷೆಗೂ ಇದು ಒಳ್ಳೆಯದು. ಇಂತಹ ಬೇರೆ ಬೇರೆ ವಿಷಯಗಳ ಚರ್ಚೆ ಕನ್ನಡದಲ್ಲಿ ನಡೆದರೆ ಕನ್ನಡವೂ ಬೆಳೆಯುತ್ತದೆ. ಈ ಪುಸ್ತಕ ಸಲೀಸಾಗಿ ಅರ್ಥವಾಗಿಬಿಡುತ್ತದೆ ಅಂತ ಹೇಳುವುದಿಲ್ಲ. ಆದರೆ ಸ್ವಲ್ಪ ತಾಳ್ಮೆಯಿಂದ ಓದಿದರೆ ನಮ್ಮ ಗ್ರಹಿಕೆ ಹೆಚ್ಚು ವಿಶಾಲವಾಗುತ್ತದೆ.

**-ಟಿ.ಎಸ್. ವೇಣುಗೋಪಾಲ್**

ಪು: **ಸಾವರ್ಕರ್**(ಹಿಂದುತ್ವದ ಜನಕನ ನಿಜಕತೆ) ಇಂಗ್ಲಿಷ್ ಮೂಲ: **ವೈಭವ್ ಪುರಂದರೆ** ಕನ್ನಡಕ್ಕೆ: **ಬಿ.ಎಸ್. ಜಯಪ್ರಕಾಶ ನಾರಾಯಣ** ಪ್ರ: **ವಸಂತ ಪ್ರಕಾಶನ**, ಬೆಂಗಳೂರು(೦೮೦-೨೨೪೪೩೯೬) ಪು: **೪೮೦** ಬೆ: **ರೂ.೩೮೦/-**

## ದೇಶಭಕ್ತಿ ಎಂಬ ಉನ್ಮಾದದ ಅಲೆಯ ಮೇಲೆ...



**ಭಾ**ರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿನ 'ಕ್ರಾಂತಿಕಾರಿ' ಧಾರೆಯೆಂದು ಕರೆಲಾಗುವ ಹಿಂಸಾ ಮಾರ್ಗದ ಪ್ರಮುಖ ಹೋರಾಟಗಾರರಾಗಿ 'ವೀರ' ಎಂಬ ಅಭಿದಾನದಿಂದಲೂ ಕರೆಯಲ್ಪಡುವ ವಿನಾಯಕ ದಾಮೋದರ ಸಾವರ್ಕರ್(೨೮.೫.೧೮೮೩-೨೬.೨.೧೯೬೬) ತಮ್ಮ ಬದುಕಿನ ಎರಡನೆಯ ಘಟ್ಟದಲ್ಲಿ 'ಹಿಂದುತ್ವ' ಎಂಬ ಈಗ ಬಹು ಮುನ್ನೆಲೆಗೆ ಬಂದು ಇಂದಿನ ರಾಜಕಾರಣವನ್ನು ನಿರ್ವಚಿಸುತ್ತಿರುವ ಸಿದ್ಧಾಂತವನ್ನು ಮಂಡಿಸಿದವರಾಗಿಯೂ ಪ್ರಸಿದ್ಧರು. ಹೀಗಾಗಿ ಹಿಂದೆಂದಿಗಿಂತಲೂ ಇಂದು ಇವರ ಬಗ್ಗೆ ಜನರಲ್ಲಿ ಕುತೂಹಲ ಹೆಚ್ಚಿದ್ದು ಈ ಪುಸ್ತಕ ಅದನ್ನು ಸಾಕಷ್ಟು ಹದವಾಗಿಯೇ ತಣಿಸುತ್ತದೆ ಎಂದು ಈ ಪುಸ್ತಕದ ಬಗೆಗಿನ ಮೊದಲ ಮಾತಾಗಿ ಹೇಳಬಹುದು.

ಸಾವರ್ಕರ್ ಬದುಕು ಮತ್ತು ರಾಜಕಾರಣಗಳ ಬಗ್ಗೆ ಓದುಗನನ್ನು ಸುಸ್ತು ಮಾಡುವಷ್ಟು ವಿವರಗಳನ್ನು ಒದಗಿಸುವ ಈ ಪುಸ್ತಕ ಇವರ ಬಗ್ಗೆ ಅಭಿಮಾನ-ಸಹಾನುಭೂತಿಯನ್ನು ಹುಟ್ಟಿಸುವ ಶೈಲಿಯಲ್ಲಿ ಆರಂಭವಾಗುವುದಾದರೂ ಅದು ಈ ಗುರಿ ಸಾಧನೆಯ ಉತ್ಸಾಹದಲ್ಲಿ ವಿವಿಧ ಆಕರಗಳಿಂದ ಹೆಕ್ಕಿ ನಮ್ಮ ಮುಂದೆ ಒಟ್ಟುವ ಮಾಹಿತಿ ರಾಶಿ ಈ ಗುರಿಯ ದಾರಿ ತಪ್ಪಿಸಿ ಸಾವರ್ಕರ್ ಅವರ ಒಟ್ಟು ವ್ಯಕ್ತಿತ್ವದ -ಪುಸ್ತಕದ ಉಪಶೀರ್ಷಿಕೆ ಹೇಳುವಂತೆ ಕೇವಲ ಹಿಂದುತ್ವದ ಜನಕನದ್ದಲ್ಲ- ಒಂದು ವಸ್ತುನಿಷ್ಠ ವಿಮರ್ಶೆಗೆ ದಾರಿ ಮಾಡಿಕೊಡುವಂತಿದೆ, ಇದು ಈ ಪುಸ್ತಕದ ಹೆಗ್ಗಳಿಕೆಯೂ ಆಗಿದೆ.

ಈ ದೃಷ್ಟಿಯಿಂದ ನೋಡಿದಾಗ ಈ ಪುಸ್ತಕ ಸಾವರ್ಕರ್ ನಂಬಿ ಪ್ರತಿಪಾದಿಸಿದ ತಮ್ಮ ಬದುಕಿನ ತಾತ್ವಿಕತೆಯ ಅವಿಭಾಜ್ಯತೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತುತ್ತದೆ. ಯಾವ

ಪ್ರಭುತ್ವದ ವಿರುದ್ಧ ಸಾವರ್ಕರ್ ಹೋರಾಡಬಯಸಿದ್ದರೋ ಆ ಪ್ರಭುತ್ವದ ಚಾಲಕ ಸ್ಥಳವಾದ ಲಂಡನ್ ನಗರವೇ ಆ ಹೋರಾಟಕ್ಕೆ ಬೆಂಬಲವಾದ ಕಾನೂನುಶಾಸ್ತ್ರವನ್ನು ಕಲಿಯುವ ಮತ್ತು ಪ್ರಭುತ್ವ ವಿರೋಧಿ ರಾಜಕಾರಣದ ಶೈಕ್ಷಣಿಕ ತರಬೇತಿ ಮತ್ತು ಸ್ಫೂರ್ತಿ ಕೇಂದ್ರವೂ ಆಗಿದೆ ಎಂಬ ಸತ್ಯದ ಬೆಳಕಿದ್ದರೂ ಪ್ರಭುತ್ವದ ವಿರುದ್ಧದ ಹೋರಾಟಕ್ಕೆ ವೈಯಕ್ತಿಕ ಕೊಲೆಗಳ ರಾಜಕಾರಣಕ್ಕಿಂತ ಬೇರೆ ಯೋಗ್ಯ ಮಾರ್ಗವಾವುದೂ ಅವರಿಗೆ ಕಾಣಲಿಲ್ಲವೇಕೆ? ಅದೂ ಅದೇ ವೇಳೆಯಲ್ಲಿ, ಅನ್ಯಮಾರ್ಗವೊಂದನ್ನು ಕಂಡುಕೊಂಡಿದ್ದ ಗಾಂಧಿ ಎಂಬ ವ್ಯಕ್ತಿಯೊಂದಿಗೆ ಸಂವಾದ ನಡೆಸಿದ ಮೇಲಾದರೂ? ಎಂಬುದು ಮೂಲ ಪ್ರಶ್ನೆ. ಸಾವರ್ಕರ್ ಅವರ ದೇಶಪ್ರೇಮವನ್ನು ಯಾರೂ ಪ್ರಶ್ನಿಸಲಾರರಾದರೂ ಅದು ವಿಚಾರ ಅಥವಾ ಭಾವನೆಗಿಂತ ಹೆಚ್ಚಾಗಿ ಉನ್ಮಾದವಾಗಿತ್ತೇ ಎಂಬ ಪ್ರಶ್ನೆಯೂ ಇಲ್ಲಿ ಏಳುತ್ತದೆ. ಏಕೆಂದರೆ, ಈ ಪುಸ್ತಕವೇ ಹೇಳುವಂತೆ ಅವರು ಬಾಲ್ಯದಲ್ಲೇ ಕೋಮು ಗಲಭೆಯೊಂದರ ಸಂದರ್ಭದಲ್ಲಿ ತಮ್ಮ ಗೆಳೆಯರೊಂದಿಗೆ ಊರಿನ ಮಸೀದಿಯ ಮೇಲೆ ದಾಳಿ ಮಾಡಿದ್ದವರು. ಪ್ಲೇಗ್ ನಿಯಂತ್ರಣ ಕಾರ್ಯದಲ್ಲಿ ಜನರೊಂದಿಗೆ ಒರಟಾಗಿ ನಡೆದುಕೊಂಡನೆಂಬ ಕಾರಣಕ್ಕೆ ಇಂಗ್ಲಿಷ್ ಅಧಿಕಾರಿಯೊಬ್ಬನನ್ನು ಗುಂಡಿಕ್ಕಿ ಕೊಂದ ಹಂತಕನ ಬಗ್ಗೆ ಬಾಲ ಸ್ತುತಿ ಗೀತೆ ಬರೆದವರು.

ಮುಂದಿನ ಪ್ರಶ್ನೆ, ಇಷ್ಟೆಲ್ಲ 'ಸಾಹಸ'ಗಳನ್ನು ಮೆರೆದು ಪ್ರಭುತ್ವದ ಕೈಗೆ ಸಿಕ್ಕಿಹಾಕಿಕೊಂಡಾಗ ಅದೇ ಪ್ರಭುತ್ವ ಕಲಿಸಿದ ಇಂತಹ ಸಾಹಸಗಳ ವಿರುದ್ಧದ ಕಾನೂನುಗಳನ್ನು ಬಳಸಿ ತಪ್ಪಿಸಿಕೊಳ್ಳಲೆತ್ನಿಸುವುದು ಎಷ್ಟು ನೈತಿಕ? ಎಂಬುದು. ಹಾಗೇ, ಯಾವ ಪ್ರಭುತ್ವದ ವಿರುದ್ಧ 'ವೀರತ್ವ' ಮೆರೆದು ಸೆರೆಮನೆಗೆ ಸೇರಿದರೋ ಆ ಪ್ರಭುತ್ವದ ನಮ್ರ ಸೇವಕನಾಗಿ ಬದುಕುವುದಾಗಿ ಕ್ಷಮಾಪಣಾ ಪತ್ರಗಳನ್ನು ಬರೆದುಕೊಟ್ಟು ತನ್ನ ಸಹ ಬಂದಿಗಳ ವಿರೋಧಗಳ ನಡುವೆಯೂ ಬಿಡುಗಡೆ ಹೊಂದುವುದನ್ನು ಏನೆಂದು ಕರೆಯಬಹುದು? ಸೆರೆಮನೆಯಲ್ಲಿ ಶಿಕ್ಷೆ ತೀರಾ ಯಾತನಾಮಯವಾಗಿತ್ತು ಎನ್ನುವ ಅವರು ಮತ್ತು ಸಾವರ್ಕರ್ ಅವರ ಸಮರ್ಥಕರು ಪ್ರಭುತ್ವಕ್ಕೆ ಹೀಗೆ ಶರಣಾಗದ ಹೋರಾಟಗಾರರ ಬಗ್ಗೆ ಏನು ಹೇಳುತ್ತಾರೆ? ಅಪರಾಧ ದಂಡ ಸಂಹಿತೆಯನ್ನೇ ವಿಶೇಷವಾಗಿ ಅಧ್ಯಯನ ಮಾಡಿದ್ದ ಸಾವರ್ಕರ್ ಅವರಿಗೆ ತಾವು ಮಾಡುತ್ತಿದ್ದ ಕೃತ್ಯಗಳಿಗೆ ಯಾವ ತರಹದ ಶಿಕ್ಷೆ ಎಂಬುದು ಮೊದಲೇ ಗೊತ್ತಿರಲಿಲ್ಲವೆ? ಅಥವಾ ಇದಕ್ಕೆ ಅವರು ಮತ್ತು ಅವರ ಸಮರ್ಥಕರು ಹೇಳುವ ಇನ್ನೊಂದು ಕಾರಣವಾದ ಸೆರೆಮನೆಯ ಹೊರಗೆ ಅವರು ಮಾಡಬೇಕಾದ 'ಕರ್ತವ್ಯ'ಗಳಿದ್ದವು ಎಂಬುದನ್ನು ಗಂಭೀರವಾಗಿ ಪರಿಶೀಲಿಸಿ ನೋಡಿದರೆ, ಅವರು ಸೆರೆಮನೆಯ ಹೊರಗೆ ಬಂದು ಮಾಡಿದ್ದಾದರೂ ಏನು? ಮುಸ್ಲಿಮರನ್ನು 'ಅನ್ಯ'ರೆಂದು ವಿಂಗಡಿಸಿದ 'ಹಿಂದುತ್ವ' ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿ ಜಿನ್ನಾರ ದ್ವಿರಾಷ್ಟ್ರದ ಪ್ರಮೇಯವನ್ನು ಬಲಗೊಳಿಸುವ ಮೂಲಕ ದೇಶವಿಭಜನೆಗೆ ದಾರಿ ಮಾಡಿಕೊಟ್ಟದ್ದು ಮತ್ತು ಗಾಂಧಿಯನ್ನು ಕೊಂದ ಗೋಡ್ಸೆಯನ್ನು ಸಿದ್ಧಾಂತ, ಹಣಕಾಸು ಮತ್ತು ಸಲಹೆ-ಸಹಕಾರಗಳ ಮೂಲಕ ಪೋಷಿಸಿದ್ದರ ಹೊರತಾಗಿ?

ಕಾಂಗ್ರೆಸ್‌ನ ಗೋಪಾಲಕೃಷ್ಣ ಗೋಖಲೆಯವರನ್ನು ಸಣ್ಣಪುಟ್ಟ ಅನುಗ್ರಹಗಳಿಗಾಗಿ ಕಾಯುತ್ತಿರುವ ಪ್ರಭುತ್ವ ನಿಷ್ಠರು ಎಂದು ವ್ಯಂಗ್ಯವಾಡುತ್ತಾ ಸ್ವರಾಜ್ಯ ಈಗಿಂದೀಗಲೇ ದೊರಕಬೇಕೆಂದು ವಾದಿಸುತ್ತಾ ತಮ್ಮ 'ಕ್ರಾಂತಿಕಾರಿ' ಹಿಂಸಾ ಮಾರ್ಗವನ್ನು ಸಮರ್ಥಿಸಿಕೊಳ್ಳುತ್ತಿದ್ದ ಸಾವರ್ಕರ್ 'ಭಾರತ ಬಿಟ್ಟು ತೊಲಗಿ' ಚಳುವಳಿಯ ಹೊತ್ತಿಗೆ ಈಗ ಸ್ವರಾಜ್ಯಕ್ಕೆ ಅವಸರವಿಲ್ಲ ಎಂದು ವಾದಿಸತೊಡಗಿ, ಆಗ ಕಾಂಗ್ರೆಸ್ ಅಧಿಕಾರ ತ್ಯಜಿಸಿದ ಪ್ರಾಂತ್ಯಗಳಲ್ಲಿ ಜಿನ್ನಾರೊಂದಿಗೆ ಸೇರಿ ತಮ್ಮ ಹಿಂದೂ ಮಹಾಸಭಾದ ಬೆರಳೆಣಿಕೆಯ ಶಾಸಕರೊಂದಿಗೆ ಮುಸ್ಲಿಂ ಲೀಗ್ ಜೊತೆ ಸರ್ಕಾರ ರಚಿಸಲು ಹಿಂದೆಗೆಯುವುದಿಲ್ಲ. ಹೀಗೆ ಸಾವರ್ಕರ್ ಅವರ ರಾಜಕಾರಣಕ್ಕೆ ಗಾಂಧಿ ವಿರೋಧ ಹೊರತಾಗಿ ಇನ್ನಾವ ತಾತ್ವಿಕತೆಯೂ ಇದ್ದಂತೆ ಕಾಣುವುದಿಲ್ಲ. ಈ ವಿರೋಧಕ್ಕೂ ಗಾಂಧಿ ತಮ್ಮ ಅಹಿಂಸಾತ್ಮಕ ನೀತಿಯಿಂದ ಹಿಂದೂಧರ್ಮದ ಪೌರುಷತ್ವವನ್ನು ನಾಶಮಾಡುತ್ತಿದ್ದಾರೆ ಎಂಬುದೇ ಆಗಿದ್ದಂತೆ ತೋರುತ್ತದೆ.

ತಮ್ಮ ರಾಜಕಾರಣದ ಭಾಗವಾಗಿದ್ದ ರಾಜಕೀಯ ಕೊಲೆಗಳನ್ನು ಹಿಂದೂ ಪುರಾಣಗಳ ರಾಕ್ಷಸ ವಧೆಗಳ ಕಥೆಗಳ ಮೂಲಕ ಸಮರ್ಥಿಸಿಕೊಳ್ಳುತ್ತಿದ್ದ ಮತ್ತು ಸಿಪಾಯಿ ದಂಗೆಯನ್ನು ಹಿಂದೂ-ಮುಸ್ಲಿಮರಿಬ್ಬರೂ ಸೋದರರಂತೆ ಸೇರಿ ನಡೆಸಿದ್ದ ಪ್ರಥಮ ಸ್ವಾತಂತ್ರ್ಯ ಹೋರಾಟವೆಂದು ಬಣ್ಣಿಸಿ ಈ ದಂಗೆಗೆ ಹೊಸ ವ್ಯಾಖ್ಯಾನ ನೀಡಿ ಪುಸ್ತಕ ಬರೆದಿದ್ದ ಸಾವರ್ಕರ್ ಬ್ರಿಟಿಷ್ ಪ್ರಭುತ್ವಕ್ಕೆ ಶರಣಾಗಿ ಸೆರೆಮನೆಯಿಂದ ಬಿಡುಗಡೆಯಾಗಿ ಬಂದಮೇಲೆ 'ಹಿಂದೂಗಳ ಮಿಲಿಟರೀಕರಣ' ಮತ್ತು 'ದೇಶದ ಕೈಗಾರಿಕೀಕರಣ' ಎಂಬೆರಡು ತತ್ವಗಳ ಆಧಾರದ ಮೇಲೆ ಗೋಪೂಜೆ-ಗೋ ರಕ್ಷಣೆ, ಯಾಗ ಪೂಜೆ-ಪುನಸ್ಕಾರ ಇತ್ಯಾದಿ ವಿಧಿ ಕರ್ಮಗಳನ್ನು ಲೇವಡಿ ಮಾಡುವ ಪ್ರಖರ ನಿರೀಶ್ವರವಾದಿ 'ಹಿಂದುತ್ವ'ದ ಸೌಧ ನಿರ್ಮಿಸಿದ್ದರ ಹಿಂದಿನ ತರ್ಕವಾದರೂ ಏನು? ಸೆರೆಮನೆಯಲ್ಲಿ ತಮಗೆ ಅಸಹನೀಯ ಕಿರುಕುಳ ಕೊಟ್ಟ ಒಂದಿಬ್ಬರು ಕೈದಿ ಮೇಲ್ವಿಚಾರಕರು ಮುಸ್ಲಿಮರಾಗಿದ್ದುದೇ ಕಾರಣವೆಂದು ಹೇಳಲಾಗುತ್ತದೆ. ಆದರೆ ಇದೊಂದೇ ಈ ಮೂಲಭೂತ ಪರಿವರ್ತನೆಗೆ ಕಾರಣವೆಂದು ನಂಬುವುದು ಕಷ್ಟ. ಮತ್ತೆ, ಗಾಂಧಿ ಪ್ರತಿಪಾದಿಸುತ್ತಿದ್ದ ಹಿಂದೂ-ಮುಸ್ಲಿಂ ಐಕ್ಯತೆಯ ವಿರುದ್ಧದ ರಾಜಕಾರಣದ ಮೂಲಕ ಮಾತ್ರ ತಮ್ಮ ರಾಜಕಾರಣದ ವಿಶಿಷ್ಟತೆಯನ್ನು ಸ್ಥಾಪಿಸಬಹುದೆಂದು ಅವರು ಭಾವಿಸಿದ್ದರೂ ಆಶ್ಚರ್ಯವಿಲ್ಲ.

ಸಾವರ್ಕರ್ ಅವರು ದೇಶಭಕ್ತಿಯ ಅಭಿವ್ಯಕ್ತಿಗಾಗಿ ಆರಿಸಿಕೊಂಡಿದ್ದ ಹಿಂಸೆ, ಅದರ ಗುರಿಗಳ ಜೊತೆಗೇ ನಿರಪರಾಧಿಗಳು ಬಲಿಯಾಗುತ್ತಿದ್ದರೂ ಮತ್ತು ಅದರ ತರ್ಕ ತನ್ನ ಮಾರ್ಗದಿಂದ ಒಂಚೂರು ಅಲುಗಾಡಿದ ತನ್ನ ಸಹವರ್ತಿಗಳನ್ನೂ (ವಿವಾಹ ಬಯಸಿದ ಲೇಖಕ ಯಶಪಾಲರನ್ನು) ಕೊಲ್ಲಬಯಸುವ ಮಟ್ಟ ತಲುಪಿದರೂ ಅದರ ಕುರುಡತನವನ್ನು ಮನಗಾಣಲಾಗದಿದ್ದುದಕ್ಕೆ ಅದು ಉನ್ಮಾದವೇ ಆಗಿದ್ದುದು ಕಾರಣವಿರಬೇಕು. ಇದರ ಹಿಂದೆ ಅವರು ಬಾಲ್ಯದಲ್ಲಿ ಓದಿದ ವಿಷ್ಣುಕೃಷ್ಣರ ಧಾರ್ಮಿಕ ರಾಷ್ಟ್ರೀಯತೆಯನ್ನು ಬೋಧಿಸುವ 'ನಿಬಂಧಮಾಲಾ'ದ ಪ್ರಭಾವವೂ ಇರಬಹುದು. ಜೊತೆಗೆ ಅವರು ಎಂದೂ-ಅವರ 'ಮಿತ್ರಮೇಳ'ದ ಸಮಯದಲ್ಲೂ-ಜನಸಾಮಾನ್ಯರ ಕಷ್ಟ ಸುಖಗಳೊಂದಿಗೆ ಬೆರೆತ, ಚಿಂತಿಸಿದ ಯಾವ ಸಂದರ್ಭವೂ ಇಲ್ಲಿ ಕಾಣಸಿಗುವುದಿಲ್ಲ. ಹಾಗಾಗಿ ಅವರಿಗೆ ದೇಶವೆಂದರೆ ಈ ನೆಲವೆಂದಷ್ಟೇ-'ಭಾರತ ಮಾತೆ', 'ಪವಿತ್ರಭೂಮಿ', 'ಪುಣ್ಯಭೂಮಿ' ಇತ್ಯಾದಿ-ಕಂಡಿರಬೇಕು. **ಇದೇ** ಅವರನ್ನು ಕೊನೆಯ ವರ್ಷಗಳಲ್ಲಿ ಬರೆದ 'ಸಹಾ ಸೋನೇರಿ ಪಾಣೆ' ಎಂಬ ಪುಸ್ತಕದಲ್ಲಿ ಇತಿಹಾಸ ಸನ್ನಿಗೆ ಒಳಗಾದವರ ತಣಿಯದ ಸೇಡಿನ ರೂಪದಲ್ಲಿ ಇಂತಹ ಕರೆಯಾಗಿ ಹರಿದಿದೆ: 'ನಮ್ಮ ಎದುರಾಳಿಗಳ ಪೂಜಾಸ್ಥಳಗಳನ್ನು ಧ್ವಂಸ ಮಾಡಬೇಕು, ಅವರನ್ನೆಲ್ಲ ಸಾಮೂಹಿಕವಾಗಿ ಕೊಲ್ಲಬೇಕು ಮತ್ತು ಅವರ ಮಹಿಳೆಯರನ್ನು ಕೆಡಿಸಬೇಕು'

ತಮ್ಮ ಬದುಕಿನ ಕೊನೆಯ ಘಟ್ಟದಲ್ಲಿ ಸಾವರ್ಕರ್ ವ್ಯಕ್ತಪಡಿಸಿದ ಇಂತಹ ಹಲವಾರು ವಿಕ್ಷಿಪ್ತ-ವಿಲಕ್ಷಣ ನಿಲುವುಗಳಿಂದಾಗಿ ಒಂಟಿಯಾಗಿ ಹೋದ ಸಾವರ್ಕರ್ ಅವರ ಸಾವು ಸಹಜವಾಗಿಯೇ ಯಾತನಾಮಯವಾಗಿತ್ತೆಂದು ವಿವರಿಸುವ ಈ ಪುಸ್ತಕವೂ ಆರಂಭದಲ್ಲಿ ಬಲವಾಗಿ ಕೈಹಿಡಿದಂತೆ ತೋರುವ ತನ್ನ ನಾಯಕನನ್ನು ನಿರಾಶೆಯಿಂದ ಕೈಬಿಟ್ಟಂತೆ ತೋರುತ್ತದೆ. ಈ ಗೊಂದಲದಲ್ಲಿ ನಮ್ಮ ಸ್ವಾತಂತ್ರ್ಯ ಹೋರಾಟದ ಚರಿತ್ರೆ ಅಲ್ಲಲ್ಲಿ ಜಖಂಗೊಂಡಂತಿದ್ದು ಅದು ಗಾಂಧಿಯವರ ಚಿತ್ರಕ್ಕೂ ಹಾನಿ ಮಾಡಿದೆ; ಆದರೆ ಅದನ್ನು ಅದು ತಡೆದುಕೊಳ್ಳಬಲ್ಲಷ್ಟು.

ಈ ಪುಸ್ತಕದ ಎರಡು ದೊಡ್ಡ ಕೊರತೆಗಳೆಂದರೆ ಸಾವರ್ಕರ್ ಅವರ ವಿವಾದಾತ್ಮಕತೆಗೆ ಕಾರಣವಾಗಿರುವ ಅವರ ಯಾವೊಂದೂ ಕ್ಷಮಾಪಣಾ ಪತ್ರದ ಪೂರ್ಣ ಪಾಠವನ್ನು ಕೊಡದಿರುವುದು ಮತ್ತು ಅವರನ್ನು ಖ್ಯಾತ ಮರಾಠಿ ಸಾಹಿತಿ ಎಂದು ಹಲವು ಸಂದರ್ಭಗಳಲ್ಲಿ ಗುರುತಿಸಿರುವ ಈ ಪುಸ್ತಕದಲ್ಲಿ ಅವರದೊಂದು ಸಣ್ಣ ಪದ್ಯವೂ ಇಲ್ಲದಿರುವುದು. ಮಿಕ್ಕಂತೆ ಅನುವಾದ ಸರಳವಾಗಿದ್ದರೂ ಇಲ್ಲಿ ಬಳಕೆಯಾಗಿರುವ ವಾಕ್ಯರಚನಾ ಶೈಲಿಯ ಏಕತಾನತೆಯಿಂದಾಗಿ ಓದಿನ ಸುಗಮತೆಗೆ ಭಂಗ ತರುತ್ತದೆ.

**-ಡಿ.ಎಸ್. ನಾಗಭೂಷಣ**

ಪು: **ಕೃಷಿಯೊಡಲು** (ಕೃಷಿಕರ ಕಥನ) ಸಂ: **ಜಿ.ಎಸ್ ರಾಜೇಂದ್ರ, ಅಸುರನಾಡು, ಡಾ.ಬಿ. ಗಣಪತಿ ಉತ್ತುಂಗ, ಶಿವಾನಂದ ಕರ್ಕಿ** ಪ್ರ: **ಐಬಿಎಚ್ ಪ್ರಕಾಶನ**, ಬೆಂಗಳೂರು(೯೮೪೫೦೭೦೬೧೩) ಪು: ೩೦೦ ಬೆ: **ರೂ.೩೦೦/-**

## ಕೃಷಿ ಸಾಧನೆ-ಸಾಧಕರ ವಿಶಿಷ್ಟ ಕಥನ




**ಇ**ದೊಂದು ವಿಶಿಷ್ಟ ಕೃತಿ. ವಿಭಿನ್ನ ಪ್ರಯತ್ನ. ಸಾಹಿತಿಗಳು, ಕಲಾವಿದರು, ಸಂಗೀತಗಾರರು, ಹೋರಾಟಗಾರರು, ರಾಜಕಾರಣಿಗಳು ಇನ್ನೂ ಮುಂತಾದವರ ಕುರಿತಾದ ಪರಿಚಯದ ಪುಸ್ತಕ ಓದಿದ್ದೇವೆ, ನೋಡಿದ್ದೇವೆ. ಆದರೆ ಈ 'ಕೃಷಿಯೊಡಲು' ಪುಸ್ತಕ ಕೃಷಿ ಪಯಣದಲ್ಲಿ ತೊಡಗಿರುವ ರೈತಾಪಿ ಜನರನ್ನು ಪರಿಚಯಿಸುತ್ತದೆ. ಅಂದರೆ 'ಸಾಮಾನ್ಯ'ರ ಪರಿಚಯ ಇಲ್ಲಿದೆ. ಇದೊಂದು ಕೃಷಿಕರ ಕಥನ. ತೀರ್ಥಹಳ್ಳಿ ತಾಲ್ಲೂಕಿನ ೫೩ ಕೃಷಿ ಕುಟುಂಬಗಳ ಬದುಕು, ಸಾಧನೆ, ಸಂಕಟ, ಸಂಭ್ರಮ ಸಾರ್ಥಕತೆಯ ಚಿತ್ರಣ ಇಲ್ಲಿದೆ. ಕೃಷಿಕರು, ಪತ್ರಕರ್ತರು, ಉಪನ್ಯಾಸಕರು ಬರೆದ ಈ ಬರವಣಿಗೆಯಲ್ಲಿ ಕೃಷಿ ಚಟುವಟಿಕೆಯ ವೈವಿಧ್ಯತೆಯನ್ನು ಕಾಣಿಸಲಾಗಿದೆ.

ರೈತಾಪಿ ಬದುಕಿನ ಕುರಿತು ಎಲ್ಲೆಡೆಯೂ ನಿರಾಶೆಯ ಮಾತುಗಳನ್ನು ಕೇಳುತ್ತಿರುವ ಸಂದರ್ಭವಿದು. ಕೃಷಿ ಬಿಕ್ಕಟ್ಟು ಎಂಬುದು ಅತಿ ಹೆಚ್ಚು ಚರ್ಚೆಗೊಳಗಾಗುತ್ತಿರುವ ಪದ. ಆಳುವ ಸರ್ಕಾರಗಳ ದುರುಳ ನೀತಿ ಇದಕ್ಕೆಲ್ಲ ಎಷ್ಟು ಕಾರಣವೋ ಕೃಷಿಕ ಸಮುದಾಯವು ಪಾರಂಪರಿಕ ಕೃಷಿಯನ್ನು ಜೀವನ ವಿಧಾನವಾಗಿ ಉಳಿಸಿಕೊಳ್ಳದೆ ತಮ್ಮದಲ್ಲದ ಬದುಕಿನತ್ತ ಮೋಹಗೊಂಡು ತಮ್ಮ ಸರಳ-ಸಹಜ ಜೀವನ ಕ್ರಮವನ್ನು ಉಪೇಕ್ಷಿಸುವಂತಾಗಿರುವುದೂ ಕಾರಣ. ಈ ಪುಸ್ತಕದಲ್ಲಿ ಕೃಷಿ ಬದುಕಿನ ಸಹಜ ಜೀವನ ಕ್ರಮದ ಪರಿಚಯವೂ ಇದೆ. ಜೊತೆಗೆ ಕಾಡು ಗುಡ್ಡ ಬೆಟ್ಟ ಗದ್ದೆಗಳನ್ನೇ ಅಡಿಕೆ ತೋಟ ಮಾಡಿಕೊಂಡವರ, ಅಡಿಕೆ ತೋಟದ ಭರ್ಜರಿ ಆದಾಯವಿದ್ದೂ ಹೋಂ ಸ್ಟೇ, ರೆಸಾರ್ಟ್‌ಗಳನ್ನು ಮಾಡಿಕೊಂಡು ಆದಾಯ ಹೆಚ್ಚಿಸಿಕೊಳ್ಳುತ್ತಿರುವವರ ಪರಿಚಯವೂ ಇದೆ. ಅಂದರೆ ರೈತಾಪಿ ಜೀವನ ಕ್ರಮವು ಹೊರಳು ಹಾದಿಯಲ್ಲಿರುವುದನ್ನು, ಹೇಗೆಲ್ಲ ಬದಲಾಗುತ್ತಿದೆ ಎಂಬುದನ್ನು ಕೂಡ ಪುಸ್ತಕ ತೆರೆದಿಡುತ್ತದೆ.

ಮಲೆನಾಡಿನ ಒಂದು ನಿರ್ದಿಷ್ಟ ಪರಿಸರದ ಕೃಷಿಕರ ಕಷ್ಟ ಸುಖ ತೆರೆದಿಡುವ ಪ್ರಯತ್ನವಾಗಿ 'ಕೃಷಿಯೊಡಲು' ವಿಶೇಷ ಪ್ರಯತ್ನವಾಗಿದೆ. ಮೂಲತಃ ಕೃಷಿಕರಾಗಿರುವ ಸಾಮಾಜಿಕವಾಗಿ ತೊಡಗಿಸಿಕೊಂಡ ಒಂದಿಷ್ಟು ಮಂದಿ 'ಕೃಷಿಯೊಡಲ ಕೂಟ' ಎಂಬ ವೇದಿಕೆಯನ್ನು ಮಾಡಿಕೊಂಡು ತೀರ್ಥಹಳ್ಳಿ ತಾಲ್ಲೂಕಿಗೆ ಸೀಮಿತವಾಗಿ ಕೃಷಿ ಸಾಧಕರನ್ನು ಪರಿಚಯಿಸುವ ಕೆಲಸವನ್ನು ಈ ಪುಸ್ತಕದ ಮೂಲಕ ಮಾಡಿದ್ದಾರೆ. ಕೃಷಿಕರ ಕಥನವಾಗಿರುವ ಪುಸ್ತಕದಲ್ಲಿ ಕೃಷಿಕರ ಪರಿಚಯ ಮತ್ತು ಕೃಷಿ ಬಿಕ್ಕಟ್ಟಿನ ಚರ್ಚೆ ಎರಡೂ ಜೊತೆಗೂಡಿದೆ. ಇವತ್ತಿನ ಕೃಷಿ, ಬಿಕ್ಕಟ್ಟನ್ನು ದಾಟಿ ಹೋಗಲು ಮಾಡುತ್ತಿರುವ ಪ್ರಯತ್ನಗಳ ಚಿತ್ರಣವೂ ಇಲ್ಲಿದೆ.

ತೀರ್ಥಹಳ್ಳಿ ತಾಲ್ಲೂಕು ಅಡಿಕೆ ಬೆಳೆಗೆ ಹೆಸರಾದ ಮಲೆನಾಡು ಪ್ರದೇಶ. ಅತಿಯಾದ ಮಳೆ ಬೀಳುವುದರಿಂದ ಭತ್ತದ ಕೃಷಿ ಕೂಡ ಕಷ್ಟದಾಯಕ. ಇಳುವರಿಯೂ ಕಡಿಮೆ. ಇಲ್ಲಿ ಪರಿಚಯಿಸಲ್ಪಡುತ್ತಿರುವ ಕೃಷಿಕರೆಲ್ಲರೂ ಅಡಿಕೆ ಬೆಳೆಗಾರರೇ ಆಗಿದ್ದಾರೆಂಬುದು ಗಮನಾರ್ಹ. ಭತ್ತದ ಗದ್ದೆಗಳನ್ನು ಅಡಿಕೆ ತೋಟವನ್ನಾಗಿಸಿ ಶ್ರೀಮಂತರಾದವರನ್ನು ಸಾಧಕರೆಂಬಂತೆ ಪರಿಚಯಿಸುವ ಕೆಲವು ಲೇಖನಗಳು ಹೊಗಳಿಕೆಯ ಭಾರದಿಂದ ನಲುಗಿ ಹೋಗಿದೆ. ಜೊತೆಗೇ ಮಲೆನಾಡಿಗೆ ಅಪರಿಚಿತವಾಗಿದ್ದ ಹೊಸ ಹೊಸ ಆರ್ಕಿಡ್ ಹೂವು, ಹಣ್ಣು, ತರಕಾರಿ ಇತ್ಯಾದಿ ಬೆಳೆದು ಮಾರುಕಟ್ಟೆ ಕಂಡು ಕೊಂಡವರು, ತೋಟ-ಗದ್ದೆಯಲ್ಲಿ ಗೆಯ್ಮೆ ಮಾಡುತ್ತಲೇ ಕೃಷಿಯೇತರ ಚಟುವಟಿಕೆಗಳಲ್ಲಿ ತೊಡಗಿ ಪರ್ಯಾಯವನ್ನು ಹುಡುಕಿದವರು, ಕೃಷಿಗೆ ಪೂರಕವೆನ್ನಿಸುವಂತಹ ಇನ್ನಿತರೆ ಚಟುವಟಿಕೆಯಲ್ಲಿ ತೊಡಗಿದವರು, ಜೀತ ಮಾಡುತ್ತಿದ್ದವರು ಕೃಷಿ ಕೂಲಿಕಾರರಾಗಿ ಬದುಕು ಆರಂಭಿಸಿ ತೋಟ ಗದ್ದೆ ಮಾಡಿ ಕುಟುಂಬವನ್ನು ನೆಮ್ಮದಿಯಾಗಿಟ್ಟವರು, ತಾಂತ್ರಿಕ ನೈಪುಣ್ಯತೆಯಿಂದ ಕೃಷಿ ಚಟುವಟಿಕೆ ಸುಲಭಗೊಳಿಸಿಕೊಂಡವರು.... ಹೀಗೆ ಹಲವು ತೆರೆನಾದ ವ್ಯಕ್ತಿತ್ವಗಳ ಅನಾವರಣವೂ ಈ ಪುಸ್ತಕದಲ್ಲಿವೆ. ಕೃಷಿ ಬದುಕಿನ ಹೊಸತನವನ್ನು ಇವು ತೆರೆದಿಡುತ್ತವೆ. ಹೀಗೆ ಪರಿಚಯಿಸಲ್ಪಡುವ ಬಹುತೇಕರದು ಸಾಹಸಿ ಜೀವನವೇ ಎಂಬುದರಲ್ಲಿ ಎರಡು ಮಾತಿಲ್ಲ.

ಇಲ್ಲಿರುವ ಕೃಷಿಕರು ಯಾರೂ ನಿರಾಶೆಯ ದನಿಯಲ್ಲಿ ಮಾತನಾಡಿಲ್ಲ. ಬಹುತೇಕರು ಕೃಷಿಯನ್ನು, ಅದಕ್ಕೆ ಪಡುವ ಶ್ರಮವನ್ನು ಸುಖಿಸುವವರೇ ಆಗಿದ್ದಾರೆ. 'ನಾವು ಕಷ್ಟ ಪಡುತ್ತಿಲ್ಲ, ಶ್ರಮಪಡುತ್ತಿದ್ದೇವೆ. ಇದು ನಮ್ಮನ್ನು ಮಾನಸಿಕವಾಗಿ-ದೈಹಿಕವಾಗಿ ಆರೋಗ್ಯವಾಗಿಟ್ಟಿದೆ. ಹಾಸಿಗೆ ಇದ್ದಷ್ಟೆ ಕಾಲು ಚಾಚುವ ಮಿತಿಯರಿತು ಬಾಳುವುದನ್ನು ಕಲಿಸಿದೆ' ಎಂಬುದಾಗಿ ಮಾತನಾಡುವ ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಕಾಣುತ್ತಾರೆ. ಕೃಷಿಕರು ತಮ್ಮ ಪ್ರಯೋಗಶೀಲತೆಯಲ್ಲಿ ಎದುರಿಸಿದ ಕಷ್ಟಗಳ ಬಗ್ಗೆ ಹೇಳಿಕೊಳ್ಳುತ್ತಲೇ ಅದನ್ನು ದಾಟಿ ಬಂದಾಗಿನ ಸಂಭ್ರಮವನ್ನು ಹೇಳಿಕೊಂಡಿದ್ದಾರೆ. ಗಮನಾರ್ಹವೆಂದರೆ ಶ್ರಮದ ಬದುಕಿನ ಸೌಂದರ್ಯವನ್ನು, ದುರಾಸೆಗಳಿಲ್ಲದೆ ಬದುಕುವ ಅಗತ್ಯವನ್ನು, ಆಸೆಗಳಿಗೆ ಹಾಕಿಕೊಳ್ಳಬೇಕಾದ ಮಿತಿಗಳ ಕುರಿತಾಗಿಯೂ ಹಲವು ಕೃಷಿಕರು ಮುಕ್ತವಾಗಿ ಮಾತನಾಡಿದ್ದಾರೆ. ಆರ್ಥಿಕ ಲಾಭ ನಷ್ಟ, ಪ್ರಕೃತಿಯ ಮುನಿಸು, ಪರಿಸರದಲ್ಲಾಗುತ್ತಿರುವ ಬದಲಾವಣೆ, ಸಾಮಾಜಿಕ ವ್ಯವಸ್ಥೆಯ ಪಲ್ಲಟಗಳು ತಮ್ಮ ಕೃಷಿ ಬದುಕನ್ನು ಮಾಗಿಸಿರುವ ಬಗ್ಗೆ ಮಾತನಾಡಿದ್ದಾರೆ. ಜೋಸೆಫ್ ಚಾಕೊ, ತಿಮ್ಮಪ್ಪ ಪುಟ್ಲೊಡ್ಲು, ರವಿಹೆಬ್ಬಾರ್, ಸೀತಾರಾಂ ಕೊಂಬಿನಕೇರಿ, ಉಷಾಜೋಯ್ಸ್, ಸಿದ್ದಪ್ಪ, ನಟೇಶ್ ಉಡುಪ, ದೇವಣ್ಣ ಮಕ್ಕಿಬೈಲು, ಹರಳಿಮಠ ಕೃಷ್ಣಕುಮಾರ್, ಹೆಚ್.ಪಿ.ವಿಶ್ವಕಾಂತ್, ಕನ್ನಂಗಿ ಶೇಷಾದ್ರಿ ಮತ್ತು ಆಶಾ ಶೇಷಾದ್ರಿ, ಕಡಿದಾಳ್ ದಯಾನಂದ, ಇರುವತ್ತಿ ದಿವಾಕರ್, ರಘುನಾಥ ಗರಗೇಶ್ವರ ಮೊದಲಾದವರ ಕೃಷಿ ಬದುಕು, ಅವರ ಪ್ರಯೋಗಶೀಲತೆ, ಕೃಷಿಯನ್ನು ನೋಡುವ ವಿಧಾನ ಎಲ್ಲವೂ ಆಪ್ತವಾಗಿದೆ. ಕೃಷಿಯಲ್ಲಿ ತೊಡಗಿದವರಿಗೂ, ಕೃಷಿಕರಾಗಲು ಹೊರಟವರಿಗೂ ಈ ಕೆಲವು ವ್ಯಕ್ತಿ ಚಿತ್ರಗಳು ಆತ್ಮ ವಿಶ್ವಾಸ ತುಂಬುತ್ತವೆ.

ಇವತ್ತಿನ ಸಂದರ್ಭದಲ್ಲಿ ಆಹಾರಬೆಳೆ, ತರಕಾರಿ ಮತ್ತು ಹಣ್ಣಿನ ಬೆಳೆಯ ಕೃಷಿ ಸವಾಲಿನದ್ದು. ಅಂತಹ ಕೃಷಿಯಲ್ಲಿ ತೊಡಗಿದವರೇ ನಿಜವಾದ ಸಾಧಕರು. ಕೃಷಿಯೊಡಲು ಕೂಟ ಮುಂದೆ ಕೃಷಿ ಕಥನ ಪ್ರಕಟಣೆ ಮಾಡುವಾಗ ಇದರತ್ತ ಒತ್ತು ಕೊಡುವುದು ಒಳಿತು. ಪರಿಚಯಿಸಲ್ಪಡುವಾಗ ಹೊಗಳಿಕೆಯ ಭಾರದಲ್ಲಿ ವ್ಯಕ್ತಿಗಳ ಸಾಧನೆ ಮತ್ತು ಸಾಧನೆಯ ಹಾದಿ ಗೌಣವಾಗದಂತೆ ನೋಡಿಕೊಳ್ಳುವುದು ಅಗತ್ಯ.

**-ಶೃಂಗೇಶ್**

ಪು:**ಊರೆಂಬ ಉದರ** (ಒಂದು ಸಂಕೇತಿ ಗ್ರಾಮದ ವೃತ್ತಾಂತ) ಲೇ: **ಪ್ರಮೀಳಾ ಸ್ವಾಮಿ** ಪ್ರ: **ಅಕ್ಷರ ಪ್ರಕಾಶನ**, ಹೆಗ್ಗೋಡು ಪು: **೧೯೬** ಬೆ: **ರೂ. ೨೨೦/-**

## ಕಳೆದುಹೋದ ಸಂಕೇತಿ ಪ್ರಮೀಳಾ ಲೋಕದ ನೆನಪುಗಳು




**ಒಂ**ದು ಸಿದ್ಧಮಾದರಿಗೆ ಅಂಟಿಕೊಂಡು, ಅದರ ಪರಿಮಿತಿಯಲ್ಲಿಯೇ ಬರೆಯುವ ವಾಡಿಕೆಗಿಂತ ಭಿನ್ನವಾದ ಪ್ರಕಾರದ ಪುಸ್ತಕ ಇದಾಗಿದೆ. 'ಊರೆಂಬ ಉದರ' ಎಂಬ ಶೀರ್ಷಿಕೆ ಹೊತ್ತ ಈ ಹೊತ್ತಿಗೆ- 'ಒಂದು ಸಂಕೇತಿ ಗ್ರಾಮದ ವೃತ್ತಾಂತ' ಎಂಬ ಉಪನಾಮವನ್ನೂ ಜೊತೆಗಿಟ್ಟುಕೊಂಡಿದೆ.

ಲೇಖಕಿಯು ತಮ್ಮ ಭಾವಕೋಶದಲ್ಲಿ ಹುದುಗಿಸಿಟ್ಟುಕೊಂಡಿದ್ದ ಮಾತುಗಳನ್ನು ಮನಃಪಟಲದಲ್ಲಿ ಒಂದೊಂದಾಗಿ ಮೂಡಿದ ಚಿತ್ರಗಳಂತೆ, ಎಳೆ-ಎಳೆಯಾಗಿ ನಮಗೆ ಹದವಾಗಿ ಬೇಯಿಸಿ, ಘಂ ಎಂಬ ಸುವಾಸನೆಯೊಂದಿಗೆ ಬಡಿಸಿದ್ದಾರೆ. ಇದನ್ನು ಸಂಕೇತಿಗ್ರಾಮದ ವೃತ್ತಾಂತವೆಂದು ಹೇಳಲಾಗದಿದ್ದರೂ, ಲೇಖಕಿಯು ತಮ್ಮ ಮನೋಭಿತ್ತಿಯ ಲೋಕವನ್ನು ಬಿಡಿಸಿಟ್ಟು ಅದನ್ನು ಸಂಕೇತಿ ಗ್ರಾಮದ ವೃತ್ತಾಂತವೆಂದು ಹೆಸರಿಸಿದ್ದಾರೆ. ಬಾಲ್ಯದ ಸವಿನೆನಪುಗಳನ್ನು, ಅಮ್ಮನ ಅಡುಗೆಯ ಪ್ರಪಂಚದೊಡನೆ ಬೆಸೆದು, ರಮ್ಯಗ್ರಾಮವೃತ್ತಾಂತವನ್ನು ಕಟ್ಟಲು ಪ್ರಯತ್ನಿಸಿದ್ದಾರೆ.

ಈ ಪುಸ್ತಕವು ಸಂಕೇತಿ ಕುಟುಂಬಗಳಲ್ಲಿ ಸಾಮಾನ್ಯ ದಿನಗಳಲ್ಲದೆ, ವಿಶೇಷ ಹಬ್ಬ ಹರಿದಿನಗಳಲ್ಲಿ ತಯಾರಿಸುವ ವಿವಿಧ ಸಾಂಪ್ರದಾಯಿಕ ಅಡುಗೆ-ತಿಂಡಿಗಳ ಪಾಕವಿಧಾನಗಳ ಮಾಹಿತಿಯನ್ನು ಒಳಗೊಂಡಿದೆ. ಬೇಸಿಗೆಯ ಮಾವಿನಮಿಡಿ ಉಪ್ಪಿನಕಾಯಿ, ಹಣ್ಣಿನ ಸಂಭ್ರಮ, ಇದರೊಂದಿಗೆ ಲೇಖಕಿಯ ಮಿಡಿಕೀಳುವ ಬಾಲ್ಯಸಾಹಸಗಳು ಓದುಗರನ್ನು ಅವರ ಬಾಲ್ಯದ ದಿನಗಳ ನೆನಪಿನೋಣಿಗೆ ಎಳೆದೊಯ್ಯುತ್ತದೆ. ಸಂಕೇತಿ ಕುಟುಂಬಗಳು, ಸಾಮಾನ್ಯವಾಗಿ ನದೀತಟದಲ್ಲಿ ತಮ್ಮ ವಾಸ್ತವ್ಯ-ನಾಗರೀಕತೆ ಬೆಳೆಸಿರುವುದರಿಂದ, ಹೊಳೆ-ಹರಿಗೋಲು ಅವರ ಬದುಕಿನ ಭಾಗವಾಗಿದೆ. ಒಮ್ಮೆ ಲೇಖಕಿಯು ತನ್ನ ತಾಯಿಯೊಡನೆ ಹೊಳೆದಡದಲ್ಲಿ, ಭೀಕರಮಳೆಯಲ್ಲಿ ಸಿಲುಕಿಕೊಂಡು ತತ್ತರಗೊಂಡಾಗ ಕಾಪಾಡಿದ ಅನ್ವರ್‌ನ ಕಥೆ ಗತಕಾಲದ ಹಳ್ಳಿಯ ರಮ್ಯಚಿತ್ರಣವನ್ನು ನೀಡುತ್ತದೆ. ಲೇಖಕಿಯ ಕುಪ್ಪಹಳ್ಳಿಯಲ್ಲಿಯೂ ಈಗ ರಸ್ತೆಯಾಗಿರುವುದರಿಂದ ಹೊಳೆಯಾತ್ರೆ-ಹರಿಗೋಲಿನ ಅಗತ್ಯವಿಲ್ಲ, ಈ ಸಂಭ್ರಮಗಳೂ ಈಗಿಲ್ಲ.

ಹಬ್ಬ-ಹರಿದಿನಗಳ ಆಚರಣೆ-ಅಂದರೆ, ವಿಶೇಷ ತಿಂಡಿ-ತಿನಿಸುಗಳು, ಹೆಂಗಸರು ಭಾರೀ ಸೀರೆ ಉಟ್ಟು, ಹೂವು ಮುಡಿದು, ದೊಡ್ಡ ಕುಂಕುಮದ ಬೊಟ್ಟು ಇಟ್ಟು, ಕೆನ್ನೆಗೆ ಅರಿಶಿನ ಬಳಿದುಕೊಂಡು ಸಂಭ್ರಮದಿಂದ ಓಡಾಡುವುದಷ್ಟೇ ಕಾಣಿಸುವ ಬಾಲ್ಯದ ದಿನಗಳನ್ನು, ಹಾಗೂ ದಿನಕಳೆದಂತೆ ಹೆಂಗಸರು ಗಾಣದೆತ್ತಿನಂತೆ ಬೆಳಗಿನಿಂದ ರಾತ್ರಿಯವರೆಗೆ ದುಡಿಯುವ ಯಂತ್ರದಂತೆ ಎಂಬುದನ್ನೂ ಲೇಖಕಿ ಗಮನಿಸುತ್ತಾರೆ. ಗೌರಿಹಬ್ಬದ ಸಮಯದಲ್ಲಿ ಅರಿಶಿನ-ಕುಂಕುಮ, ಬಳೆ ಇತ್ಯಾದಿಗಳಿಗೆ ತವರಿನಿಂದ ಬರುವ ಹಣದ ಬಗ್ಗೆ ಕಾತರ, ಇದು ಊರಿನ ಪೋಸ್ಟ್ ಮ್ಯಾನ್ ಹಾಗೂ ಬಳೆಗಾರನೊಂದಿಗಿನ ನಂಟಿನೊಡನೆ ಬೆಸೆದಿರುವುದು-ಇವೆಲ್ಲಾ ನಮ್ಮ ಮನಸ್ಸನ್ನು ತೇವಮಾಡುವ ಸನ್ನಿವೇಶಗಳು. ಹಳ್ಳಿಯ ಸಾಮೂಹಿಕ ಹಬ್ಬಗಳಾದ, ರಾಮನವಮಿ, ನವರಾತ್ರಿ, ದೀಪಾವಳಿ ಆಚರಣೆಗಳು ಎಲ್ಲವೂ ಬಾಲ್ಯದೊಂದಿಗೇ ನಂಟುಹೊಂದಿವೆ. ಹಾಗೆ ನೋಡಿದರೆ ಇಡೀ ಕುಪ್ಪಹಳ್ಳಿಯ ವೃತ್ತಾಂತವು ಲೇಖಕಿಯ ಬಾಲ್ಯ ಹಾಗೂ ಅವರ ತಾಯಿಯ ಸ್ಮೃತಿಯೊಂದಿಗೆ ಬೆಸೆದುಕೊಂಡಿದೆ. ಲೇಖಕಿಯ ತಾಯಿಯ ಹಾಲು, ತುಪ್ಪ ಹೇರಳವಾಗಿದ್ದ ಮನೆಯಲ್ಲಿ ಊರಿನ ಬಾಣಂತಿಯರಿಗೆ ಹಾಲು, ತುಪ್ಪವನ್ನು ಕೊಟ್ಟುಕಳಿಸುವುದು, ಹಳ್ಳಿಯ ವೈದ್ಯೆಯಾಗಿ ಸಣ್ಣ ಪುಟ್ಟ ಔಷಧಗಳನ್ನು ಕೊಡುವುದು, ತರಕಾರಿಗಳ ಬದಲಿಗೆ ಮನೆಯಲ್ಲಿರುವ ನುಚ್ಚನ್ನು ಕೊಡುವುದು, ಹೀಗೆ ದಿವಸವೆಲ್ಲ ಎಡೆಬಿಡದ ಚಟುವಟಿಕೆಗಳಿಂದ ಕೂಡಿದ್ದು ಕ್ರಮೇಣ ಅವರ ಬೆನ್ನು ಬಾಗಲಾರಂಭಿಸಿದಾಗ, ಅದಕ್ಕೆ ತಾವು ಬಾಲ್ಯದಲ್ಲಿ ಬಾಳೆಹಣ್ಣಿನ ಸಿಪ್ಪೆಯ ಮೇಲೆ ಬಿದ್ದಿದ್ದೇ ಕಾರಣ ಎಂದು ಹೇಳುವುದು, ಇತ್ಯಾದಿ ವಿವರಗಳು ನಮ್ಮ ಮನೆಗಳ ಕಥೆ ಎಂಬಂತೆ ತೋರುವುದರಲ್ಲೇನೂ ಆಶ್ಚರ್ಯವಿಲ್ಲ. ಅವರ ತಾಯಿ ಮೈಸೂರಿಗೆ ವಾಸ್ತವ್ಯ ಬದಲಾಯಿಸಬೇಕಾಗಿ ಬಂದು ಅವರು ಎಲ್ಲ ವಿಷಯಗಳಿಗೆ ಬೇರೆಯವರನ್ನು ಅವಲಂಬಿಸುವಂತಾದಾಗ ಉಂಟಾಗುವ ಅಸಹಾಯಕತೆ ಅವರನ್ನು ಕಠಿಣವಾಗಿ ಮಾತಾಡುವಂತೆ, ಜಗಳವಾಡುವಂತೆ ಮಾಡುತ್ತದೆ. ವಿಷಾದದ ಸಂಗತಿಯೆಂದರೆ, ಆಕೆ ತನ್ನ ಪತಿಯಿಂದ ಒಂದೂ ಒಳ್ಳೆಯ ಮಾತನ್ನು ಕೇಳಲಿಲ್ಲ. ಅದನ್ನು ಆಕೆ ನಿರೀಕ್ಷಿಸಿರಲೂ ಇಲ್ಲವೇನೋ?

ಪುಸ್ತಕದ ಕೊನೆಯ ಭಾಗಗಳಲ್ಲಿರುವ ವಿವಿಧ ವ್ಯಕ್ತಿಗಳ ಚಿತ್ರಣಗಳನ್ನು ಪ್ರತ್ಯೇಕವಾಗಿ ನೀಡುವ ಬದಲು, ಮುಖ್ಯ ವಾಹಿನಿಯೊಂದಿಗೆ ಹಾಸುಹೊಕ್ಕಾಗಿ ಬರುವಂತೆ ನಿರೂಪಿಸಿದ್ದರೆ ಚೆನ್ನಾಗಿತ್ತೇನೋ? ಒಬ್ಬ ಮಹಿಳೆ ತನ್ನ ಬಾಲ್ಯದ ನೆನಪುಗಳನ್ನು ತನ್ನ ಪರಿಧಿಯಲ್ಲಿ ಬರುವ ವ್ಯಕ್ತಿಗಳ ಬಾಂಧವ್ಯವನ್ನು, ಹಳ್ಳಿಯ ಲೋಕವನ್ನು, ಪಾಕವಿಧಾನಗಳನ್ನು ವಿವರಿಸುವ ದಾರಿಯಲ್ಲಿ, ತನ್ನ ವಿಶ್ವವನ್ನೇ ತೆರೆದಿಟ್ಟಿರುವ ಪರಿಯೇ ಚೆಂದ!

ಇಡೀ ಬರಹವು ಲೇಖಕಿಯು ಗೆಳತಿಯೊಂದಿಗೆ ತನ್ನ ಕಥನಗಳನ್ನು ಆರಾಮದಲ್ಲಿ ಕೂತು ಆಪ್ತವಾಗಿ ಸ್ವಲ್ಪ-ಸ್ವಲ್ಪವೇ ಹೇಳಿಕೊಂಡಂತಿದೆ.

ಲೇಖಕಿಯು ಅಡುಗೆಮನೆ ಎಂಬುದು ಬಿಡುಗಡೆ ಕಾಣಿಸುವ ಸ್ಥಳ ಎಂದಿರುವುದು ಹಾಗೂ ಅಲ್ಲಿಯೇ ತಮ್ಮ ಅಸ್ಮಿತೆಯನ್ನು ಕಂಡುಕೊಂಡಿರುವುದಾಗಿ ಹೇಳಿರುವುದು ಅಸ್ಮಿತೆಯನ್ನು ಅರಸಿಕೊಂಡು ಹೋಗುವ ಆಸ್ಪದವಿಲ್ಲದ ಅನಿವಾರ್ಯತೆ ಹಾಗೂ ಆಗಿನ ಕಾಲಮಾನದ ಪರಿಸ್ಥಿತಿ ಇರಬಹುದು ಎಂದೆನಿಸುತ್ತದೆ.

**-ಶ್ರೀದೇವಿ ಕೆ.**

**‘ಹೊಸ ಮನುಷ್ಯ’ ಓದುಗರೆಲ್ಲರಿಗೂ**
**ಬುದ್ಧ ಜಯಂತಿ ಶುಭಾಶಯಗಳು**



**ಪ್ರೊ. ಎನ್ ರಾಮು**
**ಮತ್ತು ಕುಟುಂಬ**
ಮೈಸೂರು

**‘ಹೊಸ ಮನುಷ್ಯ: ಓದುಗರೆಲ್ಲರಿಗೂ**
**ಬಸವಜಯಂತಿ ಶುಭಾಶಯಗಳು**



**ಗುರುಕುಲ ಎಜುಕೇಶನಲ್ ಚಾರಿಟಬಲ್ ಟ್ರಸ್ಟ್**
ತಿಪಟೂರು

**ಹೊಸ ಮನುಷ್ಯ ಓದುಗರೆಲ್ಲರಿಗೂ**
**ರಂಜಾನ್ ಹಬ್ಬದ ಶುಭಾಶಯಗಳು**



**ಎಂ. ಚಂದ್ರಶೇಖರ ಪ್ರತಿಷ್ಠಾನ**
**# ೭೨ 'ಸರ್ವೋದಯ', ಪ್ರೊ. ಎ.ಆರ್, ಕೃಷ್ಣಶಾಸ್ತ್ರಿ ರಸ್ತೆ**
**ಬಸವನಗುಡಿ, ಬೆಂಗಳೂರು-೫೬೦೦೦೪**

## ತಿಂಗಳ ಕೊನೆಯ ಸಾಲುಗಳು




**ಶುಭಾಶಯಗಳೊಂದಿಗೆ,**

**ಆರ್, ಉಮೇಶ್ ಅಂಡ್ ಅಸೋಸಿಯೇಟ್ಸ್**
**ಲೆಕ್ಕ ಪರಿಶೋಧಕರು, ಮೈಸೂರು**
ಸಂಪರ್ಕ: ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor,
'Hosa Manushya', 'HIG-5, 'Nudi', Kallahalli Extension,
Vinoba Nagara, Shivamogga -577204( Karnataka)